ಕನ್ನಡ ಮಾಧುರ್ಯ

(An Intermediate Course Reader in Kannada)



ಲೇಖಕರು

ಎಮ್.ಎನ್. ಲೀಲಾವತಿ

ಭಾರತೀಯ ಭಾಷಾ ಸಂಸ್ಥಾನ

ಮೈಸೂರು

ಕನ್ನಡ ಮಾಧುರ್ಯ

(An Intermediate Course Reader in Kannada)

Central Institute of Indian Languages
Publication No. 519

ಕನ್ನಡ ಮಾಧುರ್ಯ

(An Intermediate Course Reader in Kannada)

ಲೇಖಕರು

ಎಮ್. ಎನ್. ಲೀಲಾವತಿ

ಭಾರತೀಯ ಭಾಷಾ ಸಂಸ್ಥಾನ

ಮೈಸೂರು

Kannada Madhurya
(An Intermediate Course Reader in Kannada)
Author
M.N. Leelavathi

First Published | *June 2004* / *Jesta 1926*

Prof. Udaya Narayana Singh
Director
Central Institute of Indian Languages
Manasagangotri, Mysore – 570 006, INDIA

Phone	0091/ 0821–2515820 (Director)	Pabx	0091/ 0821–2515558
Telex	0846-268 CIIL IN	Grams	BHARATI
E-mail	udaya@ciil stpmy soft net (Director)	Fax	0091/0821-2515032
	bhasha@sancharnet in	Website	http://www.ciil.org

To contact Head, Publications: **Dr. Sam Mohan Lal**
E mail: mohan@ciil stpmy soft net
ciil@sancharnet in

ISBN-81-7342-124-2

Price: Rs 100-00 (US $ 05 00)

Published by Prof. Udaya Narayana Singh, Director
Central Institute of Indian Languages, Mysore
Printed by Mr. S.B. Biswas, Manager
CIIL Printing Press, Manasagangotri, Mysore-570 006, India
Cover Design: Mr. H. Manohar

ಪರಿವಿಡಿ

FOREWORD

Disciplines merge, and then converge. Disciplines also emerge. Merger of disciplines could be best instantiated by what was once nicknamed as 'hyphenated' linguistics (classical cases like 'Socio-linguistics' and 'Psycho-linguistics' provide good examples, the latest being 'Geo-linguistics' growing on the ashes of what was once recognized as 'Dialect geography'). These compounded disciplines show signs of merger very clearly as the stitches are quite visible. It takes long time to drop the hyphens and get more integrated. However, practitioners of these disciplines had their own dogma and learning history because of which they would usually try to push (or pull) the conjoined words (and worlds) apart (so much so that separate approaches would emerge).

But in the history of language sciences, several disciplines have emerged and have made their mark. They have emerged through a longer process of being together in a mutually beneficial manner. In hard-core areas, Phonetics and Semantics are two classical examples. In applied language science, Language Teaching & Testing is by far the best example of this kind. Here too, one has seen ideas emanating from different disciplines and converging to create a common base. Some areas in Linguistics had always provided attractive meeting grounds for scholars with varied interests to work on. Some others emerged, but got sidelined again. (For instance, the once popular, Morphology, which bounced back as Word Formation, came up again as a point of focus with its original title) However, there have also been disciplines which grew out of linguistics or from dissatisfaction of it, but later assumed a much bigger canvas large enough to involve people who would like to be miles away from grammar. The emergence of Semiotics with Saussure, later practised as Semiology by modern greats as Rolland Barthes is a case in hand.

The areas such as Language Teaching always attracted the faculty at the Central Institute of Indian Languages, and as a result, a lot of interesting materials got produced. The Intermediate Course in Kannada has been produced in the same series by the Southern Regional Language Centre of the Institute. They cover a wide range of writing styles used in

the language so that both teachers and second language learners using them benefit from the lessons. The texts used here are not merely instances of ideal writing styles, they are also used to teach certain grammatical patterns and lexical coinages.

The language teaching materials produced by the Institute have so far been tried out through a series of 10 months Intensive Training Programme currently offered in the seven regional centres of the Institute at three levels: Basic, Intermediate and Advanced courses. The present book is suitable to be used not only for such language learners who are to be taught as a part of our programme, but also for those who have had introduction to the language through a formal system, and yet have not had chance to go beyond the basics.

I congratulate the teachers who have used and perfected the material as much as the author, Dr.M.N.Leelavathi . The suggestions, comments, criticisms from all those who may use this teaching material will be most welcome.

Udaya Narayana Singh

Place : Mysore
Date : 10.06.2004

Acknowledgement

I thank the following writers/copyright holders for giving permission to include their copyrighted poems in this book.

1. Prof. Vaman Bendre	-beLagu (by Dr. Dattatreya Ramachandra Bendre)
2. Prof. G.S. Shivarudrappa	-jaDe
3. Prof. Nisar Ahmad	-amma, aacaara, naanu
4. Prof. Siddalingaiah	-ambeeDkar

I am thankful to the authorities of the Central Institute of Indian Languages, Mysore for assigning this work to me.

I am heavily indebted to **Dr. V. Gnanasundaram,** former Professor – Cum – Deputy Director, Central Institute of Indian Languages, Mysore for his guidance and supervision of this work.

I am grateful to **Smt. B. SyamalaKumari,** Reader-Cum-Research Officer, Central Institute of Indian Languages, Mysore for her unfailing patience and incisive but constructive remarks which helped me in presenting this book in this form.

I am also thankful to **Dr. K. Ramasamy**, Professor-Cum- Deputy Director, C.I.I.L who was patient enough to spare sometime for me whenever I wanted some discussions during the preparation of this book.

My gratitude also goes to **Sri. S.S. Yadurajan**, my colleague who patiently reviewed the manuscript and made constructive suggestions.

I am extremely grateful to my colleagues in the Publication and Press Departments of our Institute for neatly bringing out this book.

I owe a deep sense of gratitude to my mother **Smt. Aravindamma** for her constant support and encouragement in all my academic pursuits.

M.N. LEELAVATHI

Introduction

This book 'An Intermediate Course in Kannada' is meant for the second stage of the 10 month language training programme in Kannada of Southern Regional Language Centre of the Central Institute of Indian Languages. The Kannada Teacher Trainees having completed the intensive training in 'Basic Course' for 450 hours following the structurally controlled and graded lessons, are slowly exposed to structure controlled free writing in the language. The materials in this book still follow a gradation as per usual norms of educational principles namely i. simple to complex ii. known to unknown and iii. general to specific. No conscious attempt has been made to use only one particular type of sentence or vocabulary. Even then there is a steady progression from lesson 1 to 20. At the end of this second stage of training, the trainees will be able to achieve the following objectives.

i. to converse freely with teachers, fellow trainees and native speakers on a variety of topics.

ii. to read and comprehend materials presented in standard written language. The materials include pamphlets, booklets, newspapers, periodicals, short stories, essays etc.

iii. to enrich the learners' repertoire of words.

iv. to write free composition on a variety of topics.

In a nutshell the Intermediate Course Reader is intended to be a sort of a bridge course which enables the learner to slowly move from the structurally and educationally graded materials to advanced free writing materials by established writers in the language which constitute the last phase of the 10 month training programme.

This book contains 20 lessons out of which, 5 of them are poems from different poets of Modern times. In the selection of poems subject matter, simplicity and style and poetic effect were kept in mind. The

content utilized for reinforcement of structures and introduction of new words included cultural, historical, geographical, literary, social and political aspects of Karnataka. Attention has been paid to present variety and also to include an interest in the learner to know more and more about Karnataka and its people.

At the end of each lesson, the new lexical items have been glossed in the order of their occurrence in the text. For every new word, meaning has been given in English. Wherever such a word occurs whose synonym has already appeared in this book, that synonym is given as the meaning.

In most of the contexts meanings given are true to the context but wherever necessary, one or more additional meanings have also been provided especially if they are likely to contribute to either a sharper understanding of the text, or to establish helpful relationship between the different meanings of a word. As far as possible an attempt is made to use new vocabulary in the text in a way that the learner can get its meaning exploiting the clues provided by the neighbouring words in the sentence as well as by its context.

Variety of exercises are given to each lesson. Exercises are intended to test comprehension, recollection of what has been read in the lesson and also to give practice in the use of vocabulary build up. An exercise common to almost all lessons is making use of words in sentences. Another exercise is on derivation. This exercise exposes the learner to different kinds of word formation, from one part of speech to another. Yet another type of word building with word discrimination to exploit rich possibilities of suffixation and prefixation and compounding processes. The main purpose throughout the book is, however, to help the learner add substantially to his word hoard.

Exercises contain both objective and open ended types. The author has also provided exercises for writing skills as well as translation.

The book contains an index of words alphabetically arranged.

Even though this book is prepared keeping in mind the teacher trainees of Southern Regional Language Centre, it could be used meaningfully by any Kannada learner who has acquired the basic structural patterns and vocabulary of the language and would like to enrich their Kannada.

Constructive suggestions for the improvement of this book are welcome.

M.N. LEELAVATHI

1. ಬಲಮುರಿ

ಚೆಲುವ ಕನ್ನಡ ನಾಡಿನ ಸುಂದರ ತಾಣಗಳಲ್ಲಿ ಬಲಮುರಿಯೂ ಒಂದು. ಬಲಮುರಿ ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾವೇರಿ ನದಿ ಸೃಷ್ಟಿಸಿದ ಒಂದೇ ಹೆಸರಿನ ಎರಡು ಸುಂದರ ಪ್ರವಾಸಿ ಕೇಂದ್ರಗಳು.

ಕೊಡಗು ಜಿಲ್ಲೆಯ ಮೂರ್ನಾಡಿನ ಹತ್ತಿರ ಇರುವ ಬಲಮುರಿ ಕೊಡವರ ಪಾಲಿಗೆ ಪುಣ್ಯ ಸ್ಥಳ. ಹಿಂದೆ ಬಲಮುರಿಗೆ `ವಲಂಪುರಿ' ಎಂಬ ಹೆಸರು ಇತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ವಲಂಪುರಿ ಹೇಗೆ ಬಲಮುರಿ ಆಯಿತು ಎಂಬುದಕ್ಕೆ ಒಂದು ಕತೆಯೇ ಇದೆ.

ವಲಂಪುರಿಯನ್ನು ಆಳುತ್ತಿದ್ದ ದೇವಕಾಂತ ಮಹಾರಾಜರು ಒಮ್ಮೆ ತಮ್ಮ ಕುಲದೇವತೆಯಾದ ಕಾವೇರಿಯನ್ನು ಕುರಿತು ಪ್ರಾರ್ಥಿಸಿ ತಮ್ಮ ನಾಡಿಗೂ ಬರುವಂತೆ ಕೋರಿಕೊಂಡರಂತೆ. ಇವರ ಪ್ರಾರ್ಥನೆಗೆ ಓಗೊಟ್ಟ ಕಾವೇರಿ ತಲಕಾವೇರಿಯಿಂದ ಭಾಗಮಂಡಲಕ್ಕೆ ಹರಿದು ಅಲ್ಲಿಂದ ಮುಂದೆ ಸಾಗುವಾಗ ವಲಂಪುರಿಗೂ ಬರಲು ಒಪ್ಪಿದಳಂತೆ. ಕಾವೇರಿಯನ್ನು ಎದುರುಗೊಳ್ಳಲು ದೇವಕಾಂತ ಮಹಾರಾಜರು, ಅವರ ಪರಿವಾರದವರು ಮತ್ತು ಪ್ರಜೆಗಳು ಕಾಯುತ್ತಿದ್ದರು. ಆಗ ದಿಢೀರನೆ ಹರಿದು ಬಂದ ಕಾವೇರಿಯ ರಭಸಕ್ಕೆ ಅಲ್ಲಿ ಕಾಯುತ್ತಾ ನಿಂತಿದ್ದ ಹೆಂಗಳೆಯರ ಸೀರೆಯ ಸೆರಗು ಹಾಗೂ ನೆರಿಗೆ ಬಲಬದಿಗೆ ಹಾರಿ ಹೋಗಿ ಹಿಂದಕ್ಕೆ ಸರಿಯಿತಂತೆ. ಇದರಿಂದಾಗಿ ಕೊಡವ ಜನಾಂಗದ ಹೆಂಗಳೆಯರು ಇಂದಿಗೂ ತಮ್ಮ ಸೀರೆಯ ನೆರಿಗೆಯನ್ನು ಹಿಂದಕ್ಕೆ ಬಿಟ್ಟು ಸೀರೆಯ ಒಂದು ಕೊನೆಯನ್ನು ಬೆನ್ನಿನ ಮೇಲಿಂದ ಹಾಯಿಸಿ ಬಲಗಡೆಗೆ ಬಿಗಿಯಾಗಿ ಕಟ್ಟುತ್ತಾರೆ. ಬಲಬದಿಗೆ ಸೀರೆಯ ನೆರಿಗೆ ತಿರುಗಿಕೊಂಡಿದ್ದರಿಂದ ಈ ಸ್ಥಳಕ್ಕೆ ಬಲಮುರಿ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ.

ಕೊಡಗಿನ ಬಲಮುರಿಯು ತನ್ನ ಸುತ್ತಮುತ್ತಲಿನ ಹಸಿರು ವನರಾಜಿಯಿಂದ ನಯನ ಮನೋಹರವಾಗಿದೆ. ಇಲ್ಲಿನ ಜಲವೈಭವ ಪ್ರವಾಸಿಗರ ಮನವನ್ನು ಸೂರೆಗೊಳ್ಳುತ್ತದೆ. ಇಲ್ಲಿ ಅಗಸ್ತ್ಯ ಮುನಿಗಳಿಂದ ಪ್ರತಿಷ್ಠಾಪಿಸಲ್ಪಟ್ಟ ಅಗಸ್ತ್ಯೇಶ್ವರ ದೇವಾಲಯ ಇದೆ. ಅಲ್ಲದೆ ಕಾವೇರಿ ತೀರ್ಥೋದ್ಭವದ ಸಂದರ್ಭದಲ್ಲಿ ತಲಕಾವೇರಿಗೆ ಹೋಗಲು ಸಾಧ್ಯವಾಗದವರು ಬಲಮುರಿಯ ಕಾವೇರಿಯಲ್ಲಿ ಸ್ನಾನ ಮಾಡಿ ಪುನೀತರಾಗುತ್ತಾರೆ. ತುಲಾಸಂಕ್ರಮಣದಂದು ಬಲಮುರಿ ವಿಶಿಷ್ಟ ಸಂಭ್ರಮದಿಂದ ಕಂಗೊಳಿಸುತ್ತದೆ. ಕೊಡವರಿಗೆ ತಲಕಾವೇರಿಯಷ್ಟೇ ಪವಿತ್ರವಾದ ಸ್ಥಳ ಬಲಮುರಿ.

ಮೈಸೂರು–ಬೆಂಗಳೂರು ಹೆದ್ದಾರಿಯ ಮೂಲಕ ಕೃಷ್ಣರಾಜಸಾಗರಕ್ಕೆ ಹೋಗುವ ಮಾರ್ಗದಲ್ಲಿ ಸಿಗುವ ಬಲಮುರಿ ಕಾವೇರಿ ಜಲಧಾರೆಯ ಸೌಂದರ್ಯಕ್ಕೆ ಹೆಸರುವಾಸಿ. ಇಲ್ಲಿ ಕಾವೇರಿ ಸುಮಾರು 550 ಮೀಟರ್ ಉದ್ದ, 5 ½ ಮೀಟರ್ ಎತ್ತರದ ಕಟ್ಟೆಯಿಂದ ಕೆಳಕ್ಕೆ ರಭಸದಿಂದ ಭೋರ್ಗರೆಯುತ್ತಾ ಧುಮುಕುತ್ತಾಳೆ. ಹೀಗೆ ಧುಮ್ಮಿಕ್ಕಿ ಬೆಳ್ನೊರೆಯ ಹೊಳೆಯನ್ನೇ ಹರಿಸಿ ಬಲಮುರಿಯನ್ನು ನಯನ ಮನೋಹರವಾಗಿಸಿದ್ದಾಳೆ. ಇಲ್ಲಿ ಕಾವೇರಿಯ ಸೊಬಗಿನ ನರ್ತನವನ್ನು ಪ್ರವಾಸಿಗರು ನೋಡಿ ಆನಂದಿಸುತ್ತಾರೆ. ಕಾವೇರಿಯ ಸೊಬಗಿಗೆ ಹೊಯ್‌ಕಯ್ ಆಗಿ ಸುತ್ತಲಿನ ಕಬ್ಬಿನ ಗದ್ದೆಗಳು ಪರಿಸರಕ್ಕೆ ಅನುಪಮ ಸೌಂದರ್ಯವನ್ನು ನೀಡಿವೆ.

ಮೋಹಕ ಚೆಲುವಿನ ತಾಣಗಳಾದ ಬಲಮುರಿಗಳೆರಡಕ್ಕೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪ್ರವಾಸಿಗರು ಲಗ್ಗೆಹಾಕುತ್ತಿದ್ದಾರೆ. ಹೀಗೆ ಕಾವೇರಿ ಕರ್ನಾಟಕದಲ್ಲಿ `ಬಲಮುರಿ' ಎಂಬ ಒಂದೇ ಹೆಸರಿನಲ್ಲಿ ಎರಡು ಪ್ರವಾಸೀಧಾಮಗಳನ್ನು ಸೃಷ್ಟಿಸಿ ತನ್ನ ವಿಭಿನ್ನ ಸೌಂದರ್ಯದಿಂದಾಗಿ ವಿಶಿಷ್ಟತೆಯನ್ನು ಪಡೆದುಕೊಂಡಿದೆ.

ಕಠಿಣಪದಗಳ ಅರ್ಥ

ಚೆಲುವ	–	Beautiful
ತಾಣ	–	spot, place
ಸೃಷ್ಟಿಸು	–	to create
ಪ್ರವಾಸಿಕೇಂದ್ರ	–	tourist centre
ಆಳು	–	to rule
ಪ್ರಾರ್ಥಿಸು	–	to pray
ಕೋರಿಕೊಳ್ಳು	–	to request
ಒಗೊಡು	–	to respond
ಹರಿ	–	to flow
ಸಾಗು	–	to proceed
ಎದುರುಗೊಳ್ಳು	–	to receive, to welcome
ಪ್ರಜೆ	–	citizen
ದಿಢೀರನೆ	–	at once
ಹೆಂಗೆಳೆಯರು	–	ಹೆಂಗಸರು, ಸ್ತ್ರೀಯರು, women
ಸೆರಗು	–	decorated end of a saree, pallu
ನೆರಿಗೆ	–	pleat
ಬಲಬದಿ	–	ಬಲಗಡೆ, ಬಲಪಕ್ಕ, right side
ಹಾರಿಹೋಗು	–	to fly away
ಸರಿ	–	to move
ಕೊನೆ	-	end
ಹಾಯಿಸು	–	to pass it through
ಬಿಗಿಯಾಗಿ	–	tightly

ಕಟ್ಟು	–	to tie
ತಿರುಗಿಕೊಳ್ಳು	–	to turn itself
ಸುತ್ತಮುತ್ತಲು	–	surroundings
ವನರಾಜಿ	–	flora, foliage
ನಯನ ಮನೋಹರ	–	eye catching, beautiful
ಸೂರೆಗೊಳ್ಳು	–	to attract, to impress
ಕಂಗೊಳಿಸು	–	to attract the eye
ಜಲಧಾರೆ	–	stream of water
ಹೆಸರುವಾಸಿ	–	famous, well known
ಭೋರ್ಗರೆ	–	to roar
ಧುಮ್ಮಿಕ್ಕು	–	to fall in (like a cascade)
ಬೆಳ್ನೊರೆ	–	foam
ಹೊಯ್‌ಕಯ್	–	equal
ಕಬ್ಬಿನಗದ್ದೆ	–	sugarcane field
ಮೋಹಕ	–	enchanting
ಲಗ್ಗೆಹಾಕು	–	to attack
ವಿಭಿನ್ನ	–	different
ವಿಶಿಷ್ಟತೆ	–	distinctiveness

ಅಭ್ಯಾಸಗಳು

I. ಬಿಡಿಸಿ ಬರೆಯಿರಿ

ಅ. ಬರುವಂತೆ

ಆ. ಸೌಂದರ್ಯದಿಂದಾಗಿ

ಇ. ಸುತ್ತಮುತ್ತಲಿನ

ಈ. ಒಪ್ಪಿದಳಂತೆ

ಕ. ಸಾಧ್ಯವಾಗದವರು ಗ. ಸಾಗುವಾಗ

ಚ. ತುಲಾಸಂಕ್ರಮಣದಂದು ಜ. ತೀರ್ಥೋದ್ಭವ

II. ಕೂಡಿಸಿ ಬರೆಯಿರಿ

ಅ. ಕುಲದೇವತೆ + ಆದ . . . .

ಆ. ಓ + ಕೊಡು . . . .

ಇ. ಬಂದಿತು + ಎಂದು . . . .

ಈ. ತಲಕಾವೇರಿ + ಅಷ್ಟೇ . . . .

ಕ. ನಾಡಿಗೆ + ಊ . . . .

ಗ. ಹೋಗು + ಅ . . . .

ಚ. ಚೆಲುವು + ಅ . . . .

III. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಇಂದಿಗೂ, ಬಿಗಿಯಾಗಿ, ಒಮ್ಮೆ, ಹತ್ತಿರ, ದಿಢೀರನೆ, ಕುರಿತು)

ಅ. ನಮ್ಮ ಮನೆಯ ....ಒಂದು ಸುಂದರ ಹೂದೋಟವಿದೆ.

ಆ. ನನಗೆ ನಿನ್ನನ್ನು ನೋಡಬೇಕೆನಿಸಿದೆ. ....ಬಂದು ಹೋಗು.

ಇ. ಗುಲಾಬಿ ಹೂವನ್ನು ....ಒಂದು ಪದ್ಯವನ್ನು ಬರೆಯಿರಿ.

ಈ. ನೀನು ....ಐದು ಲಕ್ಷ ಕೊಡು ಎಂದರೆ ನಾನು ಎಲ್ಲಿಂದ ತರಲಿ.

ಕ. ಹತ್ತು ವರ್ಷದ ಹಿಂದೆ ರವಿ ಹೇಳಿದ ಕತೆ .... ನನ್ನ ಮನಸ್ಸಿನಲ್ಲಿ ಉಳಿದಿದೆ.

ಗ. ಗೌರಿ ನನ್ನ ಕೈಯನ್ನು .... ಹಿಡಿದುಕೊಂಡಳು.

IV. ಆವರಣದಲ್ಲಿ ಕೊಟ್ಟಿರುವ ಕ್ರಿಯಾಪದದ ಸರಿಯಾದ ಕಾಲದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಸುಂದರ ಜೋಗದ ಜಲಪಾತಕ್ಕೆ ಪ್ರತಿದಿನವೂ ಸಾವಿರಾರು ಪ್ರವಾಸಿಗರು ....(ಲಗ್ಗೆಹಾಕು).

ಆ. ಮೈಸೂರನ್ನು .... ಒಡೆಯರ ವಂಶದ ಮಹಾರಾಜರ ಕುಲದೇವತೆ ಚಾಮುಂಡೇಶ್ವರಿ (ಆಳು).

ಇ. ಬೇಲೂರಿಗೆ 'ವೇಲಾಪುರಿ' ಎಂಬ ಹೆಸರು ಇತ್ತು ಎಂದು ಇತಿಹಾಸದಿಂದ ....(ತಿಳಿದುಬರು).

ಈ. ಭಾರತೀಯ ಭಾಷಾ ಸಂಸ್ಥಾನ ತನ್ನ ಆವರಣದಲ್ಲಿರುವ ಹಸಿರು ವನರಾಜಿಯಿಂದ ವಿಶಿಷ್ಟ ಸೊಬಗನ್ನು .... (ಪಡೆದುಕೊಳ್ಳು).

ಕ. ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರಕವಿ ಕುವೆಂಪು ಅವರಿಗೆ ಗೌರವ ಡಾಕ್ಟರೇಟ್ ....(ನೀಡು).

ಗ. ಎಡಗಡೆ ಇಟ್ಟಿದ್ದ ವಿಗ್ರಹ ಬಲಬದಿಗೆ ....(ಸರಿ).

ಚ. ಐವತ್ತು ವರ್ಷಗಳ ಹಿಂದೆ ಈ ಜಾಗದಲ್ಲಿ ಒಂದು ಶಾಲೆ ....(ಇರು).

V. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ

ಅ. ರವಿ ರಾಜೀವನಿಗೆ ಪುಸ್ತಕವನ್ನು ಕೊಟ್ಟ.

(convert into passive sentence)

ಆ. ನೀಲಿಮಾ ಹೊಸ ಸೀರೆ ಉಟ್ಟಳು.

(convert into reflexive sentence)

ಇ. ಬಿ.ಶಾಮಲಕುಮಾರಿ ಬಿ. ಶಾಮಲಕುಮಾರಿಯ ಮನೆಗೆ ಹೋದರು.

(use anaphoric pronoun)

ಈ. ಅವರವರು ಅವರವರ ಕೆಲಸಗಳನ್ನು ಅವರೇ ಮಾಡಿಕೊಳ್ಳಬೇಕು.

(use anaphoric pronouns wherever necessary)

VI. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದ ಮೇರೆಗೆ ವಾಕ್ಯಗಳನ್ನು ಕೂಡಿಸಿ

ಅ. i. ನೀವು ಹೆಣ್ಣು ನೋಡುವುದಕ್ಕೆ ಹೋಗ್ತೀರಿ.

ii. ನನ್ನನ್ನೂ ಕರೆದುಕೊಂಡು ಹೋಗಿ.

(combine using adverbial clause of time)

ಆ. i. ಈಗ ಒಬ್ಬಳು ಹುಡುಗಿ ಬಂದಳು.

ii.ಅವಳು ನಿಮ್ಮ ತಂಗೀನಾ?

(combine using relative participle)

ಇ. i. ರವಿ ಮೂರು ರೂಪಾಯಿ ಕೊಡುತ್ತಾನೆ.

ii.ವರ್ತಮಾನ ಪತ್ರಿಕೆ ಕೊಂಡುಕೊಳ್ಳುತ್ತಾನೆ.

(combine using verbal participle)

ಈ. i. ಅವಳು ಮಾತಾಡುತ್ತಾಳೆ.

ii.ನೀನು ಮಾತಾಡಲ್ಲ.

(Combine using adverbial clause of manner)

VII. ಕೆಳಕಂಡ ಪದ/ಪದಪುಂಜಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ತಾಣ | ಆ. ಹೆಂಗೆಳೆಯರು

ಇ. ಪುಣ್ಯ | ಈ. ಎದುರುಗೊಳ್ಳು

ಕ. ಜನಾಂಗ | ಗ. ಸೂರೆಗೊಳ್ಳು

ಚ. ಬೆಳ್ಳೂರೆ ಜ. ಇಂದಿಗೂ

ಟ. ಇದರಿಂದಾಗಿ ಡ. ಅಲ್ಲದೆ

VIII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕೊಡಗಿನ ಬಲಮುರಿಗೆ 'ಬಲಮುರಿ' ಎಂಬ ಹೆಸರು ಬರಲು ಕಾರಣವೇನು?

ಆ. ಕೊಡಗಿನ ಬಲಮುರಿಯ ವೈಶಿಷ್ಟ್ಯವೇನು?

ಇ. ಮೈಸೂರಿನ ಬಳಿ ಇರುವ ಬಲಮುರಿ ಕೊಡಗಿನ ಬಲಮುರಿಗಿಂತ ಯಾವ ರೀತಿಯಲ್ಲಿ ಭಿನ್ನವಾಗಿದೆ?

ಈ. ಎರಡೂ ಬಲಮುರಿಗಳಲ್ಲಿ ಕಂಡುಬರುವ ಸಮಾನ ಅಂಶಗಳಾವುವು?

IX. ನಿಮ್ಮ ರಾಜ್ಯದಲ್ಲಿ ನದೀತೀರದಲ್ಲಿರುವ ಒಂದು ಪ್ರೇಕ್ಷಣೀಯ ಸ್ಥಳವನ್ನು ಕುರಿತು ಬರೆಯಿರಿ

X. ಕನ್ನಡಕ್ಕೆ ಭಾಷಾಂತರಿಸಿ

Long long ago, when the world was young, all the people in it were happy. It was the time before trouble had come into the world.

The people were young and gay. They never got ill and they never grew old. They were all happy and friendly. They played all the day and they never quarelled.

There were no tools, neither were there any weapons; for men did not need tools to work with, neither did they want weapons to fight with. All the iron and gold

and other metals were burried deep under the ground; and no one wanted to dig them out, for they did not need them.

What a good time all the young people had! they lived as the birds do, singing all the day and eating the delicious fruits of the trees whenever they were hungry.

2. ಜಾತ್ರೆ

ವರ್ಷಕ್ಕೊಮ್ಮೆ ಪ್ರತಿ ಊರಿನಲ್ಲಿಯೂ ಸಾಮಾನ್ಯವಾಗಿ ನಡೆಯುವಂತಹ ಅನೇಕ ಜಾನಪದ ಅಂಶಗಳಿಂದ ಕೂಡಿದ ಸಂಪ್ರದಾಯವನ್ನು ಒಳಗೊಂಡ ಒಂದು ವಿಶೇಷ ಸಂದರ್ಭ ಜಾತ್ರೆ. ಸಂಸ್ಕೃತದ `ಯಾತ್ರಾ' ಎಂಬ ಪದವೇ ಕನ್ನಡದಲ್ಲಿ `ಜಾತ್ರೆ' ಎಂದಾಗಿದೆ. ಜಾತ್ರೆಗಳನ್ನು ಅವುಗಳು ನಡೆಯುವ ಊರು ಮತ್ತು ಉತ್ಸವ ನಡೆಯುವ ದೇವರ ಹೆಸರಿನಿಂದಲೇ ಕರೆಯುತ್ತಾರೆ. ಜಾತ್ರೆಗಳು ಆಯಾ ವರ್ಷದ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟವಾದ ಅವಧಿಯಲ್ಲಿ ವಿಜೃಂಭಣೆಯಿಂದ ನಡೆಯುತ್ತವೆ.

ಜಾತ್ರೆ ಎಂದ ಮೇಲೆ ಜನಗಳ ಗುಂಪು ಇದ್ದೇ ಇರುತ್ತದೆ. ಜಾತ್ರೆಯ ಮುಖ್ಯ ಬಂಡವಾಳವೇ ಜನ. ದೂರ ದೂರದ ಊರುಗಳಿಂದ ಜನರು ನಾನಾ ಕಾರ್ಯೋದ್ದೇಶಗಳಿಂದ ಒಂದೆಡೆ ಕಲೆಯುತ್ತಾರೆ. ಇದೊಂದು ಬಗೆಯ ವಿಶೇಷ ಹಬ್ಬವೂ ಕೂಡ. ಈ ಸಂದರ್ಭದಲ್ಲಿ ಜನರು ಪರಸ್ಪರ ಕಲೆತು ತಮ್ಮ ನಡುವಣ ಸಂಪರ್ಕವನ್ನು ಹೆಚ್ಚಿಸಿಕೊಳ್ಳಲು ಜಾತ್ರೆಗಳು ಸಹಾಯಕವಾಗುತ್ತವೆ. ಜಾತ್ರೆಗಳಲ್ಲಿ ಜನರ ಗುಂಪು ಅಧಿಕವಾಗಿರುವುದರಿಂದ ವ್ಯಾಪಾರಿಗಳಿಗೆ ಅದೊಂದು ಒಳ್ಳೆಯ ಕಾಲ. ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ವ್ಯಾವಹಾರಿಕ ಪ್ರಾಮುಖ್ಯವುಳ್ಳವಾಗಿ ಆಯಾ ಸ್ಥಳದ ವಿಶೇಷ ಪದಾರ್ಥಗಳು ವಿಲೇವಾರಿಯಾಗಲು ಜಾತ್ರೆಗಳು ಸಹಾಯ ಮಾಡುತ್ತವೆ.

ಕರ್ನಾಟಕದ ಪ್ರಸಿದ್ಧ ಜಾತ್ರೆಗಳೆಂದರೆ ಶಿರಸಿಯ ಮಾರಿಕಾಂಬಾ ಜಾತ್ರೆ, ಸೌಂದತ್ತಿಯ ಎಲ್ಲಮ್ಮನ ಜಾತ್ರೆ, ಬಾದಾಮಿಯ ಬನಶಂಕರಿ ಜಾತ್ರೆ, ಹಾಸನದಲ್ಲಿ ನಡೆಯುವ ಹಾಸನಾಂಬ ಜಾತ್ರೆ, ಎಡಯೂರು ಸಿದ್ಧಲಿಂಗೇಶ್ವರ ಜಾತ್ರೆ, ಚುಂಚನಕಟ್ಟೆ ಜಾತ್ರೆ, ಕಪ್ಪಡಿ ಜಾತ್ರೆ, ಮುಡುಕು ತೊರೆ ಜಾತ್ರೆ, ಮೂಗೂರು ತ್ರಿಪುರಸುಂದರಿ ಜಾತ್ರೆ, ಮಹದೇಶ್ವರ ಬೆಟ್ಟದ ಜಾತ್ರೆ, ನಂಜನಗೂಡು ಜಾತ್ರೆ, ಶ್ರೀರಂಗಪಟ್ಟಣದ ಜಾತ್ರೆ, ಬನ್ನೂರು ಹೇಮಾದ್ರಮ್ಮನ ಜಾತ್ರೆ ಮುಂತಾದವು.

ಜಾತ್ರೆ ಸಾಮಾನ್ಯವಾಗಿ 1 ರಿಂದ 10 ದಿನಗಳವರೆಗೆ ನಡೆಯುತ್ತದೆ. ಈ ಸಂದರ್ಭದಲ್ಲಿ ಅನೇಕ ಬಗೆಯ ವ್ಯಾಪಾರಗಳು ನಡೆಯುತ್ತವೆ. ವಾಸ್ತವವಾಗಿ ಜನಪದರು ತಾವು ಬೆಳೆದ ದವಸಧಾನ್ಯಗಳನ್ನು ಮಾರಾಟ ಮಾಡಿ ತಮ್ಮ ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳನ್ನು ಕೊಳ್ಳುವುದು ಸರ್ವಸಾಮಾನ್ಯ.

ಜಾತ್ರೆಗಳಲ್ಲಿ ಅನೇಕ ಬಗೆಗಳಿವೆ. ಅವುಗಳಲ್ಲಿ ದನದ ಜಾತ್ರೆ ಮುಖ್ಯವಾದದ್ದು. ದನಗಳ ವ್ಯಾಪಾರಕ್ಕೆ ಪ್ರಸಿದ್ಧವಾದ ಜಾತ್ರೆಗಳಿರುವಂತೆಯೇ ಕೋಣಗಳ ವ್ಯಾಪಾರಕ್ಕೂ ಹೆಸರಾದ ಜಾತ್ರೆಗಳೂ ಇವೆ. ದನಗಳನ್ನು ಕೊಳ್ಳುವುದಕ್ಕೂ ಮಾರುವುದಕ್ಕೂ ಅತಿ ದೂರದಿಂದಲೂ ಜನ ಬರುವುದುಂಟು.

ಜಾತ್ರೆಯ ಸಂದರ್ಭದಲ್ಲಿ ಕೆಲವು ವಿಶೇಷ ಜನಪದ ಸಂಪ್ರದಾಯಗಳು ಆಚರಣೆಯಲ್ಲಿವೆ. ಅವುಗಳಲ್ಲಿ ಮಡೆಹೊರುವುದು, ಬಾಯಿಬೀಗ ಹಾಕಿಸಿಕೊಳ್ಳುವುದು, ಕೊಂಡ ಹಾಯುವುದು, ಸಿಡಿ ಆಡುವುದು ಇತ್ಯಾದಿಗಳು ಮುಖ್ಯವಾದವು. ಸಾಮಾನ್ಯವಾಗಿ ಹೊಸದಾಗಿ ಮದುವೆಯಾದವರು ಮತ್ತು ಮಡೆ ಹೊರುತ್ತೇನೆಂದು ಹರಕೆ ಹೊತ್ತವರು ಈ ಸಂದರ್ಭದಲ್ಲಿ ಭಾಗಿಗಳಾಗುತ್ತಾರೆ. ಬಾಯಿಬೀಗ ಹಾಕಿಸಿಕೊಳ್ಳುವುದಾಗಿ, ಕೊಂಡಹಾಯುವುದಾಗಿ, ಸಿಡಿ ಆಡುವುದಾಗಿ ಹರಕೆಹೊತ್ತವರು ಆ ದಿನವೆಲ್ಲಾ ಉಪವಾಸವಿದ್ದು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಊರಿನ ಮುಖ್ಯಬೀದಿಯಿಂದ ದೇವಸ್ಥಾನದವರೆಗೆ ನಡೆಮಡಿಯನ್ನು ಹಾಸಿ ಹೊಸದಾಗಿ ಮದುವೆಯಾದವರು ಮತ್ತು ಹರಕೆ ಹೊತ್ತವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ದೇವರ ಉತ್ಸವ ಮೂರ್ತಿಯನ್ನು ಹೊತ್ತವರು ಮುಂದೆ ಹೋಗುತ್ತಿರುತ್ತಾರೆ. ಹೀಗೆ ರಾತ್ರಿ ಹೊರಟ ಮೆರವಣಿಗೆ ದೇವಸ್ಥಾನವನ್ನು ಬೆಳಗಿನಜಾವ ಸೇರುತ್ತದೆ.

ತೇರನ್ನು ಎಳೆಯುವುದು ಈ ಸಂದರ್ಭದ ಒಂದು ವಿಶೇಷ ಅಂಶವಾಗಿದೆ. ತೇರನ್ನು ಅತ್ಯಂತ ಸೊಗಸಾಗಿ ಅಲಂಕರಿಸಿ ಅದರಲ್ಲಿ ದೇವರ ಉತ್ಸವಮೂರ್ತಿಯನ್ನು ಕೂರಿಸಿರುತ್ತಾರೆ. ದೇವಸ್ಥಾನದಿಂದ ಊರಿನ ಪ್ರಮುಖ ಬೀದಿಗಳಲ್ಲಿ ಸ್ವಲ್ಪ ದೂರ

ಎಳೆಯುತ್ತಾರೆ. ಪ್ರಮುಖ ಬೀದಿಯ ಇಕ್ಕೆಲಗಳಲ್ಲೂ ನಿಂತ ಜನರು ಬಾಳೆಹಣ್ಣು ಮತ್ತು ದವನವನ್ನು ದೇವರಿಗೆ ಸಮರ್ಪಿಸಿ ನಮಸ್ಕರಿಸುತ್ತಾರೆ.

ಜಾತ್ರೆಯ ಸಂದರ್ಭದಲ್ಲಿ ವಿಶೇಷ ರೀತಿಯ ಅಂಗಡಿಗಳು, ಇತರ ಮನೋರಂಜನೀಯ ವಿಶೇಷಗಳು ಸೇರಿರುವುದು ಸಾಮಾನ್ಯ. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗಳು ಹೀಗೆ ಹಲವಾರು ವಿಶೇಷಗಳಿಂದ ಕೂಡಿರುತ್ತವೆ. ಇದು ಒಂದು ರೀತಿಯಲ್ಲಿ ಮನೋರಂಜನಾ ಕೇಂದ್ರವೂ ಹೌದು, ಪೂಜಾಕಾರ್ಯಗಳ ಕೇಂದ್ರವೂ ಹೌದು.

ವಿಶೇಷ ಬಗೆಯ ಜನಪದ ಕಲೆಗಳ ಪ್ರದರ್ಶನವು ಈ ಸಂದರ್ಭದಲ್ಲಿನ ಗಮನಾರ್ಹ ಅಂಶವಾಗಿದೆ. ಜನಪದ ನೃತ್ಯ, ಕೋಲಾಟ ಹಾಗೂ ವೇಷ ಭೂಷಣ-ಗಳಿಂದ ಅಲಂಕೃತವಾದ ಇತರ ಬಗೆಯ ಕುಣಿತಗಳಿಂದಲೂ ಜಾತ್ರೆ ರಂಜಕವಾಗಿರುತ್ತದೆ.

ಕಠಿಣಪದಗಳ ಅರ್ಥ

ಸಾಮಾನ್ಯವಾಗಿ	-	generally
ಸಂಪ್ರದಾಯ	-	tradition
ಒಳಗೊಳ್ಳು	-	to include
ಆಯಾ	-	that particular
ನಿರ್ದಿಷ್ಟ	-	particular
ಅವಧಿ	-	period
ವಿಜೃಂಭಣೆ	-	pomp
ಬಂಡವಾಳ	-	capital
ನಾನಾ	-	different

ಪರಸ್ಪರ -	one another, each other
ಕಲೆ -	to get together, to meet
ಧಾರ್ಮಿಕ -	religious
ಆರ್ಥಿಕ -	financial
ವ್ಯಾವಹಾರಿಕ -	commercial, practical
ಪ್ರಾಮುಖ್ಯ -	importance
ವಿಲೇವಾರಿ -	distribution
ದವಸಧಾನ್ಯ -	food grains
ಮಾರಾಟ -	sale
ಒಕ್ಕಲುತನ -	ವ್ಯವಸಾಯ, ಕೃಷಿ agriculture
ಸಲಕರಣೆ -	tool, implement, equipment
ದನ -	cattle
ಕೋಣ -	he buffalo
ಹೆಸರಾಗು -	to become famous
ಕೊಳ್ಳು -	ಕೊಂಡುಕೊಳ್ಳು, ಖರೀದಿಸು, to purchase
ಮಡೆಹೊರುವುದು -	Turmeric rice cooked in a new earthen pot with sacred water. This is offered to God by carrying the same on the head in a procession along with (the troup of) auspicious musical band.
ಬಾಯಿಬೀಗ -	A lock for the mouth consisting of wire, occasionally put on by the devotees of any sect who have taken on them a vow of silence.

ಕೊಂಡ ಹಾಯುವುದು	-	People who take a religious vow seeking God's blessings for their family will walk barefooted on the live charcoal.
ಸಿಡಿ	-	People who take a religious vow would hang from a tall pillar with iron hooks attached to their back, about 20 ft. high from the ground.
ಹರಕೆಹೊರು	-	to take an vow
ಉಪವಾಸ	-	fasting
ಪಾಲಿಸು	-	to follow
ಬೆಳಗಿನ ಜಾವ	-	early morning
ತೇರು	-	an idol car, a chariot
ಇಕ್ಕೆಲ	-	both the sides
ದವನ	-	a fragrant plant and its flower
ಬಗೆ	-	ವಿಧ, ರೀತಿ, type, variety

ಅಭ್ಯಾಸಗಳು

I. ಬಿಡಿಸಿ ಬರೆಯಿರಿ

ಅ. ಒಕ್ಕಲುತನ

ಆ. ಕಾರ್ಯೋದ್ದೇಶ

ಇ. ಬರುವುದುಂಟು

ಈ. ಹೊರುತ್ತೇನೆಂದು

ಕ. ಅಧಿಕವಾಗಿರುವುದರಿಂದ

ಗ. ಹೋಗುತ್ತಿರುತ್ತಾರೆ

ಚ. ಹೊರುವುದು

ಜ. ಒಂದೆಡೆ

II. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ವಾಸ್ತವವಾಗಿ, ಅತಿ, ನಡುವಣ, ಸಾಮಾನ್ಯವಾಗಿ, ಒಂದೆಡೆ, ದೂರದೂರದ, ಪರಸ್ಪರ, ವರೆಗೆ, ನಾನಾ, ಆಯಾ)

ಅ. ಅವರಿಬ್ಬರ .... ಮನಸ್ತಾಪಕ್ಕೆ ಕಾರಣ ನನಗೆ ಗೊತ್ತಿಲ್ಲ.

ಆ. .... ಅಲ್ಲಿ ನಡೆದದ್ದೇ ಬೇರೆ.

ಇ. ಅವತ್ತವತ್ತಿನ ಕೆಲಸಗಳನ್ನು ....ದಿನವೇ ಮಾಡಬೇಕು.

ಈ. ಅವಳಿಗೆ .... ಜಂಬ.

ಕ. ನಮ್ಮ ಮನೆಯಿಂದ ನಿಮ್ಮ ಮನೆಯ .... ಎರಡು ಫರ್ಲಾಂಗ್ ದೂರ ಇದೆ.

ಗ. ನವರಾತ್ರಿ ಹಬ್ಬದ ಸಮಯದಲ್ಲಿ .... ಊರುಗಳಿಂದ ಜನರು ಮೈಸೂರಿಗೆ ಬರುತ್ತಾರೆ.

ಚ. ಮದುವೆ ಮುಂತಾದ ಸಮಾರಂಭಗಳಲ್ಲಿ ಬಂಧು ಬಳಗದವರು .... ಸೇರುತ್ತಾರೆ.

ಜ. ನನ್ನ ಮನಸ್ಸಿನಲ್ಲಿ ....ಚಿಂತೆಗಳು ಇವೆ.

ಟ. ಅವರಿಬ್ಬರೂ .... ದ್ವೇಷಿಸುತ್ತಾರೆ.

ಡ. .... ಅವಳು ದುಬಾರಿ ಸೀರೆ ಉಡಲ್ಲ.

III. ಕೆಳಕಂಡವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಇಕ್ಕೆಲ	ಗ. ಕುಣಿತ
ಆ. ವಿಲೇವಾರಿ	ಚ. ಇತ್ಯಾದಿಗಳು
ಇ. ಇತರ	ಜ. ಎಂದಮೇಲೆ
ಈ. ಹಾಗೂ	ಟ. ಒಂದು ಬಗೆಯ
ಕ. ಇದೊಂದು	ಡ. ಒಂದುರೀತಿಯಲ್ಲಿ

ತ. ಎಂದರೆ ಪ. ಬೆಳಗಿನ ಜಾವ

ದ. ಭಾಗಿಯಾಗು ಬ. ಬೇಕಾಗುವ

IV. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ

ಅ. ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ.

(transform into present progressive)

ಆ. ಅವರು ಆಗಾಗ ನಮ್ಮ ಮನೆಗೆ ಬರುವುದುಂಟು.

(transform into present indefinite).

ಇ. ನವರಾತ್ರಿ ಹಬ್ಬದಲ್ಲಿ ಮನೆಮನೆಗಳಲ್ಲೂ ಬೊಂಬೆಗಳನ್ನು ಕೂರಿಸುತ್ತಾರೆ.

(transform into past perfect).

ಈ. ಮದುವೆಯಾಗುವವರು ಮಡೆ ಹೊರುತ್ತಾರೆ.

(transform into past indefinite)

V. ಟಿಪ್ಪಣಿ ಬರೆಯಿರಿ

ಅ. ಸಿಡಿ

ಆ. ಕೊಂಡಹಾಯುವುದು

VI. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಜಾತ್ರೆ ಎಂದರೇನು?

ಆ. ಕರ್ನಾಟಕದ ಪ್ರಸಿದ್ಧ ಜಾತ್ರೆಗಳಾವುವು?

ಇ. ಸಾಮಾನ್ಯವಾಗಿ ಜಾತ್ರೆಗಳು ಎಷ್ಟು ದಿನ ನಡೆಯುತ್ತವೆ?

ಈ. ಜಾತ್ರೆಯ ವೈಶಿಷ್ಟ್ಯವೇನು?

ಕ. ಮಡೆಹೊರುವುದು ಎಂದರೇನು?

ಗ. ಜಾತ್ರೆಯಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಾವುವು?

VII. ನೀವು ನೋಡಿದ ಒಂದು ಜಾತ್ರೆಯನ್ನು ಕುರಿತು ಬರೆಯಿರಿ

VIII. ಕನ್ನಡಕ್ಕೆ ಭಾಷಾಂತರಿಸಿ

Trees give us fruit to eat and firewood to burn. We build houses and make furniture with the wood of the trees. If the paper on which this book is printed could tell us its own story, it would perhaps tell you that once it was a tree on some hillside.

Trees not only supply us with many of the conveniences of our daily life, they support the life of living things. They help to replace oxygen in the atmosphere, which is constantly being used up.

We know from experience that trees cause rainfall. The leaves of trees breathe out a lot of water vapour into the atmosphere and it helps to make the air cool. The cool air over forests cools the rain clouds and helps to cause rain.

Are trees living things? Ofcourse, they are quite as much living as any other creature. They eat, drink, breathe as animals do. Trees also sleep at night as we do. They do have feelings. Wordsworth, the English poet wrote that every flower enjoys the air it breathes. Some plants such as `touch me not' fold their leaves when we touch them and seem to draw back from us. The Indian scientist J.C. Bose is said to have proved that trees and plants feel pleasure and pain as we do.

3. ಬಾಳೇಹಣ್ಣು

ಬಂಗಾರದ ಹೊದಿಕೆಯ ಬಹು ಸ್ವಾದಿಷ್ಟ ಹಣ್ಣು ಬಾಳೇಹಣ್ಣು. ರುಚಿಯ ಜೊತೆಗೆ ಪೌಷ್ಟಿಕಾಂಶಗಳನ್ನೂ ಒಳಗೊಂಡಿರುವುದರಿಂದ ಈ ಹೊನ್ನಿನ ಹಣ್ಣಿಗೆ ಚಿನ್ನದ ಮಹತ್ವವೂ ಬಂದಿದೆ. ವರ್ಷದ ಎಲ್ಲ ಕಾಲದಲ್ಲೂ ಸಿಗುವ ಬಾಳೇಹಣ್ಣು ಶ್ರೀಸಾಮಾನ್ಯನ ಮೆಚ್ಚಿನ ಹಣ್ಣು.

ಬಾಳೆ ಉಷ್ಣಪ್ರದೇಶದ ಬೆಳೆ. ಜಗತ್ತಿನ ಅನೇಕ ಭಾಗಗಳಲ್ಲಿ ಬಾಳೆಯನ್ನು ಬೆಳೆಯುತ್ತಾರೆ. ಮಧ್ಯ, ದಕ್ಷಿಣ ಅಮೆರಿಕಗಳಲ್ಲಿ ಬಾಳೆಯ ವ್ಯವಸಾಯ ಬಹಳ ಮುಂದಿದೆ. ಬ್ರೆಜಿಲ್, ಈಕ್ವೆಡಾರ್, ವೆನಿಜೂಲ, ಹಾಂಡುರಾಸ್, ಕೊಲಂಬಿಯಾ, ಪನಾಮಾ ಹಾಗೂ ಕೋಸ್ಟಾರೀಕಗಳು ಬಾಳೆಯ ತವರು. ಆಫ್ರಿಕಾದಲ್ಲೂ ಬಾಳೆಯ ವ್ಯವಸಾಯ ಹೆಚ್ಚು ಪ್ರಗತಿ ಸಾಧಿಸಿದೆ. ಮಡಗಾಸಿ, ಸೋಮಾಲಿಯಾ, ಮಧ್ಯಆಫ್ರಿಕಾ ಗಣರಾಜ್ಯ ಮತ್ತು ಐವರಿಕೋಸ್ಟ್ ಬಾಳೆ ಬೇಸಾಯದ ಪ್ರದೇಶಗಳು. ಭಾರತದಲ್ಲಿ ಬಾಳೆಯನ್ನು ಹೆಚ್ಚು ಬೆಳೆಯುವ ರಾಜ್ಯಗಳೆಂದರೆ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಗುಜರಾತ್, ಮಹರಾಷ್ಟ್ರ, ಅಸ್ಸಾಂ, ಬಂಗಾಳ ಮತ್ತು ಬಿಹಾರ. ಬಾಳೆ ಬೆಳೆಯುವ ಏಷಿಯನ್ ರಾಷ್ಟ್ರಗಳಲ್ಲಿ ಭಾರತಕ್ಕೆ ಅಗ್ರಸ್ಥಾನ.

ಜಗತ್ತಿನಾದ್ಯಂತ ಸುಮಾರು 50-70 ಜಾತಿಯ ಬಾಳೆಯ ಗಿಡಗಳು ಕಾಣಸಿಗುತ್ತವೆ. ನಮ್ಮ ದೇಶದಲ್ಲಿ 15-20 ಜಾತಿ ಬಾಳೆಯನ್ನು ಕಾಣಬಹುದು. ಅವುಗಳಲ್ಲಿ ರಸಬಾಳೆ, ಕೆಂಪುಬಾಳೆ, ಏಲಕ್ಕಿಬಾಳೆ, ರಾಜಬಾಳೆ, ಕಲ್ಯಾಣಬಾಳೆ, ಸಿಂಗಾಪುರಿ ಪಚ್ಚಬಾಳೆ, ಮರಬಾಳೆ, ಮದರಂಗಿಬಾಳೆಗಳು ಮುಖ್ಯವಾದವು.

ಆರೋಗ್ಯಪೂರ್ಣ ಜೀವನಕ್ಕೆ ಬೇಕಾಗುವ ಎಲ್ಲಾ ಅಂಶಗಳೂ ಬಾಳೇಹಣ್ಣಿನಲ್ಲಿ ಇವೆ. ಪ್ರೋಟೀನ್, ವಿಟಮಿನ್ ಮತ್ತು ಮಿನರಲ್ಸ್ ಸಾಕಷ್ಟು ಪ್ರಮಾಣದಲ್ಲಿ ಬಾಳೇಹಣ್ಣಿನಲ್ಲಿ ಇದೆ. ಬಾಳೇಹಣ್ಣು ತಿಂದೇ ಮನುಷ್ಯ ಜೀವಿಸಬಲ್ಲ. ಕಳಿತ ಒಂದು ಬಾಳೆಯಹಣ್ಣು 100 ಕ್ಯಾಲರಿಗಳಷ್ಟು ಶಕ್ತಿಯನ್ನು ಉತ್ಪತ್ತಿ ಮಾಡುತ್ತದೆ.

ಬಾಳೇಹಣ್ಣಿನಲ್ಲಿ ಎ,ಬಿ,ಸಿ,ಇ ಅನ್ನಾಂಗಗಳೂ ಮೆಗ್ನೀಷಿಯಂ, ಸೋಡಿಯಂ, ತಾಮ್ರ ಮುಂತಾದ ಖನಿಜಗಳೂ ಇವೆ. ಇದರಲ್ಲಿ ಇರುವ ವಿಶಿಷ್ಟ ಗುಣವೇನೆಂದರೆ ಕರುಳಿನಲ್ಲಿ ಕಂಡು ಬರುವ ಹಾನಿಕಾರಕ ಬ್ಯಾಕ್ಟೀರಿಯಾಗಳನ್ನು ಉಪಯುಕ್ತ ಬ್ಯಾಕ್ಟೀರಿಯಾಗಳನ್ನಾಗಿ ಬದಲಾಯಿಸುವುದು. ಅಲ್ಲದೆ ಇದರಲ್ಲಿರುವ ಪೊಟಾಷಿಯಂ ಮತ್ತು ಇತರ ಕೆಲವು ರಾಸಾಯನಿಕಗಳು ಅಧಿಕ ರಕ್ತದೊತ್ತಡವನ್ನು ತಹಬಂದಿಗೆ ತರುತ್ತದೆ. ಬಾಳೇಹಣ್ಣಿನಲ್ಲಿ ತಾಮ್ರ, ಕಬ್ಬಿಣಾಂಶ ಇರುವುದರಿಂದ ಇವರ ಸೇವನೆಯಿಂದ ರಕ್ತದಲ್ಲಿ ಹಿಮೋಗ್ಲೋಬಿನ್ ವೃದ್ಧಿಯಾಗುತ್ತದೆ.

ಬಾಳೇಹಣ್ಣು ಅನೇಕ ಔಷಧೀಯ ಗುಣಗಳ ತವರು. ಇದನ್ನು ಸುಟ್ಟಗಾಯ, ಬೆಂದಗಾಯ, ಸಿಡುಬು, ಹಾಸಿಗೆಹುಣ್ಣು, ತುರಿಕೆ, ಕುಷ್ಠ, ತೊನ್ನು ಮುಂತಾದವುಗಳ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಅಲ್ಲದೆ ಅಸಿಡಿಟಿ, ಮಧುಮೇಹ, ಅಜೀರ್ಣ, ಕ್ಷಯ, ಟೈಫಾಯಿಡ್, ಕಾಮಾಲೆ, ಮೂಲವ್ಯಾಧಿ, ಕಫ ಮುಂತಾದ ಕಾಯಿಲೆಗಳ ಚಿಕಿತ್ಸೆಯಲ್ಲೂ ಬಳಸುತ್ತಾರೆ. ಜೊತೆಗೆ ಬಾಳೇಹಣ್ಣಿನ ಕ್ರಮವರಿತ ಸೇವನೆಯಿಂದ ಮೂಳೆಗಳು ಗಟ್ಟಿಯಾಗಿ ಮಾಂಸಖಂಡಗಳು ಬಲಿಷ್ಠವಾಗುತ್ತವೆ.

ವಾಣಿಜ್ಯ ದೃಷ್ಟಿಯಿಂದ ನೋಡಿದರೆ ನಮ್ಮ ದೇಶದ ಪಚ್ಚಬಾಳೇಹಣ್ಣಿಗೆ ವಿದೇಶಗಳಲ್ಲಿ ಬಹಳ ಬೇಡಿಕೆ ಇದೆ. ವಿದೇಶಗಳಲ್ಲಿ ಕ್ಯಾವೆಂಡಿಷ್ ಎಂದು ಹೆಸರಾಗಿರುವ ಪಚ್ಚಬಾಳೆ ಕರ್ನಾಟಕದಲ್ಲಿ ಹೆಚ್ಚು ಬೆಳೆಯುತ್ತದೆ. ಬಾಳೆಯ ರಫ್ತಿನಿಂದ ಹೆಚ್ಚು ವಿದೇಶೀ ವಿನಿಮಯ ಗಳಿಸಬಹುದಾಗಿದೆ. ರಫ್ತು ಮಾಡಲ್ಪಡುವ ಬೇರೆ ಉತ್ಪನ್ನಗಳಿಗೆ ಹೋಲಿಸಿದಾಗ ಅತ್ಯಧಿಕ ವಿದೇಶೀವಿನಿಮಯ ಗಳಿಸಬಹುದೆಂಬುದು ಸಾಬೀತಾಗಿದೆ. ಅಲ್ಲದೆ ಬಾಳೇಹಣ್ಣನ್ನು ಯಾವುದೇ ಕೈಗಾರಿಕಾ ಪರಿಷ್ಕರಣವಿಲ್ಲದೆ ನೇರವಾಗಿ ಮಾರುಕಟ್ಟೆಗೇ ರವಾನಿಸಬಹುದಾಗಿರುವುದರಿಂದ ಲಾಭವೂ ಹೆಚ್ಚಾಗಿರುತ್ತದೆ.

ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಪಚ್ಚಬಾಳೆಯ ಬೇಸಾಯವಿದ್ದರೂ ನಮ್ಮ ದೇಶದಲ್ಲಿ ಇದರ ಬೇಸಾಯ ಸುಲಭ. ಒಂದು ವರ್ಷದಷ್ಟು ಅಲ್ಪಾವಧಿಯಲ್ಲಿ ಫಲ

ದೊರೆಯುವ ಈ ಬಾಳೆಗೆ ರೋಗಬಾಧೆಯೂ ಕಡಿಮೆ. ಹೀಗಾಗಿ ಭಾರತದ ಬಾಳೇಹಣ್ಣಿನ ರಫ್ತು ವ್ಯಾಪಾರ ವಿಸ್ತಾರಗೊಂಡಿದೆ. ಆದ್ದರಿಂದ ಉತ್ಪಾದನೆ ಹೆಚ್ಚಿಸಿದಲ್ಲಿ ಅಮೂಲ್ಯ ವಿದೇಶೀವಿನಿಮಯ ಗಳಿಸಿಕೊಡುತ್ತದೆ.

ಇಷ್ಟೆಲ್ಲಾ ಅಮೂಲ್ಯ ಗುಣಗಳನ್ನು ಹೊಂದಿರುವ ಬಾಳೆಯಿಂದ ಬೆಳೆದವರ ಹಾಗೂ ಸೇವಿಸಿದವರ ಬದುಕು ಬಂಗಾರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಕಠಿಣಪದಗಳ ಅರ್ಥ

ಬಂಗಾರ	–	ಚಿನ್ನ, ಹೊನ್ನು, gold
ಹೊದಿಕೆ	–	banana peel
ಸ್ವಾದಿಷ್ಟ	–	ರುಚಿಕರ, tasty
ವ್ಯವಸಾಯ	–	ಬೇಸಾಯ, ಕೃಷಿ, agriculture
ಹೊನ್ನಿನ ಹಣ್ಣು	–	golden coloured fruit
ಅಗ್ರಸ್ಥಾನ	–	pride of place, top position
ಜಾತಿ	–	ಬಗೆ, variety
ಅನ್ನಾಂಗ	–	vitamin
ಖನಿಜ	–	mineral
ಕರುಳು	–	intestine
ಹಾನಿಕಾರಕ	–	harmful
ರಾಸಾಯನಿಕ	–	chemical
ತಹಬಂದಿ	–	control
ಅಲ್ಲದೆ	–	in addition to
ಕಬ್ಬಿಣಾಂಶ	–	iron content

ವೃದ್ಧಿಸು	–	to increase
ಬೆಂದಗಾಯ	–	wound caused by any hot liquid or by steam
ಸಿಡುಬು	–	small pox
ಹಾಸಿಗೆಹುಣ್ಣು	–	bed soar
ತುರಿಕೆ	–	itch
ಕುಷ್ಠ	–	leprosy
ತೊನ್ನು	–	leucoderma
ಚಿಕಿತ್ಸೆ	–	treatment
ಕಾಮಾಲೆ	–	jaundice
ಮೂಲವ್ಯಾಧಿ	–	piles, haemorrhoids
ಕಫ	–	phlem
ಮೂಳೆ	–	bone
ಬಲಿಷ್ಠ	–	strong
ರಫ್ತು	–	export
ವಿದೇಶೀವಿನಿಮಯ	–	foreign exchange
ಪರಿಷ್ಕರಣ	–	processing

ಅಭ್ಯಾಸಗಳು

I. ಮಾದರಿಯನ್ನು ಅನುಸರಿಸಿ ಕೊಟ್ಟಿರುವ ಪದಗಳನ್ನು ಬದಲಾಯಿಸಿ ಬರೆಯಿರಿ

ಅ. ಮಾದರಿ: ಹಾನಿ – ಹಾನಿಕಾರಕ

ಅ ವಿನಾಶ –

ಆ. ಪಿತ್ತ –

ಇ. ಕ್ರಾಂತಿ –

ಈ. ವಿಷ –

ಕ. ವಿಘ್ನ –

ಆ. ಮಾದರಿ: ಬೇಡು – ಬೇಡಿಕೆ

ಅ. ಕೋರು –

ಆ. ಹೇಳು –

ಇ. ತೋರು –

ಈ. ಬಾಳು –

ಕ. ಹೋಲು –

II. ಬಿಟ್ಟಿರುವ ಜಾಗವನ್ನು ಸೂಕ್ತ ಪದದಿಂದ ಭರ್ತಿಮಾಡಿ

ಅ. ಬಾಳೆ ಉಷ್ಣ ಪ್ರದೇಶದ................ .

ಆ. ಬಾಳೇಹಣ್ಣಿನಲ್ಲಿ ....ಅನ್ನಾಂಗಗಳು ಇವೆ.

ಇ. ಏಷ್ಯಾದಲ್ಲಿ ಬಾಳೆ ಬೆಳೆಯುವ ರಾಷ್ಟ್ರಗಳಲ್ಲಿ ಭಾರತಕ್ಕೆ ....

ಈ. ಬಾಳೇಹಣ್ಣಿನಲ್ಲಿರುವ ಕೆಲವು .... ಅಧಿಕರಕ್ತದೊತ್ತಡವನ್ನು ತಹಬಂದಿಗೆ ತರುತ್ತವೆ.

ಕ. ಪಚ್ಚಬಾಳೇಹಣ್ಣಿಗೆ ವಿದೇಶಗಳಲ್ಲಿ ಬಹಳ .... ಇದೆ.

ಗ. ಬಾಳೆಯ ರಫ್ತಿನಿಂದ ಹೆಚ್ಚು .... ಗಳಿಸಬಹುದಾಗಿದೆ.

ಜ. ವಿದೇಶಗಳಲ್ಲಿ ಪಚ್ಚಬಾಳೇಹಣ್ಣನ್ನು .... ಎಂದು ಕರೆಯುತ್ತಾರೆ.

III. ಬಿಟ್ಟಿರುವ ಜಾಗವನ್ನು ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಭರ್ತಿಮಾಡಿ

ಅ. ಆಫ್ರಿಕಾದಲ್ಲೂ ಬಾಳೆಯ ವ್ಯವಸಾಯ ಹೆಚ್ಚು ಪ್ರಗತಿ ....(ಸಾಧಿಸು).

ಆ. ನಮ್ಮ ದೇಶದಲ್ಲಿ 15-20 ಜಾತಿ ಬಾಳೆಯನ್ನು ....(ಕಾಣು).

ಇ. ಬಾಳೇಹಣ್ಣಿನ ಕ್ರಮವರಿತ .... ಮೂಳೆಗಳು ಗಟ್ಟಿಯಾಗಿ ಮಾಂಸಖಂಡಗಳು ಬಲಿಷ್ಠವಾಗುತ್ತವೆ. (ಸೇವನೆ).

ಈ. ವಾಣಿಜ್ಯ ದೃಷ್ಟಿಯಿಂದ ....ನಮ್ಮ ದೇಶದ ಪಚ್ಚಬಾಳೆಗೆ ವಿದೇಶಗಳಲ್ಲಿ ಒಳ್ಳೆಯ ಮಾರುಕಟ್ಟೆ ಇದೆ (ನೋಡು).

ಕ. ಭಾರತದ ಬಾಳೇಹಣ್ಣಿನ ರಫ್ತು ವ್ಯಾಪಾರ .... (ವಿಸ್ತಾರಗೊಳ್ಳು).

IV. ಬಿಡಿಸಿ ಬರೆಯಿರಿ

ಅ. ಜಗತ್ತಿನಾದ್ಯಂತ

ಆ. ಗುಣವೆಂದರೆ

ಇ. ಬ್ಯಾಕ್ಟೀರಿಯಾಗಳನ್ನಾಗಿ

ಈ. ಹೆಚ್ಚಾಗಿರುತ್ತದೆ

ಕ. ಕ್ರಮವರಿತ

V. ಮಾದರಿಯನ್ನು ಅನುಸರಿಸಿ ಕೊಟ್ಟಿರುವ ಕ್ರಿಯಾಪದಗಳ ಬೇರೆಬೇರೆ ರೂಪವನ್ನು ಬರೆಯಿರಿ

ಮಾದರಿ: ನೋಡು	ನೋಡುತ್ತಾನೆ	ನೋಡಿದೆ	ನೋಡುತ್ತಾ ಇದ್ದೆ	ನೋಡಿದ್ದೆ.
ಅ. ಮಾಡು	....	....	....	....
ಆ. ನಗು	....	....	....	....
ಇ. ಮರೆ	....	....	....	....
ಈ. ಕಾಣು	....	....	....	....
ಕ. ಬಂದುಬಿಡು	....	....	....	....
ಚ. ಬರೆ	....	....	....	....
ಜ. ಸಾಯು	....	....	....	....

VI. ಕೆಳಕಂಡ ಪದ / ಪದಪುಂಜಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಅಲ್ಲದೆ

ಆ. ಮಾತ್ರವಲ್ಲದೆ

ಇ. ಪರಿಷ್ಕರಣ

ಈ. ಹಾನಿಕಾರಕ

ಕ. ಹೀಗಾಗಿ

ಗ. ಆದ್ದರಿಂದ

ಚ. ಅಗ್ರಸ್ಥಾನ

ಜ. ಸ್ವಾದಿಷ್ಟ

ಟ. ಮೆಚ್ಚಿನ

ಡ. ಇಷ್ಟೆಲ್ಲಾ

VII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಯಾವ ಯಾವ ದೇಶಗಳಲ್ಲಿ ಬಾಳೆ ಬೆಳೆಯುತ್ತದೆ?

ಆ. ಭಾರತದಲ್ಲಿ ಬಾಳೆ ಬೆಳೆಯುವ ರಾಜ್ಯಗಳು ಯಾವುವು?

ಇ. ಭಾರತದಲ್ಲಿ ಎಷ್ಟು ಜಾತಿಯ ಬಾಳೆ ಬೆಳೆಯುತ್ತದೆ. ಅವುಗಳಲ್ಲಿ ಮುಖ್ಯವಾದವನ್ನು ಹೆಸರಿಸಿ?

ಈ. ಬಾಳೇಹಣ್ಣಿನಲ್ಲಿ ಯಾವ ಯಾವ ಅನ್ನಾಂಗಗಳು ಇವೆ?

ಕ. ಬಾಳೇಹಣ್ಣಿನಲ್ಲಿರುವ ಖನಿಜಗಳು ಯಾವುವು?

ಗ. ಬಾಳೇಹಣ್ಣಿನಲ್ಲಿರುವ ರಾಸಾಯನಿಕ ಯಾವುದು? ಅದರಿಂದಾಗುವ ಪ್ರಯೋಜನವೇನು?

ಚ. ಯಾವ ಯಾವ ಖಾಯಿಲೆಗಳ ಚಿಕಿತ್ಸೆಯಲ್ಲಿ ಬಾಳೇಹಣ್ಣನ್ನು ಬಳಸುತ್ತಾರೆ?

ಜ. ಬಾಳೇಹಣ್ಣಿನಲ್ಲಿರುವ ಕಬ್ಬಿಣಾಂಶ ಮನುಷ್ಯನಿಗೆ ಯಾವ ರೀತಿ ಸಹಾಯ ಮಾಡುತ್ತದೆ?

ಟ. ವಾಣಿಜ್ಯ ದೃಷ್ಟಿಯಿಂದ ಬಾಳೆಯ ಮಹತ್ವವೇನು?

VIII. ನಿಮ್ಮ ರಾಜ್ಯದಲ್ಲಿ ಹೆಚ್ಚಾಗಿ ಬೆಳೆಯುವ ಯಾವುದಾದರೂ ಒಂದು ಹಣ್ಣಿನ ಬಗ್ಗೆ ಪ್ರಬಂಧ ಬರೆಯಿರಿ

IX. ಕನ್ನಡಕ್ಕೆ ಭಾಷಾಂತರಿಸಿ

Protein foods such as milk, egg, cheese, meat and fish contain large quantities of the kind of material the body needs to build cells. The body cannot make new cells without protein.

Carbohydrates are foods which have a large quantity of starch or sugar, such as potatoes, flour, rice and sugar. These are important to the body because they keep the body warm and give it energy. Almost all foods also have some fat and fat is the most concentrated energy giving food the body uses.

But the body needs more than protein, carbohydrates and fats. It must also have certain substances known as minerals. There are eighteen such necessary minerals. As you know some of them, such as calcium and phosphorous are needed by the bones and teeth to grow strong and healthy. Iron helps the cells work properly. With copper, the body grows and makes haemoglobin. Iodine helps the body work. Vitamins are absolutely essential to health. Each vitamin serves the body in the special way and no one vitamin can replace another.

4. ಅಮ್ಮ, ಆಚಾರ, ನಾನು

ನನ್ನ ಮದುವೆಗೆ ಮುಂಚೆ
ಹತ್ತಾರು ಹೆಣ್ಣುಗಳ ನೋಡಿ ನಮ್ಮಮ್ಮ
ಒಬ್ಬೊಬ್ಬರನೂ ತನ್ನ ಒಪ್ಪಿಗೆಯ ಒರೆಯಲ್ಲಿ ಅರೆದು
ಅವಳು ಹಾಗೆ ಇವಳು ಹೀಗೆ
ಆಕೆಗಿಂತ ವಾಸಿ ಕಾಗೆ
ಈಕೆ ಎಲ್ಲ ಸರಿ ಆದರೆ ಉದ್ದನಾಲಗೆ
ಒಬ್ಬಾಕೆ ಲಂಕಿಣಿ
ಇನ್ನೊಬ್ಬಾಕೆ ಜಿರಾಫಿಣಿ
ಒಬ್ಬಳು ನಿಂತರೆ ಬೆದುರು ಬೊಂಬೆಯ ತರಹ
ಇನ್ನೊಬ್ಬಳ ಹಲ್ಲು ಮಕ್ಕಳ ಬರಹ
ಎಂದೆಲ್ಲರಿಗೂ ಹಚ್ಚಿ ಬಿರುದು
ಬಹಳ ದಿನ ಅವಿವಾಹಿತನಾಗಿಯೇ ಉಳಿದೆ,
ಅಮ್ಮನನ್ನು ಮನಸಾರ ಹಳಿದೆ.
ಅಮ್ಮ ಕಟ್ಟಾ ಸಂಪ್ರದಾಯಸ್ಥೆ
ಖುರಾನು ನಮಾಜು ರಂಜಾನಿನ ಉಪವಾಸ
ಧಾರ್ಮಿಕಾಚಾರಗಳಲ್ಲಿ ಹೇಳತೀರದ ಆಸ್ಥೆ.
ಬುರ್ಖಾ ತೊಡದೆ ಬೀದಿಯಲಿ ಹಾದುಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ –
ಹೆಚ್ಚು ಕಲಿತ ಬಜಾರಿಗಳ ಹಣೆಬರಹವೇ ಇಷ್ಟು
ದೇವರು ಧರ್ಮಗಳ ಭಯವಿರದ ಎಳ್ಳಷ್ಟೂ
ಗಂಡಸರೆದುರು ಮೈ ಪ್ರದರ್ಶಿಸುವ ಗಂಡು

ಬೀರಿಗಳು ಗಂಡಂದಿರ ಜೊತೆ ಬಾಳಿಯಾರೆ?
ಇಂಥವರನ್ನ ನನ್ನ ಮಗನಿಗೆಂದೂ ತಾರೆ
ನೆಂದು ಪ್ರತಿಜ್ಞಿಸಿ –
ಸದಾ ಬುರ್ಖಾ ತೊಡುವ ಕರಡಿಯನ್ನ
ಆಧುನಿಕ ವಿದ್ಯಮಾನಗಳ ಕಂಡರಿಯದ ಕುರುಡಿಯನ್ನ
ಹಳ್ಳಿ ಮೊದ್ದನ್ನ ಮೆಚ್ಚಿ
ನನ್ನ ಕೇಳಿದಾಗ ನಾನೋ ಬೆಚ್ಚಿ
ಖುದ್ದಾಗಿ ನೋಡಿ ಒಪ್ಪಿದ ವಿದ್ಯಾವಂತೆಯ
ಕೈಹಿಡಿವೆನೆಂದಾಗ
"ಓದಿದವರು ಹಾಳಾಗ
ನಾನೇನು ಓದಿದ್ದೆನೊ ಪೆದ್ದ?
ಮದುವೆಗೆ ಮುಂಚೆ ಹುಡುಗ
ಹೆಣ್ಣ ನೋಡುವುದು ಧರ್ಮನಿಷಿದ್ಧ
ನಾವೆಲ್ಲ ಕಣ್ಣುಮುಚ್ಚಿ ಹೆಣ್ಣಮೆಚ್ಚಿ ಗಂಟುಹಾಕುವೆವೆ?
ಎಂದು ಬಾಯಿ ಮುಚ್ಚಿಸಿದಳು;
ತನ್ನ ಮೇಲಿನ ನನ್ನ ಜುಗುಪ್ಸೆ ಹೆಚ್ಚಿಸಿದಳು.

ಅಪ್ಪ ಉದಾರಿ
ಮಗ ತಾನೇ ಆರಿಸಿಕೊಳ್ಳಲಿ ಭವಿಷ್ಯದ ದಾರಿ
"ಹೆತ್ತವರು ನಾವೇಕೆ ಆಗುವುದು ತಡೆ
ಆ ಯೋಚನೆಯ ಬಿಟ್ಟುಬಿಡೆ"
ಎಂದು ಎಚ್ಚರಿಸಿದಾಗ
ಅಮ್ಮ ಅನ್ನ ನೀರು ಬಿಟ್ಟು ಗಳಗಳ ಅತ್ತು

ಉರಲು ಬಾವಿ ಬೆಂಕಿಗಳ ಉಚ್ಚರಿಸಿದಾಗ
ತೆಪ್ಪಗಾದೆ.

ಅಪ್ಪ ಲೋಕಕಂಡವರು–ಹಾಗೇ ಅಮ್ಮನ
ಕೋಪ ಹಟ ಕಂಡವರು
ವಿಪರೀತಕ್ಕೆ ಬಂತು ತಗಾದೆ
ಎನಿಸಿ ಮುಂದೇನೂ ತೋಚದೆ "ನಿನ್ನಿಷ್ಟ" ವೆಂದರು;
ರಾತ್ರಿಯೆಲ್ಲ ಕೋಣೆಯ ದೀಪವುರಿಸಿ ಸಿಗರೇಟು ಹಚ್ಚಿ
ಶತಪಥಿಸಿ ಒಳಗೊಳಗೇ ನೊಂದರು.

ಒಂದು ದಿನ ಅಮ್ಮನಿಗೆ ಜ್ಞಾನೋದಯ
ವಾಯಿತೆಂದೆನ್ನಿಸಿತು; ಊಟಕ್ಕೆ ಕುಳಿತಿದ್ದಾಗ
"ನಿನ್ನಿಷ್ಟದಂತೆ ಓದಿದವಳನೇ ಮದುವೆಯಾಗಪ್ಪ"
ಎಂದಾಗ ಅಪನಂಬಿಕೆಯೊಂದಿಗೆ ಅಚ್ಚರಿ
ಯೊಂದಿಗೆ ಖುಷಿಯೊಂದಿಗೆ ಭಯ
ಬೆಳೆದು ಕೈತೊಳೆದು ಎದ್ದೆ ಬೇಗ.

ಆ ಡಬ್ಬಲ್ ಪದವೀಧರೆಯ ಭಾವಚಿತ್ರವನ್ನು
ಇಡೀ ದಿನ ನೆಟ್ಟುಕಣ್ಣ
ತೂಗಿ ಅಳೆದು
ವಿಳಾಸ ತಿಳಿದು ಹತ್ತಿರದಲ್ಲೇ ಕಂಡು ಮೆಚ್ಚಿ
ನಿಶ್ಚಿತಾರ್ಥ ಶಾಸ್ತ್ರ ಮದುವೆ ಎಲ್ಲ ಮುಗಿಯಿತು;
ಮನಸ್ಸು ಅಮ್ಮನಿಗೆ ಮೌನದಲ್ಲೇ ಕೈಮುಗಿಯಿತು.

ಮೊದಲಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು
ಭಾರಿ ಸೀರೆಯನ್ನ ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ
ಕಾಲಿಗೆ ಹೈಹೀಲ್ಡು ಕೆರ
ಕೊರಳಿಗೆ ಚಿನ್ನದ ಸರ
ಕಿವಿಗೆ ಬೆರಳಿಗೆ ಉಂಗುರ ತೊಟ್ಟು
ಲಿಪ್‌ಸ್ಟಿಕ್ಕು ಪೌಡರು ರೋಜು ಬಳಿದು ದೃಷ್ಟಿಬೊಟ್ಟಿಟ್ಟು
ಹೆರಳಗೋಪುರದಲ್ಲಿ ಕೂದಲ ಬಿಗಿದು
ಎಡಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು – ಆಗ
"ಬಂದೆ ತಡೆಯಿರಿ" ಎಂದು ಒಳಗೋಡಿ
ಬಂದು "ನಡೆಯಿರಿ" ಎಂದಾಗ
ತಲೆಸುತ್ತಿ ನಾಲಗೆಬತ್ತಿ ನಾನಾದೆ ಮೂಕ;
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ.

– ಪ್ರೊ. ಕೆ.ಎಸ್. ನಿಸಾರ್ ಅಹಮದ್

ಕವಿ, ಕಾವ್ಯ ವಿಚಾರ

1936 ರ ಫೆಬ್ರವರಿ 6 ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯ ಮುಸ್ಲಿಂ ಮನೆತನದಲ್ಲಿ ಜನನ. ತಂದೆ ಕೆ.ಎಸ್.ಹೈದರ್, ತಾಯಿ ಹಮೀದಾ ಬೇಗಂ. ಕಲಿತದ್ದು ಭೂವಿಜ್ಞಾನ, ಕಲಿಸಿದ್ದೂ ಭೂವಿಜ್ಞಾನ. ಭೂವಿಜ್ಞಾನ ಪ್ರಾಧ್ಯಾಪಕರಾಗಿ

ನಿವೃತ್ತರಾಗಿದ್ದಾರೆ. ಮನೆಮಾತು ಉರ್ದು, ಕಾವ್ಯ ಭಾಷೆ ಕನ್ನಡ. 'ನನ್ನ ಕವನಗಳ ಭಾಷೆಯನ್ನು ಬೆವರುಸುರಿಸಿ ಸಂಪಾದಿಸಿಕೊಂಡಿದ್ದೇನೆ ನಾನು' ಎನ್ನುವ ನಿಸಾರರ ಕವನಗಳಲ್ಲಿ ಅಚ್ಚಗನ್ನಡದ ಅಪೂರ್ವ ಶೋಧ. ಭಾವಕ್ಕೆ ತಕ್ಕ ಭಾಷೆ, ಭಾಷೆಗೆ ತಕ್ಕ ಲಯ ಹೃದ್ಯವೆನಿಸುತ್ತದೆ.

ಮನಸ್ಸು ಗಾಂಧೀಬಜಾರು, ನೆನೆದವರ ಮನದಲ್ಲಿ, ಸುಮುಹೂರ್ತ, ಸಂಜೆ ಐದರಮಳೆ, ನಾನೆಂಬ ಪರಕೀಯ, ನಿತ್ಯೋತ್ಸವ, ಸ್ವಯಂಸೇವೆಯ ಗಿಳಿಗಳು ಮತ್ತು ಅನಾಮಿಕ ಆಂಗ್ಲರು – ಇವರ ಕವನ ಸಂಕಲನಗಳು. ಇದು ಬರಿಬೆಡಗಲ್ಲೋ ಅಣ್ಣಾ – ವಿಮರ್ಶಾ ಕೃತಿ.

ಶ್ರೀಯುತರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ, ಕೇಂದ್ರ ಚಲನಚಿತ್ರ ಸೆನ್ಸಾರ್ ಮಂಡಳಿ, ಗಡಿ ಸಲಹಾ ಸಮಿತಿ, ಕನ್ನಡ ಕಾವಲು ಸಮಿತಿಯ ಸಕ್ರಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ.

ಹಲವಾರು ಪ್ರಶಸ್ತಿ ಗಳಿಸಿರುವ ಹಿರಿಮೆ ಇವರದು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, (ಅನಾಮಿಕ ಆಂಗ್ಲರು, ಬರಿಬೆಡಗಲ್ಲೋ ಅಣ್ಣಾ) ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ (ಹೆಜ್ಜೆಗುರುತು) ಮೊದಲಾದ ಪ್ರಶಸ್ತಿಗಳು ಇವರಿಗೆ ಸಂದಿವೆ.

ಪ್ರಸ್ತುತ ಕವನವನ್ನು ಸಂಜೆ ಐದರಮಳೆ ಎಂಬ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಈ ಕವನದಲ್ಲಿ ಸಾಮಾನ್ಯವಾದ ಅನುಭವವೊಂದನ್ನು ಎತ್ತಿಕೊಂಡು ಅಸಾಧಾರಣ ಪರಿಣಾಮ ಬೀರಬಲ್ಲ ಕವನವನ್ನಾಗಿಸಿದ್ದಾರೆ. ಪ್ರಾಮಾಣಿಕ ಕವಿಯೊಬ್ಬರ ತುಡಿತವನ್ನು ನಾವಿಲ್ಲಿ ಕಾಣಬಹುದು.

ಕಠಿಣಪದಗಳ ಅರ್ಥ

ಒರೆ	–	touchstone
ಅರೆ	–	half, semi
ವಾಸಿ	–	better

ಉದ್ದನಾಲಗೆ – Over talkative behaviour

ಲಂಕಿಣಿ – woman with gross features

ಜಿರಾಫಿಣಿ – a tall woman with long neck, gangling woman

ಬೆದುರುಬೊಂಬೆ – scare-crow

ಹಳಿ – to talk ill of, to malign, slunder

ಕಟ್ಟಾ – stanch

ಸಂಪ್ರದಾಯಸ್ಥೆ - traditionalist

ಆಸ್ಥೆ – interest

ಬಜಾರಿ – shrew

ಹಣೆಬರಹ – fate

ಬಾಳು – to live

ಪ್ರತಿಜ್ಞೆಸು – to swear

ಕರಡಿ – bear

ಮೊದ್ದು – dull, inactive

ಬೆಚ್ಚು – startle

ಪೆದ್ದ – fool, a blockhead

ಧರ್ಮನಿಷಿದ್ಧ – religious prohibition

ಜಿಗುಪ್ಸೆ – disgust

ಉದಾರಿ – one who is generous, a philanthrophist

ಉರಲು – hanging oneself to death, noose

ತೆಪ್ಪಗಾಗು – to fall silent

ಹಟ – obstinacy, stubbornness

ತಗಾದೆ – pestering

ಕತಪಥಿಸು	–	to fidget
ಅಚ್ಚರಿ	–	wonder
ತೂಗು	–	to size up, to assess
ಅಳೆ	–	to measure
ತೋಳಿಲ್ಲದ ರವಿಕೆ	–	sleeveless blouse
ಸೊಂಟ	–	waist
ನಾಜೂಕು	–	delicacy
ಕೆರ	–	slippers
ದೃಷ್ಟಿಬೊಟ್ಟು	–	a mark to ward off evil eye
ಹೆರಳು	–	a braid of hair
ಗೋಪುರ	–	tower
ಬೈತಲೆ	–	parting of hair
ಹೊಸಿಲು	–	threshold
ದಾಟು	–	to cross
ತಡೆಯಿರಿ	–	please wait
ತಲೆಸುತ್ತು	–	giddyness
ಬತ್ತು	–	to dry up
ಮೂಕ	–	dumb

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದವನ್ನು ಬದಲಾಯಿಸಿ ಬರೆಯಿರಿ

ಅ. ಮಾದರಿ: ಕೊಡು – ಕೊಡೆ

ಅ. ಬಿಡು –

ಆ. ಹೇಳು –

ಇ. ನೋಡು –

ಈ. ಮಾಡು –

ಆ. ಮಾದರಿ: ಮನಸು – ಮನಸಾರೆ

ಅ. ಕಣ್ಣು –

ಆ. ಕಿವಿ –

ಇ. ಬಾಯಿ –

ಈ. ಕೈ –

ಇ. ಮಾದರಿ: ಬಾಳು – ಬಾಳಿಯಾರು

ಅ. ಕೇಳು –

ಆ. ಹೊಡೆ –

ಇ. ಒದೆ –

ಈ. ಬೀಳು –

ಕ. ಮರೆ –

ಗ. ಕಾಣು –

ಚ. ಕೊಡು –

ಜ. ನಗು –

ಟ. ನೋಯು –

II. ಕೆಳಗಿನ ವಾಕ್ಯ ಭಾಗಗಳಲ್ಲಿ ಗೆರೆ ಎಳೆದು ತೋರಿಸಿರುವ ಭಾಗವನ್ನು ಶಿಷ್ಟ ಗದ್ಯ ರೂಪಕ್ಕೆ ಬದಲಾಯಿಸಿ

ಅ. ನಮ್ಮವರ <u>ಹೆಣ್ಣುಗಳ</u> ಕಂಡು ಕಿಡಿಕಿಡಿಯಾಗಿ

ಆ. ಹೆರಳಗೋಪುರದಲ್ಲಿ <u>ಕೂದಲ</u> ಬಿಗಿದು

ಇ. ಹಳ್ಳಿಮೊದ್ದನ್ನ ಮೆಚ್ಚಿ ನನ್ನ ಕೇಳಿದಾಗ

ಈ. ಭಾರಿ ಸೀರೆಯನ್ನ ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ

III. ಕೆಳಕಂಡ ಪದಗಳನ್ನು ಪದ್ಯದಲ್ಲಿ ಯಾವ ಅರ್ಥದಲ್ಲಿ ಪ್ರಯೋಗಿಸಲಾಗಿದೆ ಎಂಬುದನ್ನು ವಿವರಿಸಿ

ಅ. ಲಂಕಿಣಿ	ಇ. ಬೆದುರುಬೊಂಬೆ
ಆ. ಜಿರಾಫಿಣಿ	ಈ. ಉದ್ದನಾಲಗೆ

IV. ಸಂದರ್ಭದೊಡನೆ ವಿವರಿಸಿ

ಅ. ಆಕೆಗಿಂತವಾಸಿ ಕಾಗೆ

ಆ. ಇನ್ನೊಬ್ಬಳ ಹಲ್ಲು ಮಕ್ಕಳಬರಹ

ಇ. ಅಪನಂಬಿಕೆಯೊಂದಿಗೆ ಅಚ್ಚರಿಯೊಂದಿಗೆ ಖುಷಿಯೊಂದಿಗೆ ಭಯ ಬೆಳೆದು ಕೈತೊಳೆದು ಎದ್ದೆ

ಈ. ನನ್ನ ಮೇಲಿನ ಜಿಗುಪ್ಸೆ ಹೆಚ್ಚಿಸಿದಳು

ಕ. ರಾತ್ರಿಯೆಲ್ಲ ಕೋಣೆಯ ದೀಪವುರಿಸಿ ಸಿಗರೇಟು ಹಚ್ಚಿ ಶತಪಥಿಸಿ ಒಳಗೊಳಗೇ ನೊಂದರು.

V. ಕೆಳಕಂಡವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಎಳ್ಳಷ್ಟೂ	ಗ. ಶತಪಥಿಸು
ಆ. ತಗಾದೆ	ಚ. ಮೀರಿಸು
ಇ. ಒಳಗೊಳಗೆ	ಜ. ತಾರೆ
ಈ.ಮುಂಚೆ	ಟ. ಗಳಗಳ
ಕ. ತರಹ	ಡ. ನನ್ನಾಕೆ

VI. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕವನದಲ್ಲಿ ನಾಯಕನ ತಾಯಿ ಮಗನಿಗಾಗಿ ನೋಡಿದ ಹೆಣ್ಣುಗಳನ್ನೆಲ್ಲಾ ಯಾವ ಕಾರಣಕ್ಕಾಗಿ ತಿರಸ್ಕರಿಸಿದರು?

ಆ. ನಾಯಕನ ತಾಯಿ ತಮ್ಮ ಮಗನಿಗೆ ಎಂಥ ಕನ್ಯೆಯನ್ನು ಆಯ್ಕೆ ಮಾಡಿದರು?

ಇ. ನಾಯಕ ತಾನು ಖುದ್ದಾಗಿ ನೋಡಿ ಒಪ್ಪಿದ ವಿದ್ಯಾವಂತೆಯನ್ನು ಮದುವೆಯಾಗುವೆನೆಂದಾಗ ಅವರ ತಾಯಿಯಿಂದ ಬಂದ ಪ್ರತಿಕ್ರಿಯೆ ಏನು?

ಈ. ತಂದೆ ಮಗನ ಪರ ವಹಿಸಿದ್ದನ್ನು ನೋಡಿದ ತಾಯಿ ಏನೆಂದು ಎಚ್ಚರಿಸಿದರು?

ಕ. ಅಮ್ಮನಿಗೆ ಜ್ಞಾನೋದಯವಾದಾಗಿನ ಸಂದರ್ಭದ ನಾಯಕನ ಮನಸ್ಥಿತಿಯನ್ನು ವಿವರಿಸಿ.

ಗ. ನಾಯಕ ಮೊದಲಸಲ ಹೆಂಡತಿಯ ಜೊತೆ ತಿರುಗಾಡಲು ಹೊರಟ ಸನ್ನಿವೇಶವನ್ನು ವಿವರಿಸಿ.

VII. ಕನ್ನಡಕ್ಕೆ ಭಾಷಾಂತರಿಸಿ

Aesop told many stories but many stories are told about Aesop himself. Most of them have no basis in fact. They are legends. Some of them may be true. Whether they are true or untrue, they are interesting. Here is one story about Aesop. The people of Athens were tired of their old ruler. There had been peace for many years but no excitement. Their king never had huge feasts they could enjoy. He never faught battles like other kings. People began to grumble and there was talk of finding a new king. Aesop then told the citizens this fable.

"Many years ago the frogs decided to have a king. They asked the god Jupiter, to send them one. Jupiter did not think the frogs needed a king, but at last he sent them a log of wood. For a time the frogs were happy with king Log then, since their king never did anything, they began to complain. They asked Jupiter to take away king Log and send them a new, exciting king. Jupiter, tired of their complaints, sent them a stork, a large bird which eats frogs. King stork ate up the frogs and Jupiter had no more complaints.

5. ನವರಾತ್ರಿ

ಆಶ್ವಯುಜ ಶುದ್ಧ ಪಾಡ್ಯದಿಂದ ದಶಮಿಯವರೆಗೆ ಬಹಳ ವಿಜೃಂಭಣೆಯಿಂದ ಆಚರಿಸುವ ಹಬ್ಬವೇ ನವರಾತ್ರಿ. ಮೊದಲ ಒಂಬತ್ತು ದಿನಗಳನ್ನು ನವರಾತ್ರಿ ಎಂದೂ ಹತ್ತನೆಯ ದಿನವನ್ನು ವಿಜಯದಶಮಿ ಎಂದೂ ಕರೆಯುತ್ತಾರೆ. **'ದಸರ'** ಎಂಬ ಹೆಸರಿನಿಂದಲೂ ಕರೆಯಲ್ಪಡುವ ಈ ಹಬ್ಬ ಭಾರತದ ಸಾರ್ವತ್ರಿಕ ಹಬ್ಬಗಳಲ್ಲಿ ಒಂದು.

ನವರಾತ್ರಿಯ ಒಂಬತ್ತು ದಿನಗಳಲ್ಲಿ ಶಕ್ತಿಸ್ವರೂಪಿಣಿಯಾದ ಕಾಳಿ, ಲಕ್ಷ್ಮೀ, ಸರಸ್ವತಿ ಮತ್ತು ದುರ್ಗೆಯರನ್ನು ಆರಾಧಿಸುತ್ತಾರೆ. ಮೊದಲ ಮೂರು ದಿನ ಆದಿಶಕ್ತಿಯನ್ನು ಮಹಾಕಾಳಿಯ ರೂಪದಲ್ಲಿ ಪೂಜಿಸಿ ರೋಗರುಜಿನಗಳಿಂದ ಕಾಪಾಡುವಂತೆ ಪ್ರಾರ್ಥಿಸುತ್ತಾರೆ. ಮುಂದಿನ ಮೂರು ದಿನಗಳಲ್ಲಿ ಆದಿಶಕ್ತಿಯನ್ನು ಲಕ್ಷ್ಮೀ ಎಂದು ಸಂಕಲ್ಪಿಸಿ ಪೂಜಿಸಿ ಸಕಲ ಸೌಭಾಗ್ಯವನ್ನು ನೀಡಬೇಕೆಂದು ಬೇಡುತ್ತಾರೆ. ಏಳನೆಯ ದಿನದಂದು ಸಾಕ್ಷಾತ್ ಸರಸ್ವತಿ ಎಂದು ತಿಳಿದು ವಿದ್ಯಾಬುದ್ಧಿಯನ್ನು ನೀಡುವಂತೆ ಪ್ರಾರ್ಥಿಸುತ್ತಾರೆ. ಎಂಟನೆಯ ದಿನ ದುರ್ಗಾಷ್ಟಮಿ. ದುರ್ಗಾಷ್ಟಮಿಯಂದು ದುರ್ಗತಿಯನ್ನು ಪರಿಹರಿಸಬೇಕೆಂದು ಕೋರಿಕೊಳ್ಳುತ್ತಾರೆ. ನವರಾತ್ರಿಯ ನವಮ ದಿನದಂದು ಮಹಾನವಮಿ ಹಬ್ಬ. ಆ ದಿನ ಆಯುಧಗಳಿಗೆ ಪೂಜೆ. ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳಲ್ಲಿರುವ ಎಲ್ಲಾ ಆಯುಧೋಪಕರಣಗಳನ್ನು ಹೊರತೆಗೆದು ಶುಭ್ರಗೊಳಿಸಿ ಪೂಜಿಸಿ ತಮ್ಮ ತಮ್ಮ ವೃತ್ತಿಗಳಲ್ಲಿ ಯಶಸ್ಸು, ಪ್ರಗತಿ ಉಂಟಾಗಲೆಂದು ಪ್ರಾರ್ಥಿಸುತ್ತಾರೆ. ಮರುದಿನ ವಿಜಯದಶಮಿ. ಆದಿಶಕ್ತಿ ಚಾಮುಂಡಿಯಾಗಿ ಮಹಿಷಾಸುರನ ಮೇಲೆ ಒಂಬತ್ತು ದಿನಗಳ ಕಾಲ ಹಗಲುರಾತ್ರಿಯೆನ್ನದೆ ಘೋರ ಯುದ್ಧಮಾಡಿ ಆಶ್ವಯುಜ ಶುದ್ಧ ದಶಮಿಯ ದಿನ ಮಹಿಷಾಸುರನನ್ನು ಸಂಹರಿಸಿ ವಿಜಯವನ್ನು ಸಾಧಿಸುತ್ತಾಳೆ. ಅದಕ್ಕಾಗಿಯೇ ಆ ದಿನವನ್ನು ವಿಜಯದಶಮಿ ಎಂದು ಕರೆಯುತ್ತಾರೆ.

ದುಷ್ಟಶಕ್ತಿಯ ಮೇಲಿನ ಸತ್‌ಶಕ್ತಿಯ ವಿಜಯದ ಸಂಕೇತವಾದ ಈ ಹಬ್ಬವನ್ನು ರಾಜಮಹಾರಾಜರು ಸಂಭ್ರಮ ಸಡಗರಗಳಿಂದ ಆಚರಿಸುತ್ತಿದ್ದರು. ರಾಜ್ಯದ ಸುಖ, ಸಂಪತ್ತು, ಕಲ್ಯಾಣ, ನೆಮ್ಮದಿ, ಬಲವರ್ಧನೆ, ಶತ್ರುವಿನಾಶಗಳಿಗಾಗಿ ಶಕ್ತಿದೇವತೆಯನ್ನು ಆ ಶುಭದಿನಗಳಲ್ಲಿ ಕ್ರಮವಾಗಿ ಆರಾಧಿಸುತ್ತಿದ್ದರು. ಕರ್ನಾಟಕದಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಅತ್ಯಂತ ವೈಭವದಿಂದ ಈ ಹಬ್ಬ ಆಚರಿಸಲ್ಪಡುತ್ತಿತ್ತು. ಇದರ ಕುರುಹಾಗಿರುವ ಮಾನೋಮಿದಿಬ್ಬವನ್ನು ಇಂದಿಗೂ ಹಂಪೆಯಲ್ಲಿ ಕಾಣಬಹುದು. ವಿಜಯನಗರ ಸಾಮ್ರಾಜ್ಯದ ಪತನಾನಂತರ ಮೈಸೂರಿನ ಒಡೆಯರು ನವರಾತ್ರಿ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಿಕೊಂಡು ಬರುತ್ತಿದ್ದರು. ಒಂಬತ್ತು ದಿನವೂ ಮಹಾರಾಜರು ರತ್ನಸಿಂಹಾಸನದಲ್ಲಿ ಕುಳಿತು ದರ್ಬಾರು ನಡೆಸುತ್ತಿದ್ದರು. ದಶಮಿಯ ದಿನ ಸಾಯಂಕಾಲ ಜಗತ್ಪ್ರಸಿದ್ಧ ವೈಭವೋಪೇತ ಜಂಬೂಸವಾರಿ. ಆ ದಿನ ಮಹಾರಾಜರು ಅಲಂಕರಿಸಿದ ಆನೆಯ ಮೇಲಿನ ರತ್ನಖಚಿತವಾದ ಅಂಬಾರಿಯಲ್ಲಿ ಕುಳಿತು ಸಕಲ ರಾಜಮರ್ಯಾದೆಗಳೊಡನೆ ಬನ್ನಿಮಂಟಪಕ್ಕೆ ತೆರಳುತ್ತಿದ್ದರು. ಅಲ್ಲಿ ಸಂಪ್ರದಾಯ-ಶಾಸ್ತ್ರವಿಧಿಗಳಿಗನುಸಾರವಾಗಿ ಬನ್ನಿವೃಕ್ಷವನ್ನು ಪೂಜಿಸಿ ಅದರ ಎಲೆ ಹಾಗೂ ಮಣ್ಣನ್ನು ತೆಗೆದುಕೊಂಡು ಮೆರವಣಿಗೆಯಲ್ಲೇ ಅರಮನೆಗೆ ಹಿಂದಿರುಗುತ್ತಿದ್ದರು. ಜಗತ್ಪ್ರಸಿದ್ಧವಾದ ಈ ಜಂಬೂಸವಾರಿಯನ್ನು ನೋಡಲು ದೇಶವಿದೇಶಗಳಿಂದ ಜನರು ಬರುತ್ತಿದ್ದರು.

ನವರಾತ್ರಿ ಬಂದಿತೆಂದರೆ ಗೊಂಬೆಹಬ್ಬ ಶುರುವಾದಂತೆ. ಆಶ್ವಯುಜ ಪಾಡ್ಯದಂದು ಶ್ರೀಸಾಮಾನ್ಯರು ತಮ್ಮ ತಮ್ಮ ಮನೆಗಳಲ್ಲಿ ರಾಜರಾಣಿಯರ ಚಂದನದ ಗೊಂಬೆಗಳನ್ನು ಪಟ್ಟದ ಗೊಂಬೆಗಳಂತೆ ಶೃಂಗರಿಸಿ ಕೂರಿಸಿ ಮುಂದೆ ಕಲಶವಿಟ್ಟು ಪೂಜಿಸುತ್ತಾರೆ. ಅಲ್ಲದೆ ಇನ್ನಿತರ ಗೊಂಬೆಗಳನ್ನು ಸುಂದರವಾಗಿ ಅಲಂಕರಿಸಿ ಕಲಾತ್ಮಕವಾಗಿ ಜೋಡಿಸುತ್ತಾರೆ. ಪ್ರತಿದಿನ ಸಂಜೆ ಗೊಂಬೆಗಳನ್ನು ಪೂಜಿಸಿ ಗೊಂಬೆ ಬಾಗಿನ ತಯಾರಿಸಿ ನೈವೇದ್ಯ ಮಾಡುತ್ತಾರೆ. ಆ ದಿನಗಳಲ್ಲಿ

ಮಕ್ಕಳ ಸಡಗರಕ್ಕಂತೂ ಇತಿಮಿತಿಯೇ ಇಲ್ಲ. ತಮ್ಮ ವಾರಗೆಯ ಮಕ್ಕಳನ್ನು ಬರಮಾಡಿಕೊಂಡು ಗೊಂಬೆಗೆ ಆರತಿ ಎತ್ತಿ ಗೊಂಬೆ ಬಾಗಿನವನ್ನು ಎಲ್ಲರಿಗೂ ಕೊಟ್ಟು ಸಂಭ್ರಮಿಸುತ್ತಾರೆ. ಪ್ರತಿಮನೆಯಲ್ಲೂ ಓರಣವಾಗಿ ಕೂರಿಸಿರುವ ಗೊಂಬೆಗಳನ್ನು ನೋಡಲು, ಬಾಗಿನ ಪಡೆಯಲು ಬರುವ ಮಕ್ಕಳ ಸಂಭ್ರಮ ನವರಾತ್ರಿ ಹಬ್ಬದ ಒಂದು ವೈಶಿಷ್ಟ್ಯ.

ಈಗ ನವರಾತ್ರಿಹಬ್ಬ ಅರಮನೆಗೆ ಮಾತ್ರ ಸೀಮಿತ. ಆದರೆ ಪ್ರವಾಸಿಗರನ್ನು ಆಕರ್ಷಿಸಲು ವಿಜಯದಶಮಿಯನ್ನು ನಾಡಹಬ್ಬವಾಗಿ ಆಚರಿಸಲಾಗುತ್ತಿದೆ. ಹಿಂದಿನಿಂದಲೂ ನಡೆದುಕೊಂಡುಬರುತ್ತಿದ್ದ ದೀಪಾಲಂಕಾರ, ವಸ್ತುಪ್ರದರ್ಶನವನ್ನು ಉಳಿಸಿಕೊಂಡು ಜಂಬೂಸವಾರಿಯ ಬದಲು ಭುವನೇಶ್ವರಿಯ ಮೆರವಣಿಗೆಯನ್ನು ಏರ್ಪಡಿಸಿ ದೇಶದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಬೆಳವಣಿಗೆಗಳನ್ನು ಬಿಂಬಿಸುವ ಸ್ತಬ್ಧಚಿತ್ರಗಳು ಮತ್ತು ಜನಪದಕಲಾಮೇಳಗಳ ಮೆರವಣಿಗೆಯನ್ನು ನಡೆಸುತ್ತಾರೆ. ಇಂದು ದಸರ ಜನತಾ ದಸರ ಆಗಿ ಮಾರ್ಪಾಟುಗೊಂಡಿದೆ. ಇದನ್ನು ನಾಡಹಬ್ಬವಾಗಿ ಸರ್ಕಾರವೇ ಆಚರಿಸುತ್ತಿದೆ.

ಕಠಿಣಪದಗಳ ಅರ್ಥ

ಸಾರ್ವತ್ರಿಕ – belonging to every one

ರೋಗರುಜಿನ – diseases

ದುರ್ಗತಿ – hardship, misfortune

ನವಮಿ – ಒಂಬತ್ತನೆಯದಿನ, nineth day

ಆಯುಧ – weapon

ಹೊರತೆಗೆ – to take out

ಸಂಹರಿಸು – ಕೊಲ್ಲು , to kill

ಸಂಕೇತ – symbol

ಕಲ್ಯಾಣ – welfare, prosperity

ನೆಮ್ಮದಿ – contentment

ಬಲವರ್ಧನೆ – strenghning

ಕುರುಹು – sign

ರತ್ನಖಚಿತ – studed with precious stones

ಅಂಬಾರಿ – a howdah

ರಾಜಮರ್ಯಾದೆ – royal honours

ತೆರಳು – to move, to proceed

ಗೊಂಬೆ – ಬೊಂಬೆ –doll

ಕಲಶ – bross or copper or silver round bottomed vessel used for worshipping

ಕಲಾತ್ಮಕವಾಗಿ – artistically

ಸಡಗರ – enthusiasm

ವಾರಗೆ – of same age group, peer group

ಇತಿಮಿತಿ – limitation

ಆರತಿಎತ್ತು – to wave a platter containing two burning lamps around the faces of people or idols

ಓರಣವಾಗಿ – neatly

ಸೀಮಿತ – confined, limited

ಪ್ರವಾಸಿಗ – tourist

ನಾಡಹಬ್ಬ – state festival

ಬಿಂಬಿಸು – to reflect

ಸ್ತಬ್ಧಚಿತ್ರ – tableau

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದವನ್ನು ಬದಲಾಯಿಸಿ ಬರೆಯಿರಿ

ಮಾದರಿ: ಪ್ರವಾಸ – ಪ್ರವಾಸಿಗ

ಸಾಲ –

ಕನ್ನಡ –

ಪಟ್ಟಣ –

ಅಕ್ಕರ –

ಕಬ್ಬ –

ಪಯಣ –

II. ಬಿಡಿಸಿ ಬರೆಯಿರಿ

ಅ. ಓರಣವಾಗಿ

ಆ. ಕುರುಹಾಗಿರುವ

ಇ. ಸಡಗರಕ್ಕಂತೂ

ಈ. ಪತನಾನಂತರ

ಕ. ಆಯುಧೋಪಕರಣ

ಗ. ರಾಜಮರ್ಯಾದೆಗಳೊಡನೆ

III. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಮುಂದಿನ, ಮೂಲಕ, ಮೇಲಿನ, ಮುಂದೆ, ಇಂದಿಗೂ)

ಅ. .... ನೀನು ಏನಾಗಬೇಕು ಅಂತ ಇದೀಯೆ?

ಆ. .... ಸೀಟಿನಲ್ಲಿ ಕುಳಿತಿರುವವಳು ನನ್ನ ಹೆಂಡತಿ.

ಇ. ಅವಳು ನನ್ನ ಮನಸ್ಸಿಗೆ ಮಾಡಿದ ನೋವು .... ಸ್ವಲ್ಪವೂ ಕಡಿಮೆಯಾಗಿಲ್ಲ.

ಈ. ನನ್ನ ತಾತನ ಬಾಯಿಯಲ್ಲಿ ....ಹಲ್ಲುಗಳೇ ಇಲ್ಲ.

ಕ. ನಿನ್ನ ಮಗಳ ಮದುವೆಯ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ....ಕಳಿಸಿದರೂ ಸಾಕು.

IV. ಕೆಳಕಂಡ ವಾಕ್ಯವನ್ನು ಒಡೆದು ಚಿಕ್ಕಚಿಕ್ಕ ವಾಕ್ಯಗಳಾಗಿ ಮಾಡಿ

ಅ. ವಿಜಯದಶಮಿಯ ದಿನ ಮಹಾರಾಜರು ಸಂಪ್ರದಾಯ ಶಾಸ್ತ್ರವಿಧಿಗಳ-ಗನುಸಾರವಾಗಿ ಬನ್ನಿವೃಕ್ಷವನ್ನು ಪೂಜಿಸಿ ಅದರ ಎಲೆ ಹಾಗೂ ಮಣ್ಣನ್ನು ತೆಗೆದುಕೊಂಡು ಮೆರವಣಿಗೆಯಲ್ಲಿ ಅರಮನೆಗೆ ಹಿಂದಿರುಗುತ್ತಿದ್ದರು.

ಆ. ಆದಿಶಕ್ತಿ ಚಾಮುಂಡಿಯಾಗಿ ಮಹಿಷಾಸುರನ ಜೊತೆ ಒಂಬತ್ತು ದಿನಗಳ ಕಾಲ ಹಗಲುರಾತ್ರಿಯೆನ್ನದೆ ಘೋರ ಯುದ್ಧಮಾಡಿ ಆಶ್ವಯುಜ ಶುದ್ಧ ದಶಮಿಯ ದಿನ ಮಹಿಷಾಸುರನನ್ನು ಸಂಹರಿಸಿ ವಿಜಯವನ್ನು ಸಾಧಿಸಿದ್ದರಿಂದ ಆಶ್ವಯುಜ ಶುದ್ಧ ದಶಮಿಗೆ ವಿಜಯದಶಮಿ ಎಂಬ ಹೆಸರು ಬಂದಿತು.

V. ಆವರಣದಲ್ಲಿ ಕೊಟ್ಟಿರುವ ವಾಕ್ಯಗಳನ್ನು ನಿರ್ದೇಶನದಂತೆ ಬದಲಾಯಿಸಿ

ಅ. ದೀಪಾವಳಿ ಹಬ್ಬವನ್ನು ಮನೆಮಂದಿಯೆಲ್ಲಾ ಸಂಭ್ರಮದಿಂದ ಆಚರಿಸುತ್ತಾರೆ.

(transform into past progressive)

ಆ. ದಸರ ಜನತಾದಸರ ಆಗಿ ಮಾರ್ಪಾಟುಗೊಳ್ಳುತ್ತದೆ.

(transform into present perfect)

ಇ. ವಿಶ್ವಸುಂದರಿಯನ್ನು ನೋಡಲು ದೇಶವಿದೇಶಗಳಿಂದ ಲಕ್ಷಾಂತರ ಜನರು ಬರುತ್ತಿದ್ದಾರೆ.

(transform into present indefinite)

ಈ. ಈಗ ನವರಾತ್ರಿಯನ್ನು ನಾಡಹಬ್ಬವಾಗಿ ಆಚರಿಸುತ್ತಾರೆ.

(transform into impersonal passive)

ಕ. ಸೀತ ಮಾರ್ಕೆಟ್ಟಿಗೆ ಹೋದಳು.

(transform into present progressive)

VI. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ನವರಾತ್ರಿ ಹಬ್ಬವನ್ನು ಯಾವಾಗ ಮತ್ತು ಎಷ್ಟು ದಿನಗಳ ಕಾಲ ಆಚರಿಸುತ್ತಾರೆ?

ಇ. ಜಂಬೂಸವಾರಿ ಎಂದರೆ ಏನು?

ಈ. ಗೊಂಬೆಹಬ್ಬದ ವೈಶಿಷ್ಟ್ಯವೇನು?

ಕ. ನವರಾತ್ರಿ ಹಬ್ಬ ಈಗ ನಾಡಹಬ್ಬವಾಗಿ ಹೇಗೆ ಆಚರಿಸಲ್ಪಡುತ್ತಿದೆ?

VII. ನೀವು ಆಚರಿಸುವ ಒಂದು ಪ್ರಮುಖ ಹಬ್ಬವನ್ನು ಕುರಿತು ಬರೆಯಿರಿ

VIII. ಕನ್ನಡಕ್ಕೆ ಭಾಷಾಂತರಿಸಿ

"Mother, please help me with my frock", says Gowri to her mother. "I can't put it on myself.

Gowri is getting dressed. She is a little girl. Today is a special day for her and the other girls there. It is the day of the festivals of Dolls. On this day, children wear their best clothes and display all their dolls. Their friends and relatives will visit them and admire the dolls.

Gowri is almost ready. Her mother has helped her to put on her prettiest frock. It has large colourful flowers on it. "Don't forget to put the flower for my hair", Gowri reminds her mother. "It matches the flowers on my frock".

Gowri's friends came to see the dolls. Gowri takes them to see her dolls. "How beautiful they are!" her friends exclaim when they see the dolls" and there are so many, too". Which of the dolls do you like best, Gowri asked little Nidhi. The Queen doll answers Nidhi. It has the loveliest dress. How did you get it?

"My father gave it to me", Gowri replied. "My father doesn't buy dolls for me", says Nidhi. He makes them himself. Then he asks my mother to sew clothes for them. My mother decorates the dolls very nicely. My parents present the dolls on my birthday.

"Please stay for dinner", Gowri asks her friends.

"Thanks Gowri", says Nidhi. "We all will stay for lunch.

6. ಅಧಿಕರಕ್ತದೊತ್ತಡ

ಮನುಷ್ಯನ ಆಯುಷ್ಯವನ್ನು ಹಠಾತ್ತಾಗಿ ಚಿವುಟಿಹಾಕುವ ಕಾಯಿಲೆ ಅಧಿಕರಕ್ತದೊತ್ತಡ. ಇದನ್ನು ವೈದ್ಯಕೀಯ ಭಾಷೆಯಲ್ಲಿ `ಹೈಪರ್ ಟೆನ್ಷನ್' ಎಂದು ಕರೆಯುತ್ತಾರೆ. ಸದ್ದಿಲ್ಲದೆ ಬಂದು ಸದ್ದಿಲ್ಲದಂತೆ ಕೊಂಡೊಯ್ಯುವ ಈ ಕಾಯಿಲೆ ಮೌನ ಹಂತಕ ಎಂಬ ಬಿರುದನ್ನೂ ಪಡೆದಿದೆ. ಇತ್ತೀಚೆಗೆ ಈ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ ಕಳವಳ ಉಂಟುಮಾಡುವಷ್ಟು ಹೆಚ್ಚಿದೆ.

ದೇಹದ ರಕ್ತನಾಳಗಳಲ್ಲಿ ಹರಿಯುವ ರಕ್ತಕ್ಕೆ ಒತ್ತಡ ಇದ್ದೇ ಇರುತ್ತದೆ. ಇದು ರಕ್ತಚಲನೆಗೆ ಅತ್ಯವಶ್ಯಕ. ಇದನ್ನು ಸಾಮಾನ್ಯ ರಕ್ತದೊತ್ತಡ ಎಂದು ಕರೆಯುತ್ತಾರೆ. ಸಾಮಾನ್ಯ ರಕ್ತದೊತ್ತಡದಲ್ಲಿ ಎರಡು ವಿಧಗಳಿವೆ. ಹೃದಯದ ಆಕುಂಚನ ಅಂದರೆ ಕುಗ್ಗುವಿಕೆಯಿಂದ ಹೊರಬೀಳುವ ರಕ್ತ,ರಕ್ತನಾಳವನ್ನು ಪ್ರವೇಶಿಸುವಾಗ ಉಂಟಾಗುವ ಒತ್ತಡವನ್ನು `ಸಂಕೋಚನ ಒತ್ತಡ' (Systolic pressure) ಎಂದೂ ಹೃದಯ ವ್ಯಾಕೋಚನಗೊಂಡಾಗ ಉಂಟಾಗುವ ರಕ್ತದೊತ್ತಡವನ್ನು `ತಿಗ್ಗಲಿನ ಒತ್ತಡ' (Diastolic pressure) ಎಂದೂ ಕರೆಯುತ್ತಾರೆ. ರಕ್ತದ ಒತ್ತಡವನ್ನು ಅಳೆಯುವ ಸಾಧನವೇ `ರಕ್ತದೊತ್ತಡ ಮಾಪಕ'.

ರಕ್ತದೊತ್ತಡ ವಯಸ್ಸಿಗನುಗುಣವಾಗಿರುತ್ತದೆ. ರಕ್ತದೊತ್ತಡದ ಪ್ರಮಾಣ 120/80 ಇದ್ದರೆ ಸಾಮಾನ್ಯ ಎಂದು ಪರಿಗಣಿಸಲಾಗುತ್ತದೆ. 120 ಅನ್ನು ಸಿಸ್ಟಾಲಿಕ್ ಒತ್ತಡ ಎಂದೂ 80 ಅನ್ನು ಡಯಾಸ್ಟಾಲಿಕ್ ಒತ್ತಡ ಎಂದೂ ಕರೆಯುತ್ತಾರೆ. ಸಾಮಾನ್ಯ ರಕ್ತದೊತ್ತಡ ಕೆಲವೊಮ್ಮೆ 140/90 ಕ್ಕೂ ಹೋಗಬಹುದು. ಅದಕ್ಕಿಂತ ಹೆಚ್ಚಾದಲ್ಲಿ ಮಾತ್ರ `ಅಧಿಕರಕ್ತದೊತ್ತಡ ' ಎನಿಸಿಕೊಳ್ಳುತ್ತದೆ.

ಅಂಕಿಅಂಶಗಳ ಪ್ರಕಾರ ವಿಶ್ವದ ಜನಸಂಖ್ಯೆಯ ಶೇ. 25 ರಷ್ಟು ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇದನ್ನು `ಮೂಲರಕ್ತದೊತ್ತಡ' (Espential Hypertention) ಎಂದು ಕರೆಯುತ್ತಾರೆ. ಕೇವಲ ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ

ಮಾತ್ರ ಈ ಕಾಯಿಲೆಗೆ ಕಾರಣವೇನೆಂಬುದನ್ನು ಪತ್ತೆಹಚ್ಚಬಹುದೇ ಹೊರತು ಉಳಿದ ಪ್ರಕರಣಗಳಲ್ಲಿ ಕಾರಣವನ್ನು ಕಂಡುಹಿಡಿಯಲಾಗುವುದೇ ಇಲ್ಲ.

ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ ರಕ್ತದೊತ್ತಡ ಹೆಚ್ಚಾಗಲು ಧೂಮಪಾನ, ಮದ್ಯಪಾನ, ಬೊಜ್ಜು ಮುಖ್ಯ ಕಾರಣಗಳು. ಇವುಗಳಲ್ಲದೆ ವ್ಯಕ್ತಿಯ ಕೌಟುಂಬಿಕ ಸಮಸ್ಯೆಗಳು, ವ್ಯಕ್ತಿಗಳ ನಡುವಿನ ಪರಸ್ಪರ ಸಂಬಂಧ (Interpersonal relationship) ಮುಂತಾದವುಗಳು ರಕ್ತಪರಿಚಲನೆಯ ಮೇಲೆ ನೇರ ಪರಿಣಾಮ ಉಂಟುಮಾಡುತ್ತದೆ. ಭಾವನಾತ್ಮಕ ಒತ್ತಡವೂ (Mental tension or anxiety) ರಕ್ತದೊತ್ತಡ ಗಮನಾರ್ಹವಾಗಿ ಹೆಚ್ಚಾಗಲು ಕಾರಣವಾಗುತ್ತದೆ. ಅಧಿಕರಕ್ತದೊತ್ತಡ ಅನುವಂಶೀಯವೂ ಹೌದು. ತಂದೆತಾಯಿಗಳಲ್ಲಿ ಅಧಿಕರಕ್ತದೊತ್ತಡ ಇದ್ದಲ್ಲಿ ಮಕ್ಕಳಲ್ಲಿ ಕಾಣಿಸಿಕೊಳ್ಳುವುದು ಸರ್ವಸಾಮಾನ್ಯ.

ತಲೆಸುತ್ತು, ತಲೆನೋವು, ಎದೆಬಡಿತ, ಮೂಗಿನಿಂದ ರಕ್ತಸ್ರಾವವೇ ಮುಂತಾದವು ಈ ರೋಗದ ಸಾಮಾನ್ಯ ಲಕ್ಷಣಗಳು. ಪ್ರಾರಂಭದಲ್ಲಿ ಈ ರೋಗದ ಯಾವ ಲಕ್ಷಣಗಳೂ ಕಾಣಿಸಿಕೊಳ್ಳುವುದಿಲ್ಲ.

ರಕ್ತದೊತ್ತಡದ ಹೆಚ್ಚಳದಿಂದ ರಕ್ತನಾಳಗಳು ತ್ವರಿತವಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ಇದರಿಂದಾಗಿ ಎದೆನೋವು, ಹೃದಯಾಘಾತ, ಪಾರ್ಶ್ವವಾಯು ಸಂಭವಿಸುತ್ತದೆ. ಅತಿಯಾದ ರಕ್ತದೊತ್ತಡ ಮೆದುಳಿನ ರಕ್ತನಾಳಗಳಿಗೆ ಹಾನಿ ಉಂಟುಮಾಡಿ ರಕ್ತಸ್ರಾವಕ್ಕೆ ದಾರಿಮಾಡಿಕೊಡುತ್ತದೆ. ದೀರ್ಘಕಾಲದ ಅಧಿಕರಕ್ತದೊತ್ತಡ ಮೂತ್ರಪಿಂಡಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದುದರಿಂದ ಈ ರೋಗ ನಿಯಂತ್ರಣಕ್ಕೆ ತುರ್ತುಕ್ರಮ ಕೈಗೊಳ್ಳಬೇಕಾಗುತ್ತದೆ.

ಅಧಿಕರಕ್ತದೊತ್ತಡವನ್ನು ಆರಂಭದಲ್ಲೇ ಪತ್ತೆಹಚ್ಚಿದಲ್ಲಿ ಯಶಸ್ವಿಯಾಗಿ ನಿಯಂತ್ರಿಸಬಹುದು. ರೋಗ ಅಂಕುರವಾದಾಗಲೇ ಕಟ್ಟುನಿಟ್ಟಿನ ಕ್ರಮಕೈಗೊಂಡಲ್ಲಿ ಔಷಧಿಗಳ ಸೇವನೆಯ ನೆರವಿಲ್ಲದೆ ಕೇವಲ ಉಪಚಾರದಿಂದಲೇ ನಿಯಂತ್ರಿಸಬಹುದು.

ಅಧಿಕರಕ್ತದೊತ್ತಡವನ್ನು ನಿಯಂತ್ರಣಕ್ಕೆ ತಂದುಕೊಳ್ಳಲು ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅವುಗಳಲ್ಲಿ ಉಪ್ಪಿನ ಮಿತ ಬಳಕೆಯೂ ಒಂದು. ದೇಹದ ತೂಕ ಹೆಚ್ಚಾಗದಂತೆ ನೋಡಿಕೊಳ್ಳುವುದು ಅಧಿಕರಕ್ತದೊತ್ತಡ ನಿಯಂತ್ರಣದ ಮತ್ತೊಂದು ಮುಖ್ಯ ಅಂಶ. ಮಿತ ಆಹಾರ ಮತ್ತು ಕೊಬ್ಬುರಹಿತ ಪದಾರ್ಥಗಳ ಸೇವನೆಯಿಂದ ತೂಕವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ.

ನಿಯಮಿತ ವ್ಯಾಯಾಮ ಅಂದರೆ ತೀವ್ರನಡಿಗೆ, ಜಾಗಿಂಗ್ ಮಾಡುವುದು ಒಳ್ಳೆಯದು. ವೈದ್ಯರ ಸಲಹೆಯನ್ನು ಪಡೆದುಕೊಂಡು ಯೋಗಾಸನವನ್ನೂ ಮಾಡಬಹುದು. ಅದರಲ್ಲೂ 'ಶವಾಸನ' ಮಾಡುವುದರಿಂದ ಕಾಯಿಲೆಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತಂದುಕೊಳ್ಳಬಹುದು.

ಕ್ಯಾಲ್ಷಿಯಂ ಮತ್ತು ಪೊಟಾಷಿಯಂ ಲವಣಗಳು ರಕ್ತದ ಒತ್ತಡವನ್ನು ಕಡಿಮೆ ಮಾಡುವುದರಿಂದ ಅವುಗಳು ಹೆಚ್ಚಾಗಿ ಸಿಗುವ ನುಗ್ಗೇಕಾಯಿ, ಬೀಟ್‌ರೂಟ್, ಎಲೆಕೋಸು ಮುಂತಾದ ತರಕಾರಿಗಳು, ಅಂಜೂರ, ಕಲ್ಲಂಗಡಿ ಮೊದಲಾದ ತಾಜಾ ಹಣ್ಣುಗಳು, ಉದ್ದು, ಎಳ್ಳು ಮುಂತಾದ ಧಾನ್ಯಗಳನ್ನು ಸೇವಿಸುವುದು ಒಳ್ಳೆಯದು. ಹಾಲು, ಮೀನು, ಮೊಟ್ಟೆಗಳಲ್ಲಿ ಕ್ಯಾಲ್ಷಿಯಂ ಹೆಚ್ಚಾಗಿರುವುದರಿಂದ ಅವುಗಳ ಹಿತಮಿತ ಸೇವನೆಯಿಂದ ಈ ರೋಗವನ್ನು ತಹಬಂದಿಗೆ ತಂದುಕೊಳ್ಳಬಹುದು.

ಅಧಿಕರಕ್ತದೊತ್ತಡ ಇರುವ ರೋಗಿಗಳು ಔಷದೋಪಚಾರವನ್ನಾಗಲೀ ನಿಯಮಿತ ವ್ಯಾಯಾಮವನ್ನಾಗಲೀ ಒಮ್ಮೆಲೆ ನಿಲ್ಲಿಸಿಬಿಡಬಾರದು. ಯಾವುದೇ ಔಷಧಿಯನ್ನು ಸೇವಿಸುವ ಅಥವಾ ನಿಲ್ಲಿಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಅತ್ಯಗತ್ಯ. ಆರೋಗ್ಯವೇ ಭಾಗ್ಯ ಎಂಬುದನ್ನು ಅರಿತುಕೊಂಡು ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ದುಶ್ಚಟಗಳಿಗೆ ದಾಸರಾಗದೇ ಶಿಸ್ತುಬದ್ಧ ಜೀವನವನ್ನು ನಡೆಸಿದಲ್ಲಿ ಈ ರೋಗ ತಗಲುವ ಸಂಭವ ಬಹಳ ಕಡಿಮೆ. ಈಗಾಗಲೇ ಈ ರೋಗ ತಗಲಿರುವವರು ಅದಕ್ಕೆ ಗಾಬರಿಪಟ್ಟುಕೊಳ್ಳದೇ ಯೋಗ್ಯ

ಚಿಕಿತ್ಸೆ, ಇಚ್ಛಾಶಕ್ತಿ ಹಾಗೂ ಸೂಕ್ತ ಉಪಚಾರಗಳಿಂದ ಈ ರೋಗವನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ನೆಮ್ಮದಿಯ ಜೀವನ ನಡೆಸಬಹುದು.

ಕಠಿಣಪದಗಳ ಅರ್ಥ

ಆಯುಷ್ಯ	–	life span
ಹಠತ್ತಾಗಿ	–	suddenly
ಸದ್ದು	–	ಶಬ್ದ, noise, sound
ರಕ್ತನಾಳ	–	blood vessel
ಹರಿ	–	to flow
ಒತ್ತಡ	–	pressure
ಆಕುಂಚನ	–	contraction
ಕುಗ್ಗುವಿಕೆ	–	ಆಕುಂಚನ, contraction
ವ್ಯಾಕೋಚನ	–	expansion
ಹಿಗ್ಗಲು	–	ವ್ಯಾಕೋಚನ, expansion
ಸಾಧನ	–	apparatus
ಕಾಡು	–	to trouble
ಅಂಕಿಅಂಶ	–	statistics
ಬಳಲು	–	ಆಯಾಸಗೊಳ್ಳು, ದಣಿ, to get tired
ಪತ್ತೆಹಚ್ಚು	–	to diagnose
ಕಂಡುಹಿಡಿ	–	to findout
ಬೊಜ್ಜು	–	obesity
ಪರಿಚಲನೆ	–	circulation

ಗಮನಾರ್ಹವಾಗಿ	–	considerably
ಅನುವಂಶೀಯ	–	heriditary
ಕಾಣಿಸಿಕೊಳ್ಳು	–	to carry, to appear, have symptoms
ತಲೆಸುತ್ತು	–	giddyness
ಎದೆಬಡಿತ	–	heart beat
ರಕ್ತಸ್ರಾವ	–	bleeding
ಹೃದಯಾಘಾತ	–	cardiac arrest
ಅತಿ	–	excess
ನಿಯಂತ್ರಣ	–	control
ಸೇವನೆ	–	consumption
ನೆರವು	–	help
ಉಪಚಾರ	–	nursing
ಮಿತಬಳಕೆ	–	limited use
ಕೊಬ್ಬು	–	fat
ತಾಜಾ	–	fresh
ಎಳ್ಳು	–	sesame seeds
ಉದ್ದು	–	black gram
ಧಾನ್ಯ	–	cereals
ಹಿತಮಿತ	–	balanced
ತಹಬಂದಿ	–	control
ನಿಯಮಿತ	–	regular
ತೀವ್ರನಡಿಗೆ	–	brisk walk
ಒಮ್ಮೆಲೆ	–	suddenly

ಅರಿ	–	to know
ದುಶ್ಚಟ	–	bad habit
ತಗಲು	–	to attack
ನೆಮ್ಮದಿ	–	contentment

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದಗಳನ್ನು ಬದಲಾಯಿಸಿ ಬರೆಯಿರಿ

ಮಾದರಿ: ಕುಟುಂಬ – ಕೌಟುಂಬಿಕ

ಅ. ಉದ್ಯಮ –

ಆ. ಪುರಾಣ –

ಇ. ಇತಿಹಾಸ –

ಈ. ಉದ್ಯೋಗ –

ಕ. ಭೂಗೋಳ –

II ಬಿಡಿಸಿ ಬರೆಯಿರಿ

ಅ. ವಯಸ್ಸಿಗನುಗುಣವಾಗಿ

ಆ. ಪರಿಗಣಿಸಲಾಗು

ಇ. ಒಬ್ಬರಿಗೊಬ್ಬರು

ಈ. ಕೊಂಡೊಯ್ಯುವ

ಕ. ಹೆಚ್ಚಾಗಿರುವುದರಿಂದ

ಗ. ರಕ್ತದೊತ್ತಡ

ಚ. ಪತ್ತೆಹಚ್ಚಬಹುದೇ

ಜ. ತಗುಲಿರುವವರು

III. ಕೂಡಿಸಿ ಬರೆಯಿರಿ

ಅ. ಸದ್ದು + ಇಲ್ಲದೆ . . . . . .

ಆ. ಉಪಚಾರದಿಂದ + ಏ . . . . . .

ಇ. ಉಂಟಾಗು + ಅ . . . . . .

ಈ. ಬೆರಳು + ಎಣಿಕೆ . . . . . .

ಕ. ಕುಗ್ಗು + ಇಕೆ . . . . . .

ಗ. ನೋಡಿಕೊಳ್ಳು + ಉದು . . . . . .

IV. ಸೂಕ್ತಪದದಿಂದ ಬಿಟ್ಟಿರುವ ಜಾಗವನ್ನು ತುಂಬಿ

ಅ. ರಕ್ತದೊತ್ತಡವನ್ನು ವೈದ್ಯಕೀಯ ಭಾಷೆಯಲ್ಲಿ ....ಎಂದು ಕರೆಯುತ್ತಾರೆ.

ಆ. ಹೃದಯದ ಕುಗ್ಗುವಿಕೆಯಿಂದ ಹೊರಬೀಳುವ ರಕ್ತ, ರಕ್ತನಾಳವನ್ನು ಪ್ರವೇಶಿಸುವಾಗ ಉಂಟಾಗುವ ಒತ್ತಡವನ್ನು ....ಎಂದು ಕರೆಯುತ್ತಾರೆ.

ಇ. ರಕ್ತದೊತ್ತಡದ ಪ್ರಮಾಣ 120/80 ಇದ್ದರೆ ....ಎಂದು ಪರಿಗಣಿಸಬೇಕು.

ಈ. ಹೃದಯ ವ್ಯಾಕೋಚನಗೊಂಡಾಗ ಉಂಟಾಗುವ ರಕ್ತದೊತ್ತಡವನ್ನು ....ಎನ್ನುತ್ತಾರೆ.

ಕ. 120 ಅನ್ನು .... ಒತ್ತಡ ಎಂದು ಕರೆಯುತ್ತಾರೆ.

ಗ. ....ಅನ್ನು ಡಯಾಸ್ಟಾಲಿಕ್ ಒತ್ತಡ ಎಂದು ಕರೆಯುತ್ತಾರೆ.

ಚ. ರಕ್ತದೊತ್ತಡ 140/90 ಕ್ಕಿಂತ ಹೆಚ್ಚಾದಲ್ಲಿ ಅದು ....

ಜ. ಅಧಿಕರಕ್ತದೊತ್ತಡ .... ಎಂಬ ಬಿರುದನ್ನೂ ಪಡೆದಿದೆ.

ಟ. .... ಜೀವನವನ್ನು ನಡೆಸಿದಲ್ಲಿ ಈ ರೋಗ ತಗಲುವ ಸಂಭವ ಬಹಳ ಕಡಿಮೆ.

V. ಕೆಳಕಂಡ ವಾಕ್ಯಗಳಲ್ಲಿ ಗೀಟುಹಾಕಿ ತೋರಿಸಿರುವ ಭಾಗವನ್ನು ಅರ್ಥ ಬದಲಾಯಿಸದಂತೆ ಬೇರೊಂದು ಪದ/ ಪದಪುಂಜದಿಂದ ಬದಲಾಯಿಸಿ

ಅ. ದೇಹದ ತೂಕ ಹೆಚ್ಚಾಗದಂತೆ ನೋಡಿಕೊಳ್ಳುವುದು ಅವಶ್ಯಕ.

ಆ. ಮಿತ ಆಹಾರ, ಕೊಬ್ಬುರಹಿತ ಪದಾರ್ಥಗಳ ಸೇವನೆಯಿಂದ ಈ ರೋಗವನ್ನು ತಡೆಗಟ್ಟಬಹುದು.

ಇ. ಅಧಿಕ ರಕ್ತದೊತ್ತಡವನ್ನು ಆರಂಭದಲ್ಲೇ ಪತ್ತೆಹಚ್ಚಿದಲ್ಲಿ ಯಶಸ್ವಿಯಾಗಿ ನಿಯಂತ್ರಿಸಬಹುದು.

ಈ. ಹಿತಮಿತ ಆಹಾರ ಸೇವನೆಯಿಂದ ಈ ರೋಗವನ್ನು ತಹಬಂದಿಗೆ ತಂದುಕೊಳ್ಳಬಹುದು.

ಕ. ಧೂಮಪಾನ, ಮದ್ಯಪಾನ ಮಾಡುವುದನ್ನು ತ್ಯಜಿಸುವುದು ಲೇಸು.

ಗ. ಅಧಿಕರಕ್ತದೊತ್ತಡ ಇರುವ ರೋಗಿಗಳು ಔಷಧ ಮತ್ತು ವ್ಯಾಯಾಮವನ್ನು ಒಮ್ಮೆಲೆ ನಿಲ್ಲಿಸಬಾರದು.

VI. ಕೆಳಗಿನ ಹೇಳಿಕೆಗಳಲ್ಲಿ ಸರಿಯಾದದ್ದನ್ನು ✓ ಚಿಹ್ನೆ ಹಾಕುವ ಮೂಲಕ ಮತ್ತು ಸರಿಯಲ್ಲದ್ದನ್ನು X ಚಿಹ್ನೆ ಹಾಕುವ ಮೂಲಕ ಗುರುತಿಸಿ

ಅ. ರಕ್ತಕ್ಕೆ ಒತ್ತಡ ಇದ್ದೇ ಇರುತ್ತದೆ.

ಆ. ತಂದೆತಾಯಿಗಳಿಗೆ ಅಧಿಕರಕ್ತದೊತ್ತಡವಿದ್ದಲ್ಲಿ ಮಕ್ಕಳಲ್ಲೂ ಕಾಣಿಸಿಕೊಳ್ಳುವುದು ಸರ್ವಸಾಮಾನ್ಯ.

ಇ. ಬಹಳಷ್ಟು ಪ್ರಕರಣಗಳಲ್ಲಿ ಅಧಿಕರಕ್ತದೊತ್ತಡಕ್ಕೆ ಕಾರಣವನ್ನು ತಿಳಿದುಕೊಳ್ಳಬಹುದು.

ಈ. ಸದ್ದಿಲ್ಲದೆ ಬಂದು ಸದ್ದಿಲ್ಲದೆ ಕೊಂಡೊಯ್ಯುವ ಈ ಕಾಯಿಲೆಯನ್ನು ಮೌನಹಂತಕ ಎಂದು ಕರೆಯುತ್ತಾರೆ.

ಕ. ಔಷಧಿಗಳ ಸೇವನೆಯ ನೆರವಿಲ್ಲದೆ ಅಧಿಕರಕ್ತದೊತ್ತಡವನ್ನು ಹತೋಟಿಗೆ ತಂದುಕೊಳ್ಳಬಹುದು.

VII. ವಾಕ್ಯದಲ್ಲಿ ಪ್ರಯೋಗಿಸಿ

ಅ. ವಯಸ್ಸಿಗನುಗುಣವಾಗಿ	ಗ. ಕೇವಲ
ಆ. ಪತ್ತೆಹಚ್ಚು	ಚ. ಗಮನಾರ್ಹವಾಗಿ
ಇ. ಆದರಲ್ಲೂ	ಜ. ಅನುವಂಶೀಯ
ಈ. ಸರ್ವಸಾಮಾನ್ಯ	ಟ. ಕೆಲವೊಮ್ಮೆ
ಕ. ಅಂದರೆ	ಡ. ಎಂದೂ

VIII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ರಕ್ತದೊತ್ತಡವನ್ನು ಅಳೆಯುವ ಸಾಧನವನ್ನು ಏನೆಂದು ಕರೆಯುತ್ತಾರೆ?

ಆ. ಮೂಲ ರಕ್ತದೊತ್ತಡ ಎಂದರೇನು?

ಇ. ಅಧಿಕರಕ್ತದೊತ್ತಡ ಹೆಚ್ಚಾಗಲು ಕಾರಣ ಏನು?

ಈ.ರಕ್ತದೊತ್ತಡ ಎಂತಹವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ?

ಕ. ಅಧಿಕರಕ್ತದೊತ್ತಡದ ಸಾಮಾನ್ಯ ಲಕ್ಷಣಗಳೇನು?

ಗ. ಅಧಿಕರಕ್ತದೊತ್ತಡವನ್ನು ಸೈಲೆಂಟ್ ಕಿಲ್ಲರ್ ಎಂದು ಏಕೆ ಕರೆಯುತ್ತಾರೆ?

ಚ. ಅಧಿಕರಕ್ತದೊತ್ತಡದಿಂದ ಸಂಭವಿಸಬಹುದಾದ ಅನಾಹುತಗಳಾವುವು?

ಜ. ಅಧಿಕರಕ್ತದೊತ್ತಡದ ನಿಯಂತ್ರಣ ಹೇಗೆ?

ಟ. ಸ್ಥೂಲದೇಹಿಗಳು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು ಯಾವುವು?

ಡ. ಅಧಿಕರಕ್ತದೊತ್ತಡದವರಿಗೆ ನಿಮ್ಮ ಕಿವಿಮಾತು ಏನು?

IX. ಕನ್ನಡಕ್ಕೆ ಭಾಷಾಂತರಿಸಿ

Blood doesn't flow through the human body the way water flows through a regular series of pipes. The vessels through which blood is pumped out of the heart to all parts of the body are the arteries. But the arteries that are

some distance from the heart keep on dividing and dividing until they become tiny vessels called capillaries. And the blood flows much more slowly through these vessels than it does through arteries.

Capillaries are fifty times thinner than a human hair. So that the blood corpuscles pass through them in single file. It takes a quantity of blood about one second to flow through arteries.

Blood is constantly flowing through the heart. It takes about 1.5 seconds for a given quantity of blood to pass through the heart. Blood flows from the heart to the lung and back to the heart. This takes about 5 to 7 seconds.

Blood flows from the heart to the brain and back to the heart. This takes about eight seconds. The longest trip the blood has to make is from the heart through the trunk and the legs to the toes and then back to the heart. This takes about 18 seconds.

The time required for the blood to circulate through the entire body - that is, from the heart to the lung to the heart to the body to the heart - is about 23 seconds. But the condition of the body has an effect on how fast the blood flows.

7. ಯಕ್ಷಗಾನ

ಯಕ್ಷಗಾನ ಕರ್ನಾಟಕದ ಒಂದು ವಿಶಿಷ್ಟ ಜನಪದ ಕಲೆ. ಇದು ಕರ್ನಾಟಕದಾದ್ಯಂತ ಹಲಕೆಲವು ವ್ಯತ್ಯಾಸಗಳೊಂದಿಗೆ ಪ್ರಚಲಿತವಾಗಿದೆ. ಹೀಗಾಗಿ ಇದರ ಹೆಸರೂ ಹಲವಾರು. ಯಕ್ಷಗಾನ, ಯಕ್ಷಗಾನ ಬಯಲಾಟ, ಬಯಲಾಟ, ಬಯಲ್ಕತೆ, ಆಟ್ಟದಾಟ, ಮೇಳ ಮೊದಲಾದ ಹೆಸರುಗಳು ರೂಢಿಯಲ್ಲಿರುವುದು ಕಂಡು ಬರುತ್ತದೆ.

ಯಕ್ಷಗಾನ ಕೇವಲ ಗಾನ ಮಾತ್ರವಲ್ಲ. ಅದು ಸಂಗೀತ, ಸಾಹಿತ್ಯ, ನಾಟ್ಯ, ವಾದ್ಯ , ಬಣ್ಣ ಬೇಗಡೆಗಳಿಂದ ಸಂಪನ್ನವೂ ಸಮೃದ್ಧವೂ ಆದ ಸಮಷ್ಟಿ ಕಲೆ. ಶೃತಿ, ರಾಗ, ಲಯಗಳಿಂದ ರೂಪುಗೊಂಡಿರುವ ಯಕ್ಷಗಾನ ಕರ್ನಾಟಕ ಹಾಗೂ ಹಿಂದುಸ್ಥಾನಿ ಸಂಗೀತ ಸಂಪ್ರದಾಯಗಳಿಗಿಂತ ಭಿನ್ನವಾದ ಒಂದು ದೇಸೀ ಗೀತ ಸಂಪ್ರದಾಯ.

ಯಕ್ಷಗಾನವನ್ನು ಯಕ್ಷರು ಪೂಜೆಗಾಗಿ ಬಳಸಿದ ಗಾನ ಅಥವ ಹಾಡು ಎಂದು ಕೆಲವರು ಅರ್ಥೈಸಿರುತ್ತಾರೆ. ಅಲ್ಲದೆ ಸಂಸ್ಕೃತದ `ಯಕ್ಷ' ಧಾತುವಿಗೆ `ಪೂಜಿಸು' ಎಂಬ ಅರ್ಥವಿರುವುದರಿಂದ ಯಕ್ಷಗಾನ ದೇವತಾರಾಧನೆಗಾಗಿ ಜನ್ಮತಳೆದ ಕಲೆಯಾಗಿರಬಹುದು. 1105ರ ನೇಮಿಚಂದ್ರನ ಮಲ್ಲಿನಾಥಪುರಾಣ, 1189 ರ ಅಗ್ಗಳನ ಚಂದ್ರಪ್ರಭಪುರಾಣಗಳಲ್ಲಿ ಎಕ್ಕಲಗಾಣ ಎಂಬ ಹೆಸರು ಬಳಕೆಯಾಗಿದ್ದು ಅದು ಸಂಗೀತಗಾರ ಎಂಬ ಅರ್ಥವನ್ನು ಸೂಚಿಸುತ್ತದೆ. ಅಲ್ಲದೆ ಹಲವಾರು ಕನ್ನಡ ಕಾವ್ಯಗಳಲ್ಲಿ ಎಕ್ಕ, ಎಕ್ಕಡಿಗ, ಜಕ್ಕ, ಯಕ್ಷಾಂದೋಳ ಮೊದಲಾದ ಪದಗಳು ಬಳಕೆಯಾಗಿವೆ. ಎಕ್ಕಲಗಾಣನೆಂದರೆ ಯಕ್ಷಗಾನಚಾರ್ಯ, ಭಾಗವತ ಅಥವಾ ಸೂತ್ರಧಾರ ಎಂಬ ಅರ್ಥಗಳಿವೆ. ಯಕ್ಷಗಾನ ಪ್ರಾರಂಭಿಕ ಅವಸ್ಥೆಯಲ್ಲಿ ಗಾನರೂಪದಲ್ಲೇ ಇದ್ದು ಭಾಗವತನೊಬ್ಬನೇ ಹಾಡುತ್ತಿದ್ದಿರಬೇಕು.

19ನೇ ಶತಮಾನದವರೆಗೆ ಗಾನ ಮಾತ್ರವಾಗಿದ್ದು ಅಲ್ಲಿಂದೀಚೆಗೆ ಇಂದು ಕಾಣುವ ಎಲ್ಲ ಅಂಶಗಳನ್ನೂ ತುಂಬಿಕೊಂಡು ಬೆಳೆಯಿತು ಎಂದು ಹೇಳಬಹುದು.

ಯಕ್ಷಗಾನದಲ್ಲಿ ಪ್ರಮುಖವಾಗಿ ಎರಡು ಸಂಪ್ರದಾಯಗಳಿವೆ. ಅವುಗಳನ್ನು ಮೂಡಲಪಾಯ ಮತ್ತು ಪಡುವಲಪಾಯ ಎಂದು ಕರೆಯುತ್ತಾರೆ. ಬಯಲುನಾಡಿನ ಯಕ್ಷಗಾನ ಸಂಪ್ರದಾಯಕ್ಕೆ `ಮೂಡಲಪಾಯ' ಎಂದೂ ಕರಾವಳಿಯಲ್ಲಿನ ಯಕ್ಷಗಾನಕ್ಕೆ `ಪಡುವಲಪಾಯ' ಎಂದೂ ಹೆಸರು. ಪಡುವಲಪಾಯದಲ್ಲಿ `ತೆಂಕುತಿಟ್ಟು' ಮತ್ತು `ಬಡಗುತಿಟ್ಟು' ಎಂಬ ಎರಡು ಪ್ರಭೇದಗಳಿದ್ದು ಇವುಗಳು ಮೂಲ ಸ್ವರೂಪದಲ್ಲಿ ಒಂದೇ ಆಗಿದ್ದು, ಬೆಳೆದುಬಂದ ಪ್ರಾದೇಶಿಕ ಭಿನ್ನತೆಯಿಂದ ಈ ಹೆಸರುಗಳು ಬಳಕೆಯಲ್ಲಿ ಬಂದಿವೆ.

ಯಕ್ಷಗಾನದಲ್ಲಿ ಒಂದೊಂದು ಕಥಾನಕವನ್ನೂ `ಪ್ರಸಂಗ' ಎಂದು ಕರೆಯುತ್ತಾರೆ. ಪ್ರಸಂಗ ಎಂದರೆ ಮೂಲಕಥೆಯಿಂದ ಆಯ್ದುಕೊಂಡ ಒಂದು ಸನ್ನಿವೇಶ ಅಥವಾ ಕಥಾಭಾಗ. ಪ್ರಸಂಗಗಳು ರಾಮಾಯಣ, ಮಹಾಭಾರತ ಮತ್ತು ಭಾಗವತಗಳ ಕತೆಯನ್ನು ಆಧರಿಸಿದಂತಹವುಗಳಾಗಿರುತ್ತವೆ. ಇಂತಹ ಮುನ್ನೂರಕ್ಕೂ ಹೆಚ್ಚು ಪ್ರಸಂಗಗಳು ಪ್ರದರ್ಶನ ಕಂಡಿವೆ. ಭೀಷ್ಮವಿಜಯ, ಕನಕಾಂಗಿ, ಐರಾವತ, ನಳದಮಯಂತಿ, ಉತ್ತರಗೋಗ್ರಹಣ, ಅಭಿಮನ್ಯು ವಧೆ, ಬಾಣಾಸುರಕಾಳಗ, ರತಿಕಲ್ಯಾಣ, ಕುಮಾರ ವಿಜಯ ಮುಂತಾದವು ಪ್ರಸಿದ್ಧ ಪ್ರಸಂಗಗಳು.

ಯಕ್ಷಗಾನ ಕಥನಗಳು ಪ್ರಣಯ, ವ್ಯಕ್ತಿದ್ವೇಷ, ವಿವಿಧ ನಿಷ್ಠೆಗಳ ತಾಕಲಾಟ, ಕೊಟ್ಟಮಾತನ್ನು ಎಷ್ಟೇ ಕಷ್ಟ ಬಂದರೂ ಪಾಲಿಸುವ ಹಟ – ಇಂತಹ ಪ್ರವೃತ್ತಿಗಳಿಂದ ನಡೆಯುತ್ತಾ ಹೋಗಿ ಕೊನೆಯಲ್ಲಿ ದುಷ್ಟ ಶಿಕ್ಷಣದಲ್ಲೋ ಶಿಷ್ಟರಕ್ಷಣೆಯಲ್ಲೋ ಪ್ರೇಮಕ್ಕೆ ಪುರಸ್ಕಾರದಲ್ಲೋ ಕೊನೆಗೊಳ್ಳುತ್ತವೆ.

ಯಕ್ಷಗಾನ ಪ್ರಸಂಗಗಳನ್ನು ತೆರೆದ ಬಯಲುಗಳಲ್ಲಿ ಆಡುತ್ತಾರೆ. ಇದರ ರಂಗಸಜ್ಜಿಕೆಗೆ ನಾಲ್ಕು ಕಂಬಗಳಿಗಿಂತ ಹೆಚ್ಚಿನ ಪರಿಕರ ಬೇಕಾಗುವುದಿಲ್ಲ.

ಅಲಂಕಾರಕ್ಕೆಂದು ಮಾವಿನ ಸೊಪ್ಪನ್ನೋ ಬಾಳೆಯ ಕಂದನ್ನೋ ಕಟ್ಟುತ್ತಾರೆ. ಈ ನಾಲ್ಕು ಕಂಬಗಳ ಮಧ್ಯೆ ಉಳಿಯುವ ಜಾಗವೇ ಕುಣಿಯುವ ಸ್ಥಳ. ಅಲ್ಲಿಯೇ ಹಿಂಭಾಗದಲ್ಲಿ ಭಾಗವತರು ಹಾಗೂ ಹಿಮ್ಮೇಳದವರು ಕೂರುತ್ತಾರೆ. ಯಕ್ಷಗಾನವನ್ನು ಪ್ರದರ್ಶಿಸುವ ಗುಂಪನ್ನು ಮೇಳ ಎಂದು ಕರೆಯುತ್ತಾರೆ.

ಯಕ್ಷಗಾನ ಪ್ರಸಂಗಗಳ ಪ್ರದರ್ಶನ ಸಾಮಾನ್ಯವಾಗಿ ರಾತ್ರಿ 10 ಗಂಟೆಗೆ ಪ್ರಾರಂಭವಾಗಿ ಸೂರ್ಯೋದಯದವರೆಗೂ ನಡೆಯುವುದುಂಟು. ಪ್ರಸಂಗಗಳನ್ನು ಪ್ರದರ್ಶಿಸುವ ಮೊದಲು `ಸಭಾಲಕ್ಷಣ' ಎಂಬ ಪ್ರಸ್ತಾವನೆಯನ್ನು ಒದಗಿಸುತ್ತಾರೆ. `ಸಭಾಲಕ್ಷಣ' ಎಂದರೆ ರಂಗಸ್ಥಳದ ಗುಣಧರ್ಮದ ವಿವರಣೆ ಎಂದು ಅರ್ಥ. ಭಾಗವತರು ದೇವತಾಸ್ತುತಿ ಮಾಡುತ್ತಾ ಮೊದಲು ರಂಗಪ್ರವೇಶ ಮಾಡುತ್ತಾರೆ. ಅನಂತರ ಗಣಪತಿಯ ಪ್ರವೇಶವಾಗುತ್ತದೆ. ಗಣಪತಿಯನ್ನು ಪೂಜಿಸಿ ವರಪಡೆದುಕೊಂಡ ಮೇಲೆ ಶಾರದೆಯನ್ನು ಬರಮಾಡಿಕೊಳ್ಳಲಾಗುತ್ತದೆ. ನಂತರ ಸಂಪೂರ್ಣ ವೇಷಧಾರಿಗಳಾದ ಇಬ್ಬರು ಬಾಲಕರು ರಂಗಸ್ಥಳಕ್ಕೆ ಕಾಲಿರಿಸಿ ಭಾಗವತನ ಹಾಡು, ತಾಳಗಳಿಗೆ ತಕ್ಕಂತೆ ಕುಣಿಯತೊಡುಗುತ್ತಾರೆ. ಇವರೇ ಬಾಲಗೋಪಾಲಕರು. ಆಟಕ್ಕೆ ಯಾವ ರೀತಿಯ ಭಂಗವೂ ಬಾರದೆ ಸುಸೂತ್ರವಾಗಿ ನಡೆಯಲೆಂದು ಅವರಿಂದಲೂ ವರವನ್ನು ಬೇಡಲಾಗುತ್ತದೆ. ಇವರುಗಳ ಜೊತೆಜೊತೆಯಲ್ಲಿಯೇ ಹನುಮನಾಯಕನ ಪ್ರವೇಶವೂ ಆಗುತ್ತದೆ. ಯಕ್ಷಗಾನದಲ್ಲಿ ಬರುವ ಏಕೈಕ ಹಾಸ್ಯಪಾತ್ರವೆಂದರೆ ಹನುಮನಾಯಕನದು ಮಾತ್ರ. ಸಾಂಪ್ರದಾಯಕವಾಗಿ ಎಲ್ಲಾ ದೇವರುಗಳ ಆರಾಧನೆಯೂ ಮುಗಿದ ಮೇಲೆ ಅಂದಿನ ಕಥೆಯ ಮುಖ್ಯ ಪಾತ್ರಧಾರಿಗಳು ರಂಗವನ್ನು ಪ್ರವೇಶಿಸುತ್ತಾರೆ. ಪಾತ್ರಗಳು ರಂಗವನ್ನು ಪ್ರವೇಶಿಸುವಾಗ ಕುಣಿಯುತ್ತಲೇ ಪ್ರವೇಶಿಸುವುದು ವಾಡಿಕೆ. ಕುಣಿದು ಸುಸ್ತಾದ ಮೇಲೆ ಹನುಮನಾಯಕ ಆಯಾ ವೇಷಧಾರಿಗಳನ್ನು ತನ್ನದೇ ಆದ ಹಾಸ್ಯ ಭಂಗಿಯಲ್ಲಿ ವಿಚಾರಿಸಿಕೊಳ್ಳುತ್ತಾನೆ. ಮುಕ್ತಾಯವನ್ನು ಹಾಡುವಾಗ ಎಲ್ಲ ಪಾತ್ರಧಾರಿಗಳೂ ರಂಗದ ಮೇಲಿರುತ್ತಾರೆ. ಅಲ್ಲಿಂದ ನೇರವಾಗಿ ಹತ್ತಿರದ ದೇವಸ್ಥಾನಕ್ಕೆ ಹೋಗಿ ವೇಷಭೂಷಣಗಳನ್ನು ಕಳಚುತ್ತಾರೆ.

ಯಕ್ಷಗಾನದ ವೇಷಭೂಷಣಗಳು ಅತ್ಯಂತ ಸೊಗಸಾಗಿರುತ್ತವೆ. ಯಕ್ಷಗಾನದ ವೈಭವವಿರುವುದೇ ವೇಷಭೂಷಣಗಳಲ್ಲಿ. ಪುರುಷಪಾತ್ರಧಾರಿಗಳು ಕಿರೀಟ, ಪಗಡೆ, ಕರ್ಣಕುಂಡಲ, ಭುಜಕೀರ್ತಿ, ತೋಳಬಂದಿ, ಎದೆಹಾರ, ಕಾಲ್ಕಡಗ, ನಡುಕಟ್ಟುಗಳನ್ನು ಧರಿಸುತ್ತಾರೆ. ಸ್ತ್ರೀಪಾತ್ರಧಾರಿಗಳು ಹೊನ್ನೋಲೆ, ಬುಗುಡಿ, ಒಡ್ಯಾಣ, ಟೀಕೀಸರ, ಬಳೆ, ಮೂಗುತಿ, ಕೈಚಿನ್ನ, ಝುಲ್ಲರಿ, ಉಂಗುರ, ಗೆಜ್ಜೆಗಳನ್ನು ಧರಿಸುತ್ತಾರೆ. ಈ ಭೂಷಣಗಳನ್ನು ಮರ ಮತ್ತು ಬಟ್ಟೆಯಿಂದ ತಯಾರಿಸುತ್ತಾರೆ. ಮುಖಕ್ಕೆ ಬಳಸುವ ವಿವಿಧ ಬಗೆಯ ಬಣ್ಣಗಳು ಪಾತ್ರಗಳನ್ನು ಅವಲಂಭಿಸಿರುತ್ತವೆ. ಸಾತ್ವಿಕ, ಸೌಮ್ಯಸ್ವಭಾವದವರಿಗೆ ಒಂದು ರೀತಿಯ ಬಣ್ಣವಾದರೆ ವೀರ ಪಾತ್ರಗಳಿಗೆ ಮತ್ತೊಂದು ರೀತಿಯ ಬಣ್ಣವನ್ನು ಬಳಸುತ್ತಾರೆ. ದೈತ್ಯಪಾತ್ರಗಳ ವೇಷಭೂಷಣ, ಬಣ್ಣಗಳಂತೂ ಉಗ್ರವಾಗಿರುತ್ತದೆ. ಯಕ್ಷಗಾನದ ಯಾವ ವೇಷಧಾರಿಯೂ ಮುಖವಾಡವನ್ನು ಧರಿಸುವುದಿಲ್ಲ.

ಯಕ್ಷಗಾನದಲ್ಲಿ ಪಾತ್ರಧಾರಿಗಳು ಹಾಡುವುದು ಕಡಿಮೆ. ಭಾಗವತರೇ ಹಾಡುತ್ತಾರೆ. ಪಾತ್ರಧಾರಿಗಳು ಭಾಗವತನ ಹಾಡಿಗೆ ಅನುಗುಣವಾಗಿ ರೂಪುಗೊಂಡ ಗದ್ಯದಲ್ಲಿ ಸಂಭಾಷಣೆಯನ್ನು ನಡೆಸುತ್ತಾರೆ. ಇದು ಒಂದು ರೀತಿಯ ಆಶುಗದ್ಯ ಸಾಹಿತ್ಯ. ಇದರಲ್ಲಿಯೂ ಮೂಡಲಪಾಯಕ್ಕೂ ಪಡುವಲಪಾಯಕ್ಕೂ ವ್ಯತ್ಯಾಸಗಳಿರುವುದು ಗಮನಾರ್ಹವಾಗಿ ಕಂಡು ಬರುತ್ತದೆ. ಮೂಡಲಪಾಯದ ಗದ್ಯ ಕವಿನಿರ್ಮಿತವಾಗಿದ್ದು ವೇಷಧಾರಿಗಳು ಬಾಯಿಪಾಠ ಮಾಡಿಕೊಂಡು ಮಾತನಾಡುತ್ತಾರೆ. ಪಡುವಲಪಾಯದ ಸಂಭಾಷಣೆ ಪಾತ್ರಧಾರಿಗಳಿಂದಲೇ ರಂಗದ ಮೇಲೆಯೇ ನಿರ್ಮಿತವಾಗುವ ಸಾಹಿತ್ಯ.

ಯಕ್ಷಗಾನದಲ್ಲಿ ಬಳಸುವ ವಾದ್ಯ ವಿಶೇಷಗಳ ಸಂಖ್ಯೆ ಹೆಚ್ಚಿಲ್ಲದಿದ್ದರೂ ಮಹತ್ವಪೂರ್ಣವಾದದ್ದು. ಮೂಡಲಪಾಯದಲ್ಲಿ ಬಳಸುವ ವಿಶಿಷ್ಟವಾದ ಮುಖವೀಣೆ ಹಾಗೂ ಪಡುವಲಪಾಯದಲ್ಲಿ ಬಳಸುವ `ಚಂಡೆ' ಅತ್ಯಂತ ಮಹತ್ವದಿಂದ ಕೂಡಿದವುಗಳೆನಿಸಿವೆ. ಉಳಿದ ವಾದ್ಯಗಳೆಂದರೆ ತಾಳ, ತಬಲ, ಹಾರ್ಮೋನಿಯಂ ಮುಂತಾದವುಗಳು.

ಯಕ್ಷಗಾನ ಪ್ರಸಂಗಗಳ ಕರ್ತೃಗಳಲ್ಲಿ ರಾಮಪುತ್ರ, ವಿಷ್ಣು, ನಗಿರೆಯ ಸುಬ್ರಹ್ಮಣ್ಯ, ಪಾಂಡೇಶ್ವರ ವೆಂಕಟ, ದೇವದಾಸ, ಧ್ವಜಪುರದ ನಾಗಪ್ಪಯ್ಯ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮಭಟ್ಟ, ನಿತ್ಯಾನಂದ ಅವಧೂತ, ಅಜಪುರದ ಸುಬ್ಬ, ವೆಂಕಟ, ವೆಂಕಣ್ಣ, ಗೇರುಸೊಪ್ಪೆ ಶಾಂತಪ್ಪಯ್ಯ, ನಂದಳಿಕೆ ಲಕ್ಷ್ಮೀನಾರಾಯಣ, ಬೋರಾಡಿ ವೆಂಕಟರಾಮಯ್ಯ, ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿಗಳೇ ಮುಂತಾದವರು ಪ್ರಮುಖರು.

ಯಕ್ಷಗಾನ ಭಾರತದೇಶದಲ್ಲಿ ಉಳಿದುಬಂದಿರುವ ಹಲವು ರಂಗ ಸಂಪ್ರದಾಯಗಳಲ್ಲಿ ಕರ್ನಾಟಕದವರ ಪಾಲಿಗೆ ಇರುವ ಒಂದು ಸುಂದರ ಶಕ್ತಿಯುತ ಸಂಪ್ರದಾಯ. ಯಕ್ಷಗಾನದ ಶ್ರೇಷ್ಠ ಕಲಾವಿದರಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳಾದ ಡಾ.ಶಿವರಾಮ ಕಾರಂತರು ಯಕ್ಷಗಾನ ಕಲೆಯನ್ನು ಪರಿಷ್ಕರಿಸಿ ಅದಕ್ಕೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮನ್ನಣೆಯನ್ನು ತಂದು ಕೊಟ್ಟಿರುತ್ತಾರೆ. ಈ ಅಮೂಲ್ಯ ಕಲೆಯನ್ನು ಉಳಿಸಿ, ಬೆಳೆಸಲು ಉಡುಪಿಯಲ್ಲಿ ಒಂದು ಯಕ್ಷಗಾನ ಕೇಂದ್ರವನ್ನು ಸ್ಥಾಪಿಸಿ ಯಕ್ಷಗಾನದ ಶಾಸ್ತ್ರೀಯ ಹಾಗೂ ಕ್ರಮಬದ್ಧ ಶಿಕ್ಷಣಕ್ಕೆ ಅವಕಾಶಕ ಮಾಡಿಕೊಟ್ಟಿರುತ್ತಾರೆ.

ಕಠಿಣಪದಗಳ ಅರ್ಥ

ವಿಶಿಷ್ಟ	–	distinct
ಜನಪದ	–	folk
ದೇಶಿ	–	native
ಕರಾವಳಿ	–	coastal area
ನಿಷ್ಠೆ	–	loyalty
ತಾಕಲಾಟ	–	friction among opposing loyalties

ಪುರಸ್ಕಾರ	–	reward
ರಂಗಸಜ್ಜಿಕೆ	–	stage properties
ಪರಿಕರ	–	paraphernalia, equipment, apparatus
ಹಿಮ್ಮೇಳ	–	background music
ಸೂತ್ರಧಾರ	–	the narrator
ಸಭಾಲಕ್ಷಣ	–	etiquette of theatre
ರಂಗಸ್ಥಳ	–	stage
ಗುಣಧರ್ಮ	–	etiquette
ತಾಳ	–	musical time or measure
ವಾಡಿಕೆ	–	usual practice
ಕಳಚು	–	to take off (clothes)
ಕರ್ಣಕುಂಡಲ	–	a type of ear-ring
ಭುಜಕೀರ್ತಿ	–	An epaulette-like ornament for the upper arm
ತೋಳಬಂದಿ	–	a bracelet worn on the upper arm
ಎದೆಹಾರ	–	A chain hanging over the chest, a necklace
ನಡುಕಟ್ಟು	–	a waist band, a girdle
ಒಡ್ಯಾಣ	–	a waist band, a girdle (for women)
ಮೂಗುತಿ	–	nose ring
ಗೆಜ್ಜೆ	–	anklet with bells
ಮುಖವಾಡ	–	mask
ಮುಖವೀಣೆ	–	a kind of pipe or flageolet,a musical instrument.
ಚೆಂಡೆ	–	ಎರಡು ಕಡ್ಡಿಗಳಿಂದ ಬಡಿಯುವ, ತೀಕ್ಷ್ಣನಾದವನ್ನು ಹೊರಡಿಸುವ ಒಂದು ತೆರನ ಡೋಲು, drum

ತಬಲ	–	a pair of small drums played with the hands.
ಹಾರ್ಮೋನಿಯಂ	–	harmonium (a percussion instrument)
ಮನ್ನಣೆ	–	respect, acclamation
ಕ್ರಮಬದ್ಧ	–	systamatic

ಅಭ್ಯಾಸಗಳು

I. ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. .... ಒಂದೊಂದು ಕಥಾನಕವನ್ನೂ ಪ್ರಸಂಗ ಎಂದು ಕರೆಯುತ್ತಾರೆ (ಯಕ್ಷಗಾನ).

ಆ. ಪಡುವಲಪಾಯ ....ಮೂಡಲಪಾಯ ಯಕ್ಷಗಾನ ಭಿನ್ನ (ಯಕ್ಷಗಾನ).

ಇ. ....ಬಯಲಾಟ, ಬಯಲ್ಕತೆ, ಅಟ್ಟದಾಟ, ಮೇಳ ಎಂಬ ಹೆಸರುಗಳೂ ಇವೆ (ಯಕ್ಷಗಾನ).

ಈ. ಕರಾವಳಿಯಲ್ಲಿನ ....ಪಡುವಲಪಾಯ ಎಂದು ಕರೆಯುತ್ತಾರೆ (ಯಕ್ಷಗಾನ).

ಉ. ....ಎರಡು ಪ್ರಮುಖ ಸಂಪ್ರದಾಯಗಳಿವೆ (ಯಕ್ಷಗಾನ).

II. ಕೆಳಕಂಡ ವಾಕ್ಯಗಳಲ್ಲಿ ಗೀಟುಹಾಕಿ ತೋರಿಸಿರುವ ಪದಗಳನ್ನು ಸಮಾನಾರ್ಥ ಪದದಿಂದ ಬದಲಾಯಿಸಿ

ಅ. ಇದರ ಹೆಸರೂ ಹಲವಾರು ಬಗೆಯಲ್ಲಿ ಇರುವುದು ಕಂಡು ಬರುತ್ತದೆ.

ಆ. ನಾಲ್ಕು ಕಂಬಗಳ ಮಧ್ಯೆ ಉಳಿಯುವ ಜಾಗವೇ ಕುಣಿಯುವ ಸ್ಥಳ.

ಇ. ಅಂದಿನ ಕಥೆಯ ಮುಖ್ಯ ಪಾತ್ರಧಾರಿಗಳು ಮೊದಲು ಪ್ರವೇಶಿಸುತ್ತಾರೆ.

ಈ. ಪಾತ್ರಗಳು ರಂಗವನ್ನು ಪ್ರವೇಶಿಸುವಾಗ ಕುಣಿಯುತ್ತಲೇ ಪ್ರವೇಶಿಸುವುದು ವಾಡಿಕೆ.

ಕ. ಯಕ್ಷಗಾನದಲ್ಲಿ ಬರುವ ಒಂದೇ ಒಂದು ಹಾಸ್ಯ ಪಾತ್ರ ಹನುಮ ನಾಯಕನದು.

ಗ. ದೈತ್ಯ ಪಾತ್ರಗಳ ಬಣ್ಣಗಳಂತೂ ಉಗ್ರವಾಗಿರುತ್ತದೆ.

III. ಸೂಕ್ತಪದದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಕರಾವಳಿಯಲ್ಲಿನ ಯಕ್ಷಗಾನಕ್ಕೆ .... ಎಂದು ಹೆಸರು.

ಆ. ....ಎಂದರೆ ಯಕ್ಷಗಾನಾಚಾರ್ಯ, ಭಾಗವತ ಅಥವಾ ಸೂತ್ರಧಾರ ಎಂಬ ಅರ್ಥವಿದೆ.

ಇ. ಯಕ್ಷಗಾನ ಕಥಾನಕವನ್ನು ....ಎಂದು ಕರೆಯುತ್ತಾರೆ.

ಈ. ಯಕ್ಷಗಾನವನ್ನು ಪ್ರದರ್ಶಿಸುವ ಗುಂಪನ್ನು ....ಎಂದು ಕರೆಯುತ್ತಾರೆ.

ಕ. ಯಕ್ಷಗಾನದ ....ಅತ್ಯಂತ ಸೊಗಸಾಗಿರುತ್ತವೆ.

ಗ. ಯಕ್ಷಗಾನದ ಯಾವ ವೇಷಧಾರಿಯೂ .... ಧರಿಸುವುದಿಲ್ಲ.

IV. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದ ಮೇರೆಗೆ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ

ಅ. ಯಕ್ಷಗಾನದಲ್ಲಿ ಶೃತಿವಾದ್ಯ, ತಾಳ, ಮದ್ದಲೆ ಮತ್ತು ಚಂಡೆಗಳನ್ನು ಬಳಸಲಾಗುತ್ತದೆ.
(transform into past progressive)

ಆ. ಯಕ್ಷಗಾನವನ್ನು ಯಕ್ಷರು ಪೂಜೆಗಾಗಿ ಬಳಸಿದ ಗಾನ ಅಥವ ಹಾಡು ಎಂದು ಅರ್ಥೈಸಿರುತ್ತಾರೆ.
(transform into past perfect)

ಇ. ಯಾವುದೇ ಪ್ರಸಂಗವನ್ನು ಪ್ರದರ್ಶಿಸುವ ಮೊದಲು ಸಭಾಲಕ್ಷಣ ಎಂಬ ಪ್ರಸ್ತಾವನೆಯನ್ನು ಒದಗಿಸುತ್ತಾರೆ.

(transform into definitive imperative)

ಈ. ಅನಂತರ ರಂಗದಮೇಲೆ ಗಣಪತಿಯ ಪ್ರವೇಶವಾಗುತ್ತದೆ.

(transform into negative)

ಕ. ಭಾಗವತರೇ ಹಾಡುತ್ತಾರೆ.

(transform into prohibitive imperative).

ಗ. ಗಣಪತಿಯನ್ನು ಪೂಜಿಸಿ ವರ ಪಡೆದುಕೊಂಡಮೇಲೆ ಶಾರದೆಯನ್ನು ಬರಮಾಡಿಕೊಳ್ಳಲಾಗುತ್ತದೆ.

(transform into present indefinite).

V. ಪ್ರಶ್ನೆಗಳಿಗೆ ಉತ್ತರಿಸಿ

ಅ. ಯಕ್ಷಗಾನಕ್ಕೆ ಇರುವ ಬೇರೆ ಬೇರೆ ಹೆಸರುಗಳಾವುವು?

ಆ. ಯಕ್ಷಗಾನದಲ್ಲಿ ಬಳಸುವ ವಾದ್ಯಗಳಾವುವು?

ಇ. ಯಕ್ಷಗಾನ ಪ್ರದರ್ಶನದ ರಂಗಸಜ್ಜಿಕೆಯನ್ನು ಹೇಗೆ ಮಾಡುತ್ತಾರೆ?

ಈ. ಯಕ್ಷಗಾನದ ಕಥಾವಸ್ತುಗಳು ಯಾವುವು?

ಕ. ಪ್ರಮುಖ ಯಕ್ಷಗಾನ ಪ್ರಸಂಗಗಳು ಯಾವುವು?

ಗ. ಸ್ತ್ರೀ ಮತ್ತು ಪುರುಷ ಪಾತ್ರಧಾರಿಗಳು ತೊಡುವ ಆಭರಣಗಳಾವುವು?

ಚ. ದೇವತಾಸ್ತುತಿಯ ನಂತರ ಯಾವ ಯಾವ ದೇವತೆಗಳ ಪ್ರವೇಶ- ವಾಗುತ್ತದೆ?

ಜ. ಯಕ್ಷಗಾನ ಪ್ರಸಂಗಗಳಲ್ಲಿ ಸಂಭಾಷಣೆಯ ವೈಶಿಷ್ಟ್ಯವೇನು?

VI. ನಿಮ್ಮ ರಾಜ್ಯದ ಒಂದು ಜನಪದ ಕಲೆಯನ್ನು ಕುರಿತು ಬರೆಯಿರಿ

VII. ಈ ಪಾಠದಲ್ಲಿ ಬಂದಿರುವ ಕ್ರಿಯಾಪದಗಳನ್ನು ಪಟ್ಟಿಮಾಡಿ

VIII. ಕನ್ನಡಕ್ಕೆ ಭಾಷಾಂತರಿಸಿ

Purandaradasa was born in 1480 A.D in Purandaragadha, a village in Poona district. His original name was Krishnappa Nayaka. His parents were rich. He inherited a flourishing business as a jewel-merchant and money lender. He was highly selfish and uncharitable.

Lakshmi Bai, his wife, was a pious lady. She often felt sorry for her husband's miserliness and helped the needy without his knowledge.

A certain incident in his family completely changed his life. It is said that God went to him in disguise and begged him for alms. On his refusal, he approached his wife, and she gave him a jewel without her husband's knowledge. Then God, in disguise, went to Krishnappa Nayaka to sell it to him. On recognizing it to be his wife's, he went home and asked his wife for the jewel. She was in great fix. Without a word, she entered her pooja room and prayed "O merciful God, save me in this hour of trial. Come to my help". She decided to put an end to her life by taking a cup of poison, but to her great surprise, the jewel was found in the cup. She came out and gave the jewel to her husband.

He now realised that it was all a test of God. This incident had its desired effect on his life.

Krishnappa Nayaka closed his flourishing trade. He renounced all his wealth and became a saint. He became a Haridasa and assumed the name as Purandaradasa. Dasa means servant, servant of Lord. He composed hundreds of devotional songs in simple spoken language of the masses

and went about singing them in praise of Srihari. He simplified the raga `MaayaamaaLava GovLa'. Thus contributed a lot for Karnataka classical music. He is called as the father of Karnataka Shastriya Sangeeta.

8. ಅಂಬೇಡ್ಕರ್

ನಾಡ ನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ಅಲವೇ
ಕೋಟಿ ಕೋಟಿ ಕಪ್ಪು ಜನರ
ಮೊಟ್ಟಮೊದಲ ಮಾತೇ
ನೀರಿನಾಚೆ ಮೋಡದಾಚೆ
ಮೊಳಗಿದಂಥ ಘೋಷವೆ
ಬಾಳಿನಲ್ಲಿ ಕಂಡುಕೊಂಡೆ
ಹೋರಾಟದ ದಾರಿಯ
ಕರೆದು ಕರೆದು ತೋರಿಸಿದೆ
ಮಹಾಮನೆಯ ಬಿರುಕನು
ಜಾತಿಯನ್ನು ಹೂತು ಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕ್ಕಿಳಿದ
ಸ್ವಾಭಿಮಾನ ಸಮುದ್ರ
ಮಹಾರಾಷ್ಟ್ರದ ಮಣ್ಣಿನಲಿ
ಮೂಡಿಬಂದ ಗುಡುಗು ಸಿಡಿಲೆ
ಮಳೆಯನೇಕೆ ತಾರಲಿಲ್ಲ
ಮಿಂಚು ಮಾಯ ಅಷ್ಟೆಯೆ?

ಅಭಿಮಾನದ ನೇಗಿಲಿಂದ
        ಬಂಜರುನೆಲ ಉತ್ತವನೆ
ಪಾತಿ ಮಾಡಿ ನಾಟಿ ಹಾಕಿ
        ಬೆಳೆಯ ಕಾಣದೋದವನೆ
ಕಪ್ಪುಕ್ಕಿನ ಕೋಳಗಳನು
        ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
        ಮಹಾ ಬೌದ್ಧಭಿಕ್ಕುವೆ
ಮಲಗಿದ್ದವರ ಕೂರಿಸಿದೆ
        ನಿಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
        ಕಲಿಸುವವರು ಯಾರೋ?

–ಪ್ರೊ. ಸಿದ್ಧಲಿಂಗಯ್ಯ

ಕವಿ, ಕಾವ್ಯ ವಿಚಾರ

ನವ್ಯಕಾವ್ಯದ ಕೊನೆಯಂಚಿನಲ್ಲಿ ಸಮಾಜ ಮತ್ತು ಸಾಹಿತ್ಯಕ್ಕೆ ಹೊಸ ಆಲೋಚನೆ ಮತ್ತು ಅಭಿವ್ಯಕ್ತಿಯನ್ನು ನೀಡಿದ ಕವಿ ಸಿದ್ಧಲಿಂಗಯ್ಯನವರು. `ದಲಿತದನಿ' ಎಂದೇ ಪ್ರಸಿದ್ಧರಾದ ಸಿದ್ಧಲಿಂಗಯ್ಯ ಒಂದು ಅಲಕ್ಷಿತ ಸಮುದಾಯದ ನೋವನ್ನು ಯಾವ ಮುಲಾಜಿಗೂ ಒಳಗಾಗದೆ ಕಾವ್ಯವಾಗಿಸಿದವರು. ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು ಮತ್ತು ಕಪ್ಪುಕಾಡಿನ ಹಾಡು ಇವರ ಕವನ ಸಂಕಲನಗಳು. ಎಡಪಂಥೀಯ ಧೋರಣೆಯ `ಪಂಚಮ' `ನೆಲಸಮ' ಮತ್ತು `ಏಕಲವ್ಯ' ಇವರ ನಾಟಕಗಳು. ಅವತಾರಗಳು, ಹಕ್ಕಿನೋಟ, ರಸಗಳಿಗೆ ಎಂಬ ಗದ್ಯಕೃತಿಗಳು ಲೇಖಕರದೇ ತರ್ಕ ಹಾಗೂ ವಿಚಾರವಾದದ ನೆಲೆಗಟ್ಟಿನ ಮೇಲೆ ರಚಿತವಾದ ಕೃತಿಗಳು.

ಪ್ರಸ್ತುತ ಕವನವನ್ನು `ಹೊಲೆಮಾದಿಗರ ಹಾಡು' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ. ದಲಿತರ ಏಳಿಗೆಗಾಗಿ ಆಕಾಶದ ಉದ್ದಗಲಕ್ಕೂ ಆಲವಾಗಿ ಬೆಳೆದುನಿಂತು ತಮ್ಮ ಬದುಕನ್ನೇ ಮೀಸಲಿಟ್ಟ ಮಹಾಚೇತನ ಅಂಬೇಡ್ಕರ್. ದಲಿತ ಸಮುದಾಯಕ್ಕೆ ಛಲತುಂಬಿ, ಬಲತುಂಬುವ ಮೊದಲೇ ಕಣ್ಮರೆಯಾದ ಈ ಧೀಮಂತ ವ್ಯಕ್ತಿಯ ಅಗಲಿಕೆಯಿಂದ ದಿಕ್ಕುಗೆಟ್ಟ ಆ ಸಮುದಾಯದ ನೋವಿನ ಸಮರ್ಥ ಚಿತ್ರಣವನ್ನು ನೀಡಿದ್ದಾರೆ ಈ ಕವನದಲ್ಲಿ.

ಕಠಿಣಪದಗಳ ಅರ್ಥ

ಸಿಡಿ$_2$ – to explode

ಮೊಳಗು – to sound loudly

ಬಿರುಕು – crack, slit

ಹೂತುಬಿಡು – to burry

ಸ್ವಾಭಿಮಾನ – self dignity

ಮೂಡಿಬರು – to appear

ಗುಡುಗು – thunder

ಸಿಡಿಲು – a thunderbolt

ಮಿಂಚು – lightning

ಮಾಯ – vanishing

ಬಂಜರುನೆಲ – barren land

ಉಕ್ಕು – steel

ಕೋಳ – fetters, shackles

ಛಲ – determination, obduray, resoluteness

ನಾಟಿಹಾಕು – to transplant an young plant (paddy)

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಬದಲಾಯಿಸಿ ಬರೆಯಿರಿ

ಅ. ಮಾದರಿ: ಕಾಣು – ಕಂಡುಕೊಳ್ಳು

ಅ. ಬಾಚು –

ಆ. ಉಡು –

ಇ. ಸಿಗು –

ಈ. ಅಳು –

ಕ. ಬರೆ –

ಆ. ಮಾದರಿ: ಹೂಳು – ಹೂತುಬಿಡು

ಅ. ಸೋಲು –

ಆ. ಕೊಡು –

ಇ. ಮಾಡು –

ಈ. ಮರೆ –

ಕ. ಬರು –

ಗ. ಹೋಗು –

II. ಬಿಡಿಸಿ ಬರೆಯಿರಿ

ಅ. ಮಳೆಯನೇಕೆ

ಆ. ನಡುವಿನಿಂದ

ಇ. ಮೋಡದಾಚೆ

ಈ. ಕ್ರಿಯಾರಂಗಕ್ಕಿಳಿದ

ಕ. ಕಪ್ಪುಕ್ಕಿನ

ಗ. ಆಲವೇ

III. ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಆಕಾಶದ ....

ನಿಂತ ....

ಆ. ಕೋಟಿ ಕೋಟಿ ....

ಮೊಟ್ಟಮೊದಲ ....

ಇ. ಜಾತಿಯನ್ನು ....

....................ಜನರನು

ಈ. ಮಲಗಿದ್ದವರ ....

....................ಯಾರೋ?

ಕ. .... ಜೊತೆಗೆ .... ಪಾಠ

ಕಲಿಸುವವರು ....?

IV. ಕೆಳಕಂಡವುಗಳ ಶಿಷ್ಟಗದ್ಯರೂಪವನ್ನು ಬರೆಯಿರಿ

ಅ. ನಾಡ

ಆ. ದಾರಿಯ

ಇ. ಬಿರುಕನು

ಈ. ಮಣ್ಣಿನಲಿ

ಕ. ಬೆಳೆಯಕಾಣದೋದವನೆ

V. ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ

ಅ. ಬಾಳು	ಕ. ಕಪ್ಪು ....
ಆ. ನೀರು	ಗ. ನೆಲ ....
ಇ. ಮೋಡ	ಚ. ಕಡಿ ....
ಈ. ಆಕಾಶ	ಜ. ಬಂಗಾರ ....

VI. ಕೆಳಕಂಡ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಸಿಡಿ	ಕ. ಅಭಿಮಾನ
ಆ. ಘೋಷ	ಗ. ಪಾತಿ
ಇ. ಬಿರುಕು	ಚ. ನೇಗಿಲು
ಈ. ಹೂತುಬಿಡು	ಜ. ಗುಡುಗು

VII. ಪ್ರಶ್ನೆಗಳಿಗೆ ಉತ್ತರಿಸಿ

ಅ. ಅಂಬೇಡ್ಕರ್ ಅವರನ್ನು ಕವಿ ಆಕಾಶದ ಅಗಲಕ್ಕೂ ನಿಂತ ಆಲದ ಮರ ಎಂದು ಬಣ್ಣಿಸಿರುವುದರ ಔಚಿತ್ಯವೇನು?

ಆ. ಅಂಬೇಡ್ಕರ್ ಹೋರಾಟದ ಹಾದಿಯನ್ನು ಏಕೆ, ಹೇಗೆ ಕಂಡು ಕೊಂಡರು?

ಇ. ಕವನದ ಉದ್ದಕ್ಕೂ ಹರಿದಿರುವ ಕವಿಯ ಮನದ ನೋವು ಓದುಗರ ಮೇಲೆ ಉಂಟು ಮಾಡುವ ಪರಿಣಾಮ ಎಂಥದು?

ಈ. ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದ್ದನ್ನು ಕವಿ ಹೇಗೆ ಪ್ರತಿಕ್ರಿಯಿಸಿದ್ದಾರೆ?

ಕ. ದಲಿತ ಸಮುದಾಯದ ಭವಿಷ್ಯದ ಬಗೆಗಿನ ಕವಿಯ ಹತಾಶೆ ಹೇಗೆ ಅಭಿವ್ಯಕ್ತಗೊಂಡಿದೆ?

VIII. ತುಳಿತಕ್ಕೊಳಗಾದವರನ್ನು ಮೇಲೆತ್ತಿದ ಮತ್ತೊಬ್ಬ ಸಮಾಜಸುಧಾರಕರ ಪರಿಚಯ ಮಾಡಿಕೊಡಿ

IX. ಕನ್ನಡಕ್ಕೆ ಅನುವಾದಿಸಿ

Suryakant Tripathi(Nirala) was born in Mahishada, princely state in Midnapur district (now in Bangladesh),

where his father was serving in the plantation. The family belonged to the village Garkakola of Unnao district in Uttar Pradesh. Suryakant Tripathi became famous by his pen-name `Nirala' deriving inspiration from the best minds of the so called Indian Renaissance, then flowering in Bengal. Nirala was born genius and without any formal schooling he studied Indian classics, philosophy and culture. He had to struggle hard all his life, at all levels. Deeply rooted in Indian culture, Nirala stood against the establishment, and has been acclaimed as a poet of revolt.

Apart from over 12 collections of poetry he also wrote six novels, several short stories, essays and criticism and translated from Sanskrit and Bengali. Reknowned for his prose, his name is associated with establishing the free verse in the modern period.

9. ಐರೋಪ್ಯರ ಕನ್ನಡಸೇವೆ

19 ನೇ ಶತಮಾನದಲ್ಲಿ ಭಾರತೀಯ ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮೊದಲಾದವುಗಳ ಬಗೆಗೆ ಅಗಾಧವಾದ ಸಂಶೋಧನಾ ಕಾರ್ಯ ನಡೆಯಿತು. ಈ ದಿಶೆಯಲ್ಲಿ ಸಂಶೋಧನೆಯನ್ನು ನಡೆಸಿದವರು ಐರೋಪ್ಯ ಮತಪ್ರಚಾರಕರು. ಇವರು ಸ್ವಪ್ರಯತ್ನದಿಂದ ಸ್ಥಳೀಯ ಭಾಷೆಗಳನ್ನು ಕಲಿತು ಮತ ಪ್ರಚಾರದ ಜೊತೆ ಜೊತೆಗೆ ಸಾಹಿತ್ಯ ಮತ್ತು ಸಮಾಜಸೇವೆಯನ್ನೂ ಮಾಡಿದರು. ನಮ್ಮ ಸನಾತನ ಧರ್ಮ ಶಾಸ್ತ್ರ, ಕಾವ್ಯ, ವ್ಯಾಕರಣ, ಛಂದಸ್ಸು, ನಿಘಂಟು, ನ್ಯಾಯ, ಮೀಮಾಂಸೆ ಮೊದಲಾದವು ಗಳನ್ನು ಹೊರತೆಗೆದು ಪರಿಷ್ಕರಿಸಿ ಪ್ರಕಟಿಸಿದರು. ಕಣ್ಮರೆಯಾಗುತ್ತಿದ್ದ ಅಪಾರ ಸಾಹಿತ್ಯಸಂಪತ್ತನ್ನು ಬೆಳಕಿಗೆ ತಂದು ಈ ದೇಶದ ಭವಿಷ್ಯಕ್ಕೆ ಚೈತನ್ಯವನ್ನು ಒದಗಿಸಿದರು.

ಬೈಬಲ್ ಒಂದನ್ನು ಕೈಯಲ್ಲಿ ಹಿಡಿದು ಏಸುವಿನ ದಿವ್ಯವಚನವನ್ನು ಸಾರಲು ಸುಮಾರು 16 ನೇ ಶತಮಾದಿಂದಲೇ ಭಾರತಕ್ಕೆ ಮಿಷನರಿಗಳು ಬರಲಾರಂಭಿಸಿದರು.

ಮಿಷನರಿಗಳು ತಾವು ಬಂದ ಉದ್ದೇಶ ಸಾಧನೆಗೆ ಮೂರು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಅವುಗಳೆಂದರೆ 1. ಮುದ್ರಣಾಲಯ ಸ್ಥಾಪನೆ 2. ಶಾಲಾಕಾಲೇಜು ಹಾಗೂ ಆಸ್ಪತ್ರೆಗಳ ಸ್ಥಾಪನೆ 3. ಸ್ಥಳೀಯ ಭಾಷೆಗಳನ್ನು ಕಲಿತು ಆ ಭಾಷೆಗಳ ಮುಖಾಂತರ ಮತಪ್ರಚಾರ ಮಾಡುವುದು.

ಭಾರತೀಯ ಭಾಷೆಗಳ ಗಂಧಗಾಳಿಯನ್ನೂ ಅರಿಯದ ಈ ಮತ ಪ್ರಚಾರಕರು ಶ್ರದ್ಧೆಯಿಂದ ಸ್ಥಳೀಯ ಭಾಷೆಗಳ ಅಧ್ಯಯನ ಮಾಡಿ ಕಾಲಗರ್ಭದಲ್ಲಿ ಹುದುಗಿದ್ದ ಸಾಹಿತ್ಯ, ಶಾಸ್ತ್ರರತ್ನಗಳನ್ನು ಹೆಕ್ಕಿತೆಗೆದು ಪರಿಷ್ಕರಿಸಿ ಪ್ರಕಟಿಸಿದರು. ಇವರು ಪ್ರಾಚೀನ ಕೃತಿಗಳನ್ನು ಬೆಳಕಿಗೆ ತಂದು ಹೊಸಗನ್ನಡ ಸಾಹಿತ್ಯದ ಉದಯಕ್ಕೆ ಭದ್ರಬುನಾದಿಯನ್ನು ಹಾಕಿದರು. ಇವರಲ್ಲಿ ವಿಲಿಯಂ ರೀವ್,

ಹರ್ಮನ್ ಮೋಗ್ಲಿಂಗ್, ಬಿ.ಎಲ್.ರೈಸ್, ಇ.ಪಿ.ರೈಸ್, ಜಾನ್ ಗ್ಯಾರೆಟ್ ಮತ್ತು ಕಿಟ್ಟೆಲ್– ಇವರುಗಳು ಪ್ರಮುಖರು.

ವಿಲಿಯಂ ರೀವ್

ವಿಲಿಯಂ ರೀವ್ ಅವರಿಗೆ ಕನ್ನಡನಾಡು ನುಡಿಯ ಬಗ್ಗೆ ಅಭಿಮಾನ ಇತ್ತು. ಶ್ರೇಷ್ಠ ಭಾಷಾತಜ್ಞರಾದ ರೀವ್ ಕನ್ನಡ, ತಮಿಳು, ಒರಿಯಾ, ಬಂಗಾಳಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದರು. ರೀವ್ ಒಳ್ಳೆಯ ಶಿಕ್ಷಣ ತಜ್ಞರೂ ಕೂಡ. 1832 ರಲ್ಲಿ ಇವರು ಇಂಗ್ಲೀಷ್–ಕನ್ನಡ ನಿಘಂಟನ್ನು ರಚಿಸಿ ಪ್ರಕಟಿಸಿದರು. ಇದು ಪ್ರಪ್ರಥಮ ಇಂಗ್ಲೀಷ್–ಕನ್ನಡ ನಿಘಂಟು. ಒಂದು ಕನ್ನಡ ಪದಕ್ಕೆ ಕನ್ನಡದಲ್ಲಿರುವ ವಿವಿಧ ಅರ್ಥಗಳನ್ನು ಈ ನಿಘಂಟಿನಲ್ಲಿ ಕೊಡಲಾಗಿದೆ. ಓಲ್ಡ್ ಟೆಸ್ಟ್‌ಮೆಂಟನ್ನು ಕನ್ನಡಕ್ಕೆ ಅನುವಾದಿಸಿ ಅದಕ್ಕೆ `ಮೋಶೆಯ ಮೊದಲ ಖಾಂಡ ' ಎಂದು ಹೆಸರಿಸಿ ಪ್ರಕಟಿಸಿದ್ದಾರೆ.

ಹರ್ಮನ್ ಮೋಗ್ಲಿಂಗ್

1936 ರಲ್ಲಿ ಜರ್ಮನಿಯಿಂದ ಭಾರತಕ್ಕೆ ಬಂದ ಹರ್ಮನ್ ಮೋಗ್ಲಿಂಗ್ ಕನ್ನಡದ ಮೊದಲ ಪತ್ರಕರ್ತರು. 1-7-1843 ರಿಂದ ಪ್ರಕಟವಾಗಲು ಪ್ರಾರಂಭವಾದ `ಮಂಗಳೂರು ಸಮಾಚಾರ ' ಎಂಬ ಪತ್ರಿಕೆಯ ಮೂಲಕ ಇವರು ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿದರು.

ಮೋಗ್ಲಿಂಗ್ ಅವರು ಹಳಗನ್ನಡ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಶ್ರೀ.ಬಿ.ಎಲ್.ರೈಸ್ ಅವರಿಗಿಂತಲೂ ಮೊದಲೇ `ಬಿಬ್ಲಿಯಾಥಿಕಾ ಕರ್ನಾಟಿಕಾ ಮಾಲೆ ' ಯನ್ನು ಪ್ರಾರಂಭಿಸಿ ಜೈಮಿನಿಭಾರತ, ತೊರವೆ–ರಾಮಾಯಣಗಳನ್ನು ಅಚ್ಚುಹಾಕಿಸಿದರು. ಅಲ್ಲದೆ ಹರಿದಾಸರ ಕೀರ್ತನೆಗಳನ್ನು

ಅಚ್ಚುಹಾಕಿ ಅದನ್ನು ಜರ್ಮನ್ ಭಾಷೆಗೂ ಭಾಷಾಂತರಿಸಿದರು. ಶ್ರೀ ಮೋಗ್ಲಿಂಗ್ ಅವರು ಕನ್ನಡ ಲಿಪಿ ಸುಧಾರಣೆಯ ಬಗ್ಗೆಯೂ ಆಸ್ಥೆ ವಹಿಸಿದ್ದರು.

ಬೆಂಜಮಿನ್ ಲೂಯಿ ರೈಸ್

1826ರಲ್ಲಿ ಬೆಂಗಳೂರಿನಲ್ಲಿ ಹುಟ್ಟಿದ ಬೆಂಜಮಿನ್ ಲೂಯಿ ರೈಸ್ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ದುಡಿದ ಪ್ರಖ್ಯಾತ ವಿದ್ವಾಂಸ. ಶಿಕ್ಷಣ, ಸಾಹಿತ್ಯ ಮತ್ತು ಇತಿಹಾಸ ರಂಗಗಳಲ್ಲಿನ ಇವರ ದುಡಿಮೆ ಪ್ರಶಂಸನೀಯ. ಶಿಕ್ಷಣ ಕ್ಷೇತ್ರದಲ್ಲಿ ಪ್ರೌಢಶಾಲೆಯ ಪ್ರಾಂಶುಪಾಲರಾಗಿ, ಶಾಲಾ ತನಿಖಾಧಿಕಾರಿಯಾಗಿ, ವಿದ್ಯಾ ಇಲಾಖೆಯ ಮುಖ್ಯಸ್ಥರಾಗಿ, ಮೈಸೂರು ಸರ್ಕಾರದ ವಿದ್ಯಾಶಾಖೆಯ ಪ್ರಥಮ ಕಾರ್ಯದರ್ಶಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ತಂದರು.

ಬೆಂಜಮಿನ್ ಲೂಯಿ ರೈಸರು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಮೈಸೂರು ಸಂಸ್ಥಾನದಲ್ಲೆಲ್ಲಾ ಸಂಚರಿಸಿ, ಚಾರಿತ್ರಿಕ ಮತ್ತು ಪುರಾತನ ಗ್ರಂಥಗಳನ್ನು ಸಂಗ್ರಹಿಸತೊಡಗಿದರು. ಕನ್ನಡ ಶಾಸನಗಳನ್ನು ಓದುವ ಗೀಳನ್ನೂ ಬೆಳಸಿಕೊಂಡರು. ನಾಡಿನ ಉದ್ದಗಲಕ್ಕೂ ಸಂಚರಿಸಿದ ಫಲವಾಗಿ 'ಮೈಸೂರು ಗೆಜೆಟಿಯರ್' ಅನ್ನು ಹೊರತಂದರೆ ಶಾಸನ ಓದುವ ಚಟ 'ಎಪಿಗ್ರಾಫಿಯಾ ಕರ್ನಾಟಿಕ ' ಎಂಬ ಮಹಾ ಗ್ರಂಥವಾಗಿ ಹನ್ನೆರಡು ಬೃಹತ್ ಸಂಪುಟಗಳಲ್ಲಿ ಹೊರಬಂದಿತು. ಮೈಸೂರು ಗೆಜೆಟಿಯರ್ ಕನ್ನಡನಾಡಿನ ಚರಿತ್ರೆ, ಸಾಮಾಜಿಕ ಜೀವನ, ಜನಸಂಖ್ಯೆ, ಭೂವಿವರಣೆ, ಭಾಷೆ ಮತ್ತು ಸಾಹಿತ್ಯಗಳ ಬಗ್ಗೆ ಸಾಧಾರವಾಗಿ ತಿಳಿಸುವ ಕೃತಿಯಾದರೆ ಎಪಿಗ್ರಾಫಿಯಾ ಕರ್ನಾಟಿಕ ಮೈಸೂರು ಸಂಸ್ಥಾನದಲ್ಲಿ ದೊರೆತ 8,868 ಶಾಸನಗಳು ಪರಿಷ್ಕರಿಸಲ್ಪಟ್ಟು 12 ಸಂಪುಟಗಳಲ್ಲಿ ಪ್ರಕಟಗೊಂಡ ಒಂದು ಬೃಹತ್‌ಕೃತಿ. ಬಿಬ್ಲಿಯಾಥಿಕಾ ಕರ್ನಾಟಿಕ ಮಾಲೆಯನ್ನು ಆರಂಭಿಸಿ ನೃಪತುಂಗನ ಕವಿರಾಜ ಮಾರ್ಗ, ಕರ್ನಾಟಕ ಶಬ್ದಾನುಶಾಸನ,

ಪಂಪರಾಮಾಯಣ, ಪಂಪಭಾರತವೇ ಮೊದಲಾದ ಪ್ರಾಚೀನ ಕೃತಿಗಳನ್ನು ಪ್ರಕಟಿಸಿದ್ದಾರೆ.

ಎಡ್ವರ್ಡ್ ಪೀಟರ್ ರೈಸ್

ಎಡ್ವರ್ಡ್ ಪೀಟರ್ ರೈಸ್ ಬೆಂಜಮಿನ್ ಲೂಯಿ ರೈಸ್ ಅವರ ತಮ್ಮ. ಇವರೂ ಸಹ ತಮ್ಮ ಅಣ್ಣನಂತೆ ಕನ್ನಡಕ್ಕಾಗಿ ದುಡಿದ ಮಹನೀಯ. ಕನ್ನಡದ ಮೊಟ್ಟ ಮೊದಲ ಸಾಹಿತ್ಯ ಚರಿತ್ರೆಯನ್ನು 'ಎ ಹಿಸ್ಟರಿ ಆಫ್ ಕ್ಯಾನರೀಸ್ ಲಿಟರೇಚರ್' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಐತಿಹಾಸಿಕ ಮಹತ್ವವನ್ನು ಹೊಂದಿರುವ ಈ ಗ್ರಂಥದ ಮೂಲಕ ಜೈನ, ವೀರಶೈವ, ವೈಷ್ಣವ, ಆಧುನಿಕ ಎಂಬ ನಾಲ್ಕು ವಿಭಾಗಗಳಲ್ಲಿ ಕನ್ನಡ ಸಾಹಿತ್ಯವನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

ರೆವರೆಂಡ್, ಜಾನ್ ಗ್ಯಾರೆಟ್

ಜರ್ಮನಿಗೆ ಸೇರಿದ ಗ್ಯಾರೆಟ್ ಮೈಸೂರಿನ ವೆಸ್ಲಿಯನ್ ಮಿಷನ್ ಪ್ರೆಸ್ ಸ್ಥಾಪಕರು. ಮೂಲತಃ ಮತ ಪ್ರಚಾರಕ್ಕೆ ಬಂದವರಾಗಿದ್ದರೂ ಇವರ ಕರ್ತವ್ಯ ನಿಷ್ಠೆ, ಭಾಷಾ ಪಾಂಡಿತ್ಯ ಮತ್ತು ಸ್ಥಳೀಯ ಜನರಲ್ಲಿದ್ದ ವಿಶ್ವಾಸ ಇವುಗಳನ್ನು ಪರಿಗಣಿಸಿ ಮೈಸೂರು ಸರ್ಕಾರ ಇವರಿಗೆ ಪ್ರಾಥಮಿಕ ಶಾಲೆಗಳ ಉಸ್ತುವಾರಿಯ ಅಧಿಕಾರವನ್ನು ಕೊಟ್ಟಿತು. ಇವರು ನೂರಾರು ಪಾಠಶಾಲೆಗಳನ್ನು ತೆರೆದು ಆಧುನಿಕ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದರು. ಶಿಕ್ಷಣತಜ್ಞರಾದ ಇವರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯಾಗಿ ನೇಮಕಗೊಂಡರು.

ಗ್ಯಾರೆಟ್ ಅವರು ಇಂಗ್ಲೀಷ್–ಕನ್ನಡ ಶಾಲಾ ನಿಘಂಟನ್ನು ತಯಾರಿಸಿದ್ದಾರೆ. ಇದು ರೀವ್ ತಯಾರಿಸಿದ ನಿಘಂಟಿಗಿಂತ ಭಿನ್ನವಾಗಿದೆ. ರೀವ್ ನಿಘಂಟಿನಲ್ಲಿ ಹಳಗನ್ನಡ ಮತ್ತು ಸಂಸ್ಕೃತ ಪದಗಳು ಹೇರಳವಾಗಿವೆ. ಆದರೆ ಗ್ಯಾರೆಟ್‌ರವರು ಹಾಗೆ ಮಾಡದೆ ಪ್ರಚಲಿತ ಕನ್ನಡಪದಗಳನ್ನು ಆಯ್ದುಕೊಂಡು ಕೊಟ್ಟಿರುತ್ತಾರೆ. ಇವರು

ಕನ್ನಡ ಪಠ್ಯಪುಸ್ತಕಗಳ ಮುದ್ರಣಕ್ಕೆ ಹೆಚ್ಚು ಪ್ರೋತ್ಸಾಹಕೊಟ್ಟರು. ಇವರ ಗ್ರಂಥ ರಚನೆ, ಪಠ್ಯ ಮತ್ತು ಪ್ರಾಚೀನ ಕೃತಿಗಳ ಸಂಪಾದನೆ ಎಂದು ಎರಡು ರೀತಿಯಲ್ಲಿ ಸಾಗಿಬಂದಿತು. ' ರೇಖಾಗಣಿತ ' , ' ಪದ್ಯಸಾರ ' ಎಂಬ ಪಠ್ಯಪುಸ್ತಕಗಳನ್ನು ತಯಾರಿಸಿದರು. ಶಬ್ದಮಣಿದರ್ಪಣ, ಪಂಚತಂತ್ರ, ದಾಸರಹಾಡುಗಳು, ಭಾಷಾಮಂಜರಿ ಎಂಬ ಗ್ರಂಥಗಳನ್ನೂ ಸಂಪಾದಿಸಿರುತ್ತಾರೆ. 1840-1870ರ ಅವಧಿಯಲ್ಲಿ ಮೈಸೂರು ರಾಜ್ಯದ ವಿದ್ಯಾ ಪ್ರಗತಿಗೆ ಶ್ರಮಿಸಿದವರು ಇವರು.

ರೆವರೆಂಡ್ ಫರ್ಡಿನಾಂಡ್ ಕಿಟ್ಟೆಲ್

ಕನ್ನಡ ಭಾಷೆ ಮತ್ತು, ಸಾಹಿತ್ಯಕ್ಕಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಕಿಟ್ಟೆಲ್ ತುಂಬಾ ಮುಖ್ಯರಾದವರು. 1853 ರಲ್ಲಿ ಜರ್ಮನಿಯಿಂದ ಧಾರವಾಡಕ್ಕೆ ಬಂದ ಕಿಟ್ಟೆಲ್ ಕನ್ನಡವನ್ನು ವ್ಯಾಸಂಗ ಮಾಡಿ ಧರ್ಮ ಪ್ರಚಾರದ ಜೊತೆ ಜೊತೆಗೆ ಪ್ರಾಚೀನ ಕನ್ನಡ ಕಾವ್ಯಗಳನ್ನು ಅಭ್ಯಾಸ ಮಾಡಿದರು. ಕನ್ನಡ ಭಾಷೆಯಲ್ಲಿ ಕಿಟ್ಟೆಲ್ ರವರಿಗೆ ಇದ್ದ ಪಾಂಡಿತ್ಯವನ್ನು ಗಮನಿಸಿದ ಡಾ.ಮೋಗ್ಲಿಂಗ್ ಮುಂತಾದ ಅಧಿಕಾರಿಗಳು ಕನ್ನಡ–ಕನ್ನಡ–ಇಂಗ್ಲೀಷ್ ನಿಘಂಟು ರಚಿಸುವ ಕೆಲಸವನ್ನು ಕಿಟ್ಟೆಲ್‌ರವರಿಗೆ ವಹಿಸಿದರು. ಕನ್ನಡ ನಿಘಂಟು ಪರಿಪೂರ್ಣವಾಗಿರಬೇಕು, ಶಾಸ್ತ್ರೀಯವಾಗಿರಬೇಕು ಎಂಬುದು ಕಿಟ್ಟೆಲ್‌ರವರ ಆಸೆ. ಅದಕ್ಕಾಗಿ ಅವರು ಕನ್ನಡಿಗರ ನೆರವನ್ನು ಪಡೆದುಕೊಂಡರು. ಈ ಬೃಹತ್ ಕೆಲಸ ಮುಗಿಯಲು ಸುಮಾರು ಇಪ್ಪತ್ತು ವರ್ಷಗಳು ಹಿಡಿಯಿತು. ಎಪ್ಪತ್ತು ಸಾವಿರ ಶಬ್ದಗಳನ್ನೊಳಗೊಂಡ ಹಸ್ತಪ್ರತಿ 1892ರಲ್ಲಿ ಸಿದ್ಧಗೊಂಡು ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್‌ನಲ್ಲಿ ಮುದ್ರಣಗೊಂಡು 1894ರಲ್ಲಿ ಅಚ್ಚಾಗಿ ಬಿಡುಗಡೆಯಾಯಿತು. ಕನ್ನಡ ನಿಘಂಟು ಕ್ಷೇತ್ರದಲ್ಲಿ ಇದು ಇಂದಿಗೂ ಪ್ರಮಾಣಗ್ರಂಥವಾಗಿ ಉಳಿದಿದೆ. ಕನ್ನಡ ಭಾಷೆಯನ್ನು ಅಧ್ಯಯನ ಮಾಡುವವರಿಗೆ ಈ ಗ್ರಂಥ ಅತ್ಯಂತ ಉಪಯುಕ್ತವಾದುದು. ಏಕೆಂದರೆ ಕನ್ನಡದ ಮಹಾಕಾವ್ಯಗಳಿಂದ ಪ್ರಯೋಗಗಳನ್ನು

ಗಾದೆಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಕಾಲಾನುಕ್ರಮಣಿಕೆಯಲ್ಲಿ ಕೊಟ್ಟಿದ್ದಾರೆ. ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನ ಮಾಡುವವರಿಗೆ ಇದು ತುಂಬಾ ಸಹಾಯಕವಾಗಿದೆ. ಇಷ್ಟು ಖಚಿತವೂ ಶಾಸ್ತ್ರೀಯವೂ ನಿಯಮಬದ್ಧವೂ ಆದ ನಿಘಂಟು ಭರತಖಂಡದ ಯಾವ ದೇಶಭಾಷೆಗೂ ಇಲ್ಲವೆಂಬುದು ಬಲ್ಲವರ ಅಭಿಪ್ರಾಯ. ಕಿಟ್ಟೆಲ್ಲರ ಮಹತ್ಕಾರ್ಯವನ್ನು ಗುರುತಿಸಿದ ಟ್ಯೂಬಿಂಗನ್ನಿನ ವಿಶ್ವವಿದ್ಯಾನಿಲಯ 1896 ರಲ್ಲಿ ಇವರಿಗೆ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿತು.

ಕಿಟ್ಟೆಲ್‌ರವರು ಕೇಶೀರಾಜನ ಶಬ್ದಮಣಿದರ್ಪಣವನ್ನೂ ನಾಗವರ್ಮನ ಛಂದೋಂಬುಧಿಯನ್ನೂ ಪರಿಷ್ಕರಿಸಿ ವಿದ್ವತ್ಪೂರ್ಣವಾದ ಮುನ್ನುಡಿಯೊಂದಿಗೆ ಪ್ರಕಟಿಸಿದ್ದಾರೆ. ಇವರು ಸಂಪಾದಿಸಿದ ಮತ್ತೊಂದು ಗ್ರಂಥವೆಂದರೆ ಪಂಚತಂತ್ರ. ಕರ್ನಾಟಕ ಕಾವ್ಯಮಾಲೆ ಎಂಬ ಕಾವ್ಯ ಸಂಕಲನವನ್ನು ಪ್ರಕಟಿಸಿದ್ದಾರೆ.

ಕಿಟ್ಟೆಲ್‌ರವರ ಕೊನೆಯಕೃತಿ ಇಂಗ್ಲೀಷ್‌ನಲ್ಲಿ ಬರೆದಿರುವ `ಗ್ರಾಮರ್ ಆಫ್ ದಿ ಕನ್ನಡ ಲ್ಯಾಂಗ್ವೇಜ್'. ಇದರಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳೆಂದು ಕನ್ನಡ ಭಾಷೆಯ ಅವಸ್ಥಾಕ್ರಮಗಳ ವಿವರಣೆ ಇದೆ. ಇದು ಪ್ರಕಟಣೆಗೊಂಡಾಗ ಪುಸ್ತಕವನ್ನು ಕೈನಿಂದ ಮುಟ್ಟಿನೋಡಿ ಆನಂದಿಸಿದ ಕಿಟ್ಟೆಲ್ ಮರುದಿನವೇ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದರು.

ಹೀಗೆ ಅನೇಕ ಐರೋಪ್ಯರು ದೇಶ – ಭಾಷೆ – ಜನಾಂಗದ ಎಲ್ಲೆ ಮೀರಿ ಕನ್ನಡ ನಾಡು–ನುಡಿಗಳಿಗೆ ಅಮೂಲ್ಯ ಸೇವೆಯನ್ನು ಸಲ್ಲಿಸಿ ಅತ್ಯಮೂಲ್ಯವಾದ ಕೊಡುಗೆಯನ್ನಿತ್ತಿದ್ದಾರೆ.

ಕಠಿಣಪದಗಳ ಅರ್ಥ

ಮತಪ್ರಚಾರಕರು	–	Missionaries
ಸ್ವಪ್ರಯತ್ನ	–	self effort

ಸ್ಥಳೀಯ – local

ಛಂದಸ್ಸು – prosody

ನಿಘಂಟು – dictionary

ನ್ಯಾಯ – law and its administration

ಮೀಮಾಂಸೆ - a system of Hindu philosophy which recommends descipline and critical examination as a means of release from the cycle of birth and death .

ಕಣ್ಮರೆಯಾಗು – to disappear

ಚೈತನ್ಯ – vigour

ಹಮ್ಮಿಕೊಳ್ಳು - to undertake

ಹುದುಗು – to get burried

ಬುನಾದಿ – foundation

ಪಾಂಡಿತ್ಯ – scholarship

ಲಿಪಿ – script

ತನಿಖಾಧಿಕಾರಿ – inspector

ಇಲಾಖೆ – department

ಕಾರ್ಯದರ್ಶಿ – secretary

ಗೀಳು – ಚಟ, mania

ಉಸ್ತುವಾರಿ – supervision

ಸಂಪಾದಿಸು – to edit

ಹಸ್ತಪ್ರತಿ – manuscript

ಅಚ್ಚು – print

ಬಿಡುಗಡೆಯಾಗು – to get released

ಗಾದೆ – proverb

ಕಾಲಾನುಕ್ರಮಣಿಕೆ – cronological order

ಎಲ್ಲೆ - boundary

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದಗಳನ್ನು ಬದಲಾಯಿಸಿ

i. (ಅ) **ಮಾದರಿ:** ಅನುವಾದ – ಅನುವಾದಿಸು

ಅ. ಅನುಮಾನ –

ಆ. ಪ್ರಯೋಗ –

ಇ. ಪ್ರಮಾಣ –

ಈ. ಸಮೀಪ –

ಕ. ಉಪಯೋಗ –

(ಅ) **ಮಾದರಿ:** ಸಂಚಾರ – ಸಂಚರಿಸು

ಅ. ಸಂಹಾರ –

ಆ. ಅನುಸಾರ –

ಇ. ಉಪಕಾರ –

ಈ. ಪರಿಹಾರ –

ಕ. ಅವತಾರ –

(ಇ) **ಮಾದರಿ:** ಅನುಕರಣೆ – ಅನುಕರಿಸು

ಅ. ಅನ್ವೇಷಣೆ –

ಆ. ಸೂಚನೆ –

ಇ. ಸಮರ್ಪಣೆ –

ಈ. ಅಭಿವಂದನೆ -

ಕ. ಸಮರ್ಥನೆ -

ಗ. ಭಾವನೆ-

ii. **ಮಾದರಿ:** ಕೊಡು - ಕೊಟ್ಟು

ಅ. ನೆಡು -

ಆ. ಉಡು -

ಇ. ಬಿಡು -

ಈ. ಇಡು -

ಕ. ಸುಡು -

iii. **ಮಾದರಿ:** ಸ್ಥಳ - ಸ್ಥಳೀಯ

ಅ. ಪ್ರಾಂತ -

ಆ. ಔಷಧ -

ಇ. ಅನುವಂಶ -

ಈ. ಗಣನೆ -

ಕ. ರಾಷ್ಟ್ರ -

ಗ. ಮನನ -

II. ಕೂಡಿಸಿ ಬರೆಯಿರಿ

ಅ. ಸಂಕಲನ + ಇಸು ------

ಆ. ಗರ್ಜನೆ + ಇಸು ------

ಇ. ಭಾಷಾಂತರ + ಇಸು ------

ಈ. ಕುಡಿ + ಇಸು ------

ಕ. ಬರೆ + ಇಸು ------

ಗ. ಮಾಡು + ಇಸು ------

III. ಬಿಡಿಸಿ ಬರೆಯಿರಿ

ಅ. ಅವರಿಗಿಂತಲೂ

ಆ. ಉದ್ದಗಲ

ಇ. ಕಾಲಾನುಕ್ರಮಣಿಕೆ

ಈ. ಅತ್ಯಮೂಲ್ಯ

ಕ. ಬರಲಾರಂಭಿಸು

ಗ. ಹೊಸಗನ್ನಡ

IV. ಸೂಕ್ತಪದದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಹರ್ಮನ್ ಮೋಗ್ಲಿಂಗ್ ಅವರು -------- ಎಂಬ ಪತ್ರಿಕೆಯನ್ನು ಹೊರತರುವ ಮೂಲಕ ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿದರು.

ಆ. ಬೆಂಜಮಿನ್ ಲೂಯಿ ರೈಸರು ಶಾಸನಗಳನ್ನು ಓದುವ ------------ ಬೆಳಸಿಕೊಂಡರು.

ಇ. ಕನ್ನಡದ ಮೊಟ್ಟಮೊದಲ ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸಿದವರು ------------.

ಈ. ------ರಚಿಸುವ ಕೆಲಸವನ್ನು ಕಿಟ್ಟೆಲ್ ಅವರಿಗೆ ವಹಿಸಿಕೊಡಲಾಯಿತು.

ಕ. ಕನ್ನಡ ಭಾಷೆಯ ----------------ಬೆಳವಣಿಗೆಯನ್ನು ಅಧ್ಯಯನ ಮಾಡುವವರಿಗೆ ಕಿಟ್ಟೆಲ್ ನಿಘಂಟು ತುಂಬಾ ಸಹಕಾರಿಯಾಗಿದೆ.

V. ಕೆಳಕಂಡ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಗಂಧಗಾಳಿ

ಆ. ಕಾಲಗರ್ಭ

ಇ. ಹಮ್ಮಿಕೊಳ್ಳು

ಈ. ಸಂಕಲಿಸು

ಕ. ನಾಂದಿಹಾಡು

ಗ. ಕಾಣಿಕೆ

ಚ. ಸ್ವಪ್ರಯತ್ನ ಟ. ಕಾಲಾನುಕ್ರಮಣಿಕೆ

ಜ. ಇಹಲೋಕ ಡ. ಪರಿಶೋಧಿಸು

VI. ಟಿಪ್ಪಣಿ ಬರೆಯಿರಿ

ಅ. ಎಪಿಗ್ರಾಫಿಯಾ ಕರ್ನಾಟಿಕ

ಆ. ಮೈಸೂರು ಗೆಜೆಟಿಯರ್

VII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿಹಾಕಿದ ಹರ್ಮನ್ ಮೋಗ್ಲಿಂಗರ ಪರಿಚಯ ಮಾಡಿಕೊಡಿ.

ಆ. ವಿಲಿಯಂ ರೀವ್ ಯಾರು? ಅವರ ಕೃತಿಗಳಾವುವು? ಅವುಗಳ ವೈಶಿಷ್ಟ್ಯವೇನು?

ಇ. ಬೆಂಜಮಿನ್ ಲೂಯಿ ರೈಸ್‌ರವರು ಕನ್ನಡಕ್ಕೆ ನೀಡಿದ ಕೊಡುಗೆ ಏನು?

ಈ. ರೆವರೆಂಡ್ ಜಾನ್ ಗ್ಯಾರೆಟ್ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕಾಣಿಕೆ ಏನು?

ಕ. ಕನ್ನಡಭಾಷೆ ಮತ್ತು ಸಾಹಿತ್ಯಕ್ಕಾಗಿ ದುಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಕಿಟ್ಟೆಲ್ ತುಂಬಾ ಮುಖ್ಯರಾದವರು. ಹೇಗೆ?

VIII. ಕನ್ನಡಕ್ಕೆ ಭಾಷಾಂತರಿಸಿ

Rich in its literature, its prose and poetry, Karnataka has made Kannada the official language at all levels of administration. Additionally, it has formed a Kannada Kaavalu Samithi (watch dog committee) to

oversee that this decision is effectively implemented throughout the state. The teaching of kannada is now compulsory in all schools and over 5000 kannada teachers have been appointed in urdu and other non-kannada schools in 1983.

This is not to say that kannada has been neglected in the past. There have always been many famous institutions in karnataka which have devotedly worked for the promotion and development of kannada language, literature and culture. It is true that the promotion of kannada gathered momentum under the leadership of western scholars like Reev, Zigler, Moore, Moegling, Kittel, Rice and others and due credit will have to be given to the Basel Mission Press in Mangalore to print in Kannada and popularise the language.

10. ಹುತ್ತರಿ ಹಬ್ಬ

ದಕ್ಷಿಣ ಕಾಶ್ಮೀರ ಎಂಬ ಹೆಗ್ಗಳಿಕೆಗೆ ಪಾತ್ರವಾದ ಕೊಡಗು ಕರ್ನಾಟಕದ ಒಂದು ಸುಂದರ ಜಿಲ್ಲೆ. ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಕೊಡವರ ಮೂಲಪುರಷ ಕದಂಬ ವಂಶದ ಚಂದ್ರವರ್ಮನೆಂದು ತಿಳಿದುಬರುತ್ತದೆ. ಕೊಡವರ ಮನೆಮಾತು ಕೊಡವ. ಕಾವೇರಿ ಕೊಡವರ ಮನೆದೇವತೆ, ಕೊಡಗಿನ ಅಧಿದೇವತೆ.

ಹುತ್ತರಿ, ಕೈಲ್‌ಮುಹೂರ್ತ, ಕಾವೇರಿಸಂಕ್ರಮಣವೇ ಮೊದಲಾದವು ಕೊಡವರ ಹಬ್ಬಗಳು. ಇವುಗಳಲ್ಲಿ ಮುಖ್ಯವಾದದ್ದು ಹುತ್ತರಿ ಹಬ್ಬ. ಗದ್ದೆಯಲ್ಲಿ ಹುಲುಸಾಗಿ ಬೆಳೆದುನಿಂತ ಬತ್ತದ ಪೈರನ್ನು ಪೂಜಿಸಿ ಕುಯಿಲು ಮಾಡಿ ಮನೆ ತುಂಬಿಸಿಕೊಳ್ಳುವ ಹಬ್ಬವೇ ಹುತ್ತರಿಹಬ್ಬ. ಹುತ್ತರಿ ಎಂದರೆ ಹೊಸ ಅಕ್ಕಿ. ಈ ಪದದ ಮೂಲ ಪುತ್ತರಿ. ಪುದಿ + ಅರಿ = ಪುತ್ತರಿ ಎಂದು. ಇದೇ ಹೊಸಗನ್ನಡದಲ್ಲಿ ಹುತ್ತರಿ ಆಗಿದೆ. ಹುತ್ತರಿ ಕೊಡವರ ಸುಗ್ಗಿಯ ಹಬ್ಬ.

ಹಿಂದೆ ಹುತ್ತರಿ ಹಬ್ಬವನ್ನು ಮೂರುದಿನಗಳ ಕಾಲ ಆಚರಿಸುತ್ತಿದ್ದರು. ಮೊದಲನೆಯ ದಿನ `ದೇವಪೊಳ್ದ್'. ಅಂದು ಊರಿನವರೆಲ್ಲರೂ ಸೇರಿ ದೇವಸ್ಥಾನಕ್ಕೆ ಸೇರಿದ ಗದ್ದೆಯಲ್ಲಿ ಕದಿರು ಕೊಯ್ಯುತ್ತಿದ್ದರು. ಮರುದಿನ `ಅರಮನೆಪೊಳ್ದ್'. ಆದಿನ ಅರಸರಿಗೆ ಸೇರಿದ ಗದ್ದೆಯ ಕೊಯ್ಲು ನಡೆಯುತ್ತಿತ್ತು. ಮೂರನೆಯ ದಿನ ಜನರು ತಮ್ಮ ತಮ್ಮ ಗದ್ದೆಗಳಲ್ಲಿ ಕೊಯ್ಲು ಕೊಯ್ಯುತ್ತಿದ್ದರು. ಇದನ್ನು `ನಾಡಪೊಳ್ದ್' ಎಂದು ಕರೆಯುತ್ತಾರೆ. ಈಗ `ನಾಡಪೊಳ್ದ್' ಮಾತ್ರ ಆಚರಣೆಯಲ್ಲಿದೆ.

ಹುತ್ತರಿಹಬ್ಬ, ಅಂದರೆ `ನಾಡಪೊಳ್ದ್'ವಿನ ದಿನ ಪ್ರತಿಯೊಬ್ಬ ಕೊಡವನೂ ತಾನು ಎಲ್ಲಿದ್ದರೂ `ಐನ್‌ಮನೆಗೆ' ಬರಲೇಬೇಕು. ಪೊಳ್ದುವಿನ ದಿನ ಮೇದರವನು ಹುತ್ತರಿಕುಕ್ಕೆ, ಚಾಪೆಯನ್ನು, ಬಡಗಿ ಕತ್ತಿ, ಕುತ್ತಿಗಳನ್ನು, ತಂದುಕೊಡಬೇಕು. ಹೀಗೆ ಹೊಸ ವಸ್ತುಗಳನ್ನು ತಂದುಕೊಡುವವರಿಗೆಲ್ಲಾ ಅಕ್ಕಿ, ಬೆಲ್ಲ,ತೆಂಗಿನಕಾಯಿ, ಬಾಳೆಹಣ್ಣು, ಹುತ್ತರಿಗೆಣಸು, ಉಪ್ಪು, ಮೆಣಸು, ಎಳ್ಳು, ಕೊಬ್ಬರಿಎಣ್ಣೆ ಮತ್ತು

ಅಡಿಕೆಯನ್ನು ಕೊಟ್ಟು ಸತ್ಕರಿಸುತ್ತಾರೆ. ಆ ದಿನ ದೇವಸ್ಥಾನದ ಪೂಜಾರಿ ಊರಿನ ಪ್ರತಿ ಮನೆಗೂ ಹೋಗಿ ಪುಣ್ಯಾರ್ಚನೆ ಮಾಡಿ ಮನೆಯನ್ನು ಶುದ್ಧೀಕರಿಸುತ್ತಾನೆ. ಹೀಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡನಂತರ ಐನ್‌ಮನೆಯ ನೆಲ್ಲಕ್ಕಿ ನಡುಬಾಡೆಯನ್ನು (ದೇವರುಮನೆ) ಶುದ್ಧೀಕರಿಸಿ ತೂಗುದೀಪದ ಕೆಳಗೆ ಹೊಸಚಾಪೆಯನ್ನು ಹಾಸಿ ಅದರ ಮೇಲೆ ಹುತ್ತರಿ ಕುಕ್ಕೆಯಲ್ಲಿ ಮಾವು, ಅರಳಿಎಲೆ ಮತ್ತು ಅಬ್ಬಿನಾರನ್ನು ಇಡುತ್ತಾರೆ. ಹುತ್ತರಿ ಕುಕ್ಕೆಯ ತುಂಬ ಬತ್ತವನ್ನು ತುಂಬಿ ಅದರ ಮೇಲೆ ಒಂದು ಬಳ್ಳದಲ್ಲಿ ಅಕ್ಕಿ, ಬಳ್ಳದ ಮೇಲೆ ಒಂದು ಮಾನದಲ್ಲಿ ಅಕ್ಕಿ ತುಂಬಿಟ್ಟು, ಅದರ ಮೇಲೆ ತಂಬಿಟ್ಟು ತುಂಬಿದ ಹುತ್ತರಿ ಕುಕ್ಕೆಯನ್ನು ಇಡುತ್ತಾರೆ. ಚಾಪೆಯ ಮೇಲೆ ಹಾಲು, ಜೇನುತುಪ್ಪ, ತುಪ್ಪ, ವಿಳ್ಳೇದೆಲೆ, ಅಡಿಕೆ, ತೆಂಗಿನಕಾಯಿ, ಶುಂಠಿ, ಎಳ್ಳು, ಹಾಗಲಮುಳ್ಳು ಮತ್ತು ಕುಡುಗೋಲನ್ನು ಇಡುತ್ತಾರೆ. ವಾದ್ಯಗಾರ ವಾದ್ಯಹೊಡೆಯಲು ಪ್ರಾರಂಭಿಸಿದಾಗ ಕುಟುಂಬದ ಹಿರಿಯ ಮುತ್ತೈದೆ ಅಕ್ಕಿ ಹಿಟ್ಟಿನ ರಂಗೋಲಿಯಿಂದ ಮಡಕೆ, ಕತ್ತಿ, ಕುತ್ತಿಯ ಮೇಲೆ ಸುಂದರ ಚಿತ್ರಗಳನ್ನು ಬಿಡಿಸುತ್ತಾರೆ. ಇದನ್ನು `ಕುರಿಪ್' ಎಂದು ಕರೆಯುತ್ತಾರೆ. ಅನಂತರ ಬೆಂದ ಗೆಣಸು, ಜೇನುತುಪ್ಪ, ತುಪ್ಪ, ಬೆಲ್ಲಗಳಿಂದ ರಸಾಯನನ್ನು ಮಾಡಿ ಎಲ್ಲರೂ ಸೇವಿಸುತ್ತಾರೆ. ಕೊಡವರು ತಮ್ಮ ಸಾಂಪ್ರದಾಯಿಕ ವಸ್ತ್ರಾಭರಣಗಳನ್ನು ತೊಟ್ಟು ದೇವರ ಮನೆಯ ತೂಗುದೀಪದ ಎದುರು ನಿಲ್ಲುತ್ತಾರೆ. ಮನೆತನದ ಹಿರಿಯ ಕದಿರು ತೆಗೆಯುವ ಕುತ್ತಿಯನ್ನು ಕದಿರು ತೆಗೆಯುವ ವ್ಯಕ್ತಿಗೆ ವಿಧಿಪೂರ್ವಕವಾಗಿ ಕೊಡುತ್ತಾರೆ. ಕುಟುಂಬದ ಹಿರಿಯ ಮುತ್ತೈದೆ ಆರತಿ ತಟ್ಟೆಯನ್ನು ಹಿಡಿದುಕೊಂಡು ಗದ್ದೆಗೆ ಹೊರಡುತ್ತಾರೆ. ಆಕೆಯ ಹಿಂದೆ ಎಲ್ಲರೂ ಹೊರಡುತ್ತಾರೆ. ಗದ್ದೆಯಲ್ಲಿ ಕದಿರಿನ ಬುಡಕ್ಕೆ ಹಾಲು ಸುರಿಯುತ್ತಿದ್ದಂತೆಯೇ ಅವರಲ್ಲೊಬ್ಬರು ಆಕಾಶಕ್ಕೆ ಗುಂಡು ಹಾರಿಸುತ್ತಾರೆ. ರೋಹಿಣಿ ನಕ್ಷತ್ರದ ಶುಭಮುಹೂರ್ತದಲ್ಲಿ ಅನ್ನಲಕ್ಷ್ಮಿಯನ್ನು ಪೂಜಿಸಿ ಕದಿರು ಕೊಯ್ಯುತ್ತಾರೆ. ಕತ್ತರಿಸಿದ ಕದಿರನ್ನು ಕೈಯಲ್ಲಿ ಹಿಡಿದುಕೊಂಡು `ಪೊಲಿ ಪೊಲಿ ದೇವಾ' ಅಂದರೆ `ಅನ್ನಲಕ್ಷ್ಮಿಯೇ ಅಕ್ಷಯವಾಗು' ಎಂದು

ಹಾಡುತ್ತಾ ವಾದ್ಯಗೋಷ್ಠಿಗಳೊಡನೆ ತಮ್ಮ ತಮ್ಮ ಮನೆಗಳಿಗೆ ಹೋಗಿ ನೆಲ್ಲಕ್ಕಿ ನಡುಬಾಡೆಯಲ್ಲಿ ಹಾಸಿರುವ ಚಾಪೆಯ ಮೇಲೆ ಕದಿರನ್ನು ಇಡುತ್ತಾರೆ. ಕದಿರು, ಮಾವು, ಅರಳಿ, ಕಾಡುಗೇರು ಎಲೆಗಳಿಂದ ಸುಂದರ ತೋರಣಗಳನ್ನು ಹೆಣೆದು ಮನೆಯ ಬಾಗಿಲು, ಹೊಸ್ತಿಲು, ಕೈಸಾಲೆಯ ಕಂಬ, ಕಿಟಕಿ, ಕೋವಿ, ಕತ್ತಿ, ಕೊಟ್ಟಿಗೆ, ತೆಂಗಿನಮರ, ಬಾಳೆಯಗಿಡ ಮತ್ತು ನೀರಿನ ಪಾತ್ರೆಗಳಿಗೆ ಕಟ್ಟುತ್ತಾರೆ.

ಪೊಳ್ದ್ ಮುಗಿದ ಒಂದು ವಾರದವರೆಗೆ ಊರಿನ `ಮಂದ್' ಅಂದರೆ ಗ್ರಾಮರಂಗದಲ್ಲಿ ಕುಣಿತ, ಕೋಲಾಟಗಳು ನಡೆಯುತ್ತವೆ. ಇದನ್ನು `ಹುತ್ತರಿ ಕುಣಿತ' ಎಂದು ಕರೆಯುತ್ತಾರೆ. ಬತ್ತದ ಬೇಸಾಯದ ವಿವಿಧ ಹಂತಗಳನ್ನು ವರ್ಣಿಸುವ ಹಾಡುಗಳು, ಹಬ್ಬಗಳನ್ನು ಕುರಿತ ಹಾಡುಗಳು ಹಾಗೂ ಜೀವನದ ರಸನಿಮಿಷಗಳಿಗೆ ಸಂಬಂಧಿಸಿದಂತೆ ಅನೇಕ ರಸವತ್ತಾದ ಹಾಡುಗಳನ್ನು ಹಾಡುತ್ತಾರೆ. ಇವೇ ಹುತ್ತರಿ ಹಾಡುಗಳು.

ಹೀಗೆ ಪ್ರಕೃತಿಯ ಆರಾಧನೆ ಮತ್ತು ಮನೋರಂಜನೆಯನ್ನೊಳಗೊಂಡ ಹುತ್ತರಿಹಬ್ಬ ನೋಡುಗರ ಕಣ್ಮನ ಸೆಳೆಯುವಂತಿರುತ್ತದೆ.

ಕಠಿಣಪದಗಳ ಅರ್ಥ

ಹೆಗ್ಗಳಿಕೆ – greatness
ಸುಗ್ಗಿ – harvest
ಕದಿರು – paddy stalk
ಕೊಯ್ಯು – to cut
ಕೊಯ್ಲು – harvest
ಚಾಪೆ – mat
ಕುಕ್ಕೆ – basket
ಕತ್ತಿ – dirk, sword

ಕುತ್ತಿ	–	a throwing tube
ಎಳ್ಳು	–	sesame seeds
ಹಾಸು	–	spread
ಅರಳಿಎಲೆ	–	pipal leaf
ಬತ್ತ	–	paddy
ಬಳ್ಳ	–	a measure of weight
ಮಾನ	–	a measure of weight
ತಂಬಿಟ್ಟು	–	a festive dish made from rice floor, jaggery and coconut
ಜೇನುತುಪ್ಪ	–	honey
ವಿಳ್ಯೇದೆಲೆ	–	betel leaf
ಶುಂಠಿ	–	ginger
ಹಾಗಲಮುಳ್ಳು	–	tender bittergourd
ಕುಡುಗೋಲು	–	sickle
ಮಡಕೆ	–	earthen pot
ಬಿಡಿಸು	–	to draw
ಗೆಣಸು	–	sweet potato
ಹೊಸ್ತಿಲು	–	ಹೊಸಲು, threshold
ಕೈಸಾಲೆ	–	front varandah
ನೋಡುಗ	–	on looker
ಸೆಳೆ	–	to attract

ಕೊಟ್ಟಿಗೆ – cowshed

ಆರಾಧನೆ – worship

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದವನ್ನು ಬದಲಾಯಿಸಿ ಬರೆಯಿರಿ

ಮಾದರಿ: ಪುತ್ತರಿ – ಹುತ್ತರಿ

ಅ. ಪಾಲು –

ಆ. ಪಣ್ಣು –

ಇ. ಪತ್ತು –

ಈ. ಪನಿ –

ಕ. ಪಲ್ಲಿ –

ಗ. ಪೀಚು –

ಚ. ಪುಳಿ –

ಜ. ಪೂವು –

ಟ. ಪೆಣ್ಣು –

ಡ. ಪೋಗು –

II. ಆವರಣದಲ್ಲಿ ಕೊಟ್ಟಿರುವ ಪದ/ಪದಪುಂಜಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ರಂಗೋಲಿ, ನಾಟಕರಂಗ, ಸಾಂಪ್ರದಾಯಿಕ, ಪುಣ್ಯಾರ್ಚನೆ, ಮನೆಮಾತು, ಸುಗ್ಗಿಹಬ್ಬ)

ಅ. ನನ್ನ .... ಕನ್ನಡ.

ಆ. ಮಂದ್ ಎಂದರೆ ....ಎಂದು ಅರ್ಥ.

ಇ. ನಮ್ಮ ಹೊಸ ಮನೆಗೆ ....ಮಾಡಿಸಿದೆವು.

ಈ. ಕನ್ನಡಿಗರ .... ಸಂಕ್ರಾಂತಿ.

ಕ. ಹಬ್ಬದ ದಿನಗಳಂದು ಮನೆಯ ಮುಂದೆ ಅಕ್ಕಿಹಿಟ್ಟಿನಿಂದ ಸುಂದರವಾಗಿ .... ಬಿಡಿಸುತ್ತಾರೆ.

ಗ. ಮನೆಯಲ್ಲಿ ಧಾರ್ಮಿಕಾಚರಣೆಗಳು ನಡೆಯುವ ಸಂದರ್ಭದಲ್ಲಿ ಜನರು ....ಉಡುಗೆ ತೊಡುಗೆಗಳನ್ನು ತೊಡುತ್ತಾರೆ.

III. ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಅಂದು ಊರಿನವರೆಲ್ಲರೂ ಸೇರಿ ದೇವಸ್ಥಾನಕ್ಕೆ ....ಗದ್ದೆಯಲ್ಲಿ ಕದಿರು ಕೊಯ್ಯುತ್ತಿದ್ದರು (ಸೇರು).

ಆ. .... ಮಾವು, ಅರಳಿಎಲೆ ಮತ್ತು ಅಬ್ಬಿನಾರನ್ನು ಇಡುತ್ತಾರೆ (ಹುತ್ತರಿ ಕುಕ್ಕೆ).

ಇ. ಕೊಡವರು ತಮ್ಮ ಸಾಂಪ್ರದಾಯಿಕ ವಸ್ತ್ರಾಭರಣಗಳನ್ನು .... ತೂಗು ದೀಪದ ಎದುರು ನಿಲ್ಲುತ್ತಾರೆ (ತೊಡು).

ಈ. ಮನೆತನದ ಹಿರಿಯ ಕತ್ತಿಯನ್ನು ಕದಿರು............. ವ್ಯಕ್ತಿಗೆ ವಿಧಿ ಪೂರ್ವಕವಾಗಿ ಕೊಡುತ್ತಾರೆ (ತೆಗೆ).

ಕ. ಕುಟುಂಬದ ಹಿರಿಯಮುತ್ತೈದೆ ಆರತಿ ತಟ್ಟೆಯನ್ನು .... ಗದ್ದೆಗೆ ಹೊರಡುತ್ತಾರೆ (ಹಿಡಿದುಕೊಳ್ಳು).

ಗ. ಕದಿರು, ಮಾವು, ಅರಳಿ, ಕಾಡುಗೇರು ಎಲೆಗಳಿಂದ ಸುಂದರ .... ಹೆಣೆದು ಬಾಗಿಲಿಗೆ ಕಟ್ಟುತ್ತಾರೆ (ತೋರಣಗಳು).

IV. ಓದುವವನು ಓದುಗನಾದರೆ ಕೆಳಕಂಡವುಗಳು ಏನಾಗುತ್ತವೆ

ಅ. ನೋಡುವವನು ....

ಆ. ಹಾಡುವವನು ....

ಇ. ಕೇಳುವವನು ....

ಈ. ಆಡುವವನು ....

ಕ. ಓಡುವವನು ....

ಗ. ಹೇಳುವವನು ....

V. ಕೆಳಕಂಡವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಹೆಗ್ಗಳಿಕೆ	ಗ. ಬಳ್ಳ
ಆ. ಮೂಲಪುರುಷ	ಚ. ಕುಡುಗೋಲು
ಇ. ಮನೆಮಾತು	ಜ. ಬಿಡಿಸು
ಈ. ಹುಲುಸಾಗಿ	ಟ. ವಿಧಿಪೂರ್ವಕವಾಗಿ
ಕ. ತೂಗುದೀಪ	ಡ. ರಸವತ್ತಾದ

VI. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕೊಡವರು ಆಚರಿಸುವ ಪ್ರಮುಖ ಹಬ್ಬಗಳು ಯಾವುವು?

ಆ. ಕುರಿಪ್ ಎಂದರೆ ಏನು?

ಇ. ಹಿಂದೆ ಹುತ್ತರಿ ಹಬ್ಬವನ್ನು ಎಷ್ಟು ದಿನ ಆಚರಿಸುತ್ತಿದ್ದರು?

ಈ. ಹುತ್ತರಿ ಹಬ್ಬಕ್ಕೆ ಯಾರು ಯಾರು ಯಾವ ಯಾವ ಹೊಸವಸ್ತುಗಳನ್ನು ತಂದುಕೊಡುತ್ತಾರೆ?

ಕ. ಹಬ್ಬಕ್ಕಾಗಿ ನೆಲ್ಲಕ್ಕಿ ನಡುಬಾಡೆಯಲ್ಲಿ ಯಾವ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ?

ಗ. ಕದಿರನ್ನು ಕೊಯ್ದ ನಂತರ ಏನು ಮಾಡುತ್ತಾರೆ?

ಚ. ಮಂದ್ ಎಂದರೆ ಏನು? ಹುತ್ತರಿ ಹಬ್ಬದ ಅಂಗವಾಗಿ ಅಲ್ಲಿ ಏನು ನಡೆಯುತ್ತದೆ?

VII. ನೀವು ಸುಗ್ಗಿ ಹಬ್ಬವನ್ನು ಆಚರಿಸುವ ರೀತಿಯ ಬಗ್ಗೆ ಒಂದು ಪ್ರಬಂಧವನ್ನು ಬರೆಯಿರಿ

VIII. ಕನ್ನಡಕ್ಕೆ ಭಾಷಾಂತರಿಸಿ

Harvest is celebrated in different names in different parts of the country. In Karnataka `Sankranthi' is the harvest festival. It is celebrated after the harvesting season early in the year. It is a big occasion in the state. At this festival the farmers give thanks to the Sun-god for a good harvest.

The celebrations begin early in the day. The two oldest members of the family take bath. Then in their wet clothes they perform the ceremony. They cook the special Pongal Rice over an earthen ovan specially made for the occassion. The ovan is placed facing the Sun. A new pot or a bross vessel is used to cook the rice. This new earthen pot is decorated all round with designs made with rice flour.

The Pongal Rice is cooked from freshly harvested rice. The rice is boiled with milk, jaggary, cashew nuts and raisins. The family gathers round the ovan. When the rice boils over, everyone sings, "suggiyoo suggi, huggiyoo huggi". This is the wish for good harvest in the coming year. Then, food and prayers are offered to the Sun God. Pongal Rice, Ellu, sugarcane and fruits are offered in thanks giving.

After the ceremony is over poeple visit one another on that day and distribute `Ellu'. The significance of distributing `Ellu' is reaffirming the good relationship.

11. ಕಾವೇರಿ

ಪ್ರಿಯ ಚಿತ್ರಾಂಗದಾ,

ನಾನು ಕ್ಷೇಮ, ನೀನೂ ಕ್ಷೇಮವೆಂದು ತಿಳಿದಿದ್ದೇನೆ. ನನ್ನ ಹಿಂದಿನ ಪತ್ರದಲ್ಲಿ ದಕ್ಷಿಣಗಂಗೆ ಎಂದು ಪ್ರಸಿದ್ಧಿಯಾದ ಕಾವೇರಿ ನದಿಯ ಬಗ್ಗೆ ಬರೆಯುತ್ತೇನೆಂದು ತಿಳಿಸಿದ್ದೆ. ನಾವಿಬ್ಬರೂ ಎಷ್ಟೋ ಸಲ ಕಾಳಿಂಗರಾಯರು ಸುಶ್ರಾವ್ಯವಾಗಿ ಹಾಡಿರುವ `ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಹಾಡನ್ನು ಕೇಳಿದ್ದೇವೆ. `ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು ಕಾವೇರಿ ಗೋದೆಯರು ಮೈದೊಳೆವ ನಲುನಾಡು' ಎಂಬ ಸಾಲುಗಳನ್ನು ಕಾಳಿಂಗರಾಯರ ದನಿಗೆ ದನಿಗೂಡಿಸಿ ಹಾಡುತ್ತಿದ್ದುದ್ದು ನೆನಪಿದೆಯಲ್ಲವೇ? ಅಂತಹ ಒಂದು ಪಾವನ ನದಿ ಕಾವೇರಿ.

ಕಾವೇರಿ ನದಿಯ ಉಗಮದ ಬಗ್ಗೆ ಅನೇಕ ದಂತಕತೆಗಳಿವೆ. ಅವುಗಳಲ್ಲಿ ಬಹಳ ಪ್ರಚಲಿತವಾದ ಕತೆ ಏನೆಂದರೆ ಸಂತಾನಾಪೇಕ್ಷಿಯಾದ ಕವೇರಮುನಿ ಕೊಡಗಿನ ಬ್ರಹ್ಮಗಿರಿಯಲ್ಲಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ. ಅವನ ತಪಸ್ಸಿಗೆ ಮೆಚ್ಚಿದ ಬ್ರಹ್ಮ ಪ್ರತ್ಯಕ್ಷನಾಗಿ ತನ್ನ ಸಾಕುಮಗಳಾದ ಲೋಪಾಮುದ್ರೆಯನ್ನೇ ಅವನಿಗೆ ಕೊಟ್ಟ. ಅಂದಿನಿಂದ ಲೋಪಾಮುದ್ರೆ ಕವೇರನ ಮಗಳಾಗಿ ಕಾವೇರಿ ಎಂಬ ಅಭಿಧಾನವನ್ನು ಪಡೆದಳು. ಮೋಕ್ಷಕ್ಕಾಗಿ ಕವೇರಮುನಿ ಹಂಬಲಿಸುತ್ತಿದ್ದುದನ್ನು ಕಂಡ ಕಾವೇರಿ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ತನ್ನ ತಂದೆಗೆ ಮೋಕ್ಷ ಪ್ರಾಪ್ತಿಯಾಗಬೇಕೆಂದೂ, ಲೋಕ ಕಲ್ಯಾಣಕ್ಕಾಗಿ ತಾನು ನದಿಯಾಗಿ ಹರಿಯಬೇಕೆಂದೂ, ತನ್ನಲ್ಲಿ ಮಿಂದವರು ಸಕಲ ಪಾಪಗಳಿಂದ ಮುಕ್ತರಾಗಬೇಕೆಂದೂ ವರವನ್ನು ಬೇಡಿದಳು. ಅವಳ ತಪಸ್ಸನ್ನು ಮೆಚ್ಚಿದ ಬ್ರಹ್ಮ ತಥಾಸ್ತು ಎಂದ. ಅಂದಿನಿಂದ ಕವೇರ ಋಷಿಯ ಮಗಳಾದ ಕಾವೇರಿ ನದಿಯಾಗಿ ಹರಿಯತೊಡಗಿದಳು.

ಕೊಡಗಿನ ಬ್ರಹ್ಮಗಿರಿಬೆಟ್ಟದ ತಲಕಾವೇರಿಯ ಹೃದಯದಲ್ಲಿ ಜಿನುಗಿ ತಲಕಾಡಿನ ವಿಸ್ತಾರವಾದ ಮರಳಿನಲ್ಲಿ ಮಿಶ್ರಮಿಸಿ ಕನ್ನಂಬಾಡಿಯಲ್ಲಿ ನಿಂತು ಗಂಭೀರವಾಗಿ ಸುತ್ತಮುತ್ತ ನೋಡಿ ಮೈಸೂರು – ಮಂಡ್ಯಗಳ ರೈತರನ್ನು ಹರಸಿ ಮುಂದೆಸಾಗುವ ಕಾವೇರಿ ಬೆಟ್ಟ, ಬಯಲು ಎರಡು ಪ್ರದೇಶಕ್ಕೂ ಆಶ್ರಯ ನೀಡುವವಳು.

750 ಕಿಲೋಮೀಟರ್ ಉದ್ದದ ಈ ನದಿ ತನ್ನ 750 ಕಿ.ಮೀ.ಗಳ ಕುತೂಹಲಕಾರಿಯಾದ ಯಾತ್ರೆಯಲ್ಲಿ ಅನೇಕ ಬಾರಿ ಭೌಗೋಳಿಕ ಲಕ್ಷಣಕ್ಕೆ ಅನುಗುಣವಾಗಿ ತನ್ನ ಪಾತ್ರದ ದಿಕ್ಕನ್ನು ಬದಲಾಯಿಸುತ್ತಾ ಹರಿಯುತ್ತದೆ. ತಲಕಾವೇರಿಯಿಂದ ಸಿದ್ದಾಪುರದವರೆಗೆ ಆಗ್ನೇಯಮುಖವಾಗಿ ಹರಿದು ಅಲ್ಲಿಂದ ಈಶಾನ್ಯ ದಿಕ್ಕಿಗೆ ಹರಿಯುವ ಕಾವೇರಿ ಕೊಡಗಿನ ಅನೇಕ ಸಣ್ಣಪುಟ್ಟ ಉಪನದಿಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ.

ಹೀಗೆ ಸೇರಿಸಿಕೊಳ್ಳುವ ಉಪನದಿಗಳಲ್ಲಿ ಹಾರಂಗಿ ನದಿ ಪ್ರಮುಖವಾದುದು. ಹಾರಂಗಿಯೊಡಗೂಡಿ ಕೊಡಗು, ಮೈಸೂರು ಜಿಲ್ಲೆಗಳ ಗಡಿಯುದ್ದಕ್ಕೂ ಸಾಗಿ ರಾಮನಾಥಪುರದ ಬಳಿ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಹರಿದು ಚುಂಚನಕಟ್ಟೆಯ ಬಳಿ ಸಣ್ಣ ಜಲಪಾತವಾಗಿ ಧುಮುಕುತ್ತದೆ. ಕನ್ನಂಬಾಡಿಯ ಬಳಿ ಹೇಮಾವತಿ ಮತ್ತು ಲಕ್ಷ್ಮಣತೀರ್ಥ ಬಂದು ಇದಕ್ಕೆ ಸೇರಿಕೊಳ್ಳುತ್ತವೆ. ಮುಂದೆ ಶ್ರೀರಂಗಪಟ್ಟಣದ ಬಳಿ ಈ ನದಿ ಕವಲೊಡೆದು ಶ್ರೀರಂಗಪಟ್ಟಣವನ್ನು ದ್ವೀಪವನ್ನಾಗಿ ಪರಿವರ್ತಿಸಿ ಸಂಗಮದಲ್ಲಿ ಕೂಡಿ ಉತ್ತರಕ್ಕೆ ಸಾಗುತ್ತದೆ. ತಿರುಮಕೂಡಲು ನರಸೀಪುರದ ಬಳಿ ಕಪಿಲಾನದಿ ಇದಕ್ಕೆ ಸೇರಿಕೊಳ್ಳುತ್ತದೆ. ಅಲ್ಲಿಂದ ಮುಂದೆ ದಕ್ಷಿಣಕ್ಕೆ ತಿರುಗಿ ತಲಕಾಡಿನ ಮೂಲಕ ಹರಿಯುತ್ತದೆ. ಇಲ್ಲಿ ಈ ನದಿಯ ಪಾತ್ರ ತುಂಬಾ ಹರವಾಗಿರುವುದರಿಂದ ಇಕ್ಕಟ್ಟಾದ ಜಾಗದಿಂದ ತಂದ ಮರಳನ್ನೆಲ್ಲಾ ಇಲ್ಲಿ ಗುಡ್ಡೆ ಹಾಕುತ್ತದೆ. ಹೀಗಾಗಿ ತಲಕಾಡಿನ ಸುತ್ತ ಅಪಾರ ಮರಳುರಾಶಿಯನ್ನು ಕಾಣಬಹುದು. ಅಲ್ಲಿಂದ ಉತ್ತರಾಭಿಮುಖವಾಗಿ

ಹರಿದು ಶಿವಸಮುದ್ರದ ಬಳಿ ಎರಡು ಕವಲಾಗಿ ಸುಮಾರು ನೂರು ಮೀಟರ್ ಎತ್ತರದಿಂದ ಕೆಳಕ್ಕೆ ಧುಮುಕುತ್ತದೆ. ಜಲಪಾತದ ಪಶ್ಚಿಮದ ಕವಲಿಗೆ 'ಗಗನಚುಕ್ಕಿ' ಎಂದೂ ಪೂರ್ವದ ಕವಲಿಗೆ 'ಭರಚುಕ್ಕಿ' ಎಂದೂ ಹೆಸರು. ಈ ಜಲಪಾತಗಳು ನೋಡಲು ಅತ್ಯಂತ ಸುಂದರವಾಗಿವೆ. ಅನಂತರ ಎರಡು ಕವಲುಗಳು ಒಂದಾಗಿ ಬೆಂಗಳೂರು ಜಿಲ್ಲೆಯ ಅಂಚಿನಲ್ಲಿ ಮುಂದೆ ಸಾಗುತ್ತದೆ. ಇಲ್ಲಿ ಎತ್ತರದಿಂದ ಇಳಿಜಾರಿಗೆ ಹರಿಯುವ ಈ ನದಿಗೆ ಅನೇಕ ಉಪನದಿಗಳು ಸೇರಿ ಕೊಳ್ಳುತ್ತವೆ. ಇವುಗಳಲ್ಲಿ ಶಿಂಷಾ, ಅರ್ಕಾವತಿ ದೊಡ್ಡವು.

ಕರ್ನಾಟಕದ ಆಗ್ನೇಯದ ಅಂಚಿನ ಉದ್ದಕ್ಕೂ ಹರಿದು ತಮಿಳುನಾಡಿನ ಹೋಗೇನಕಲ್ಲಿನ ಬಳಿ ಮತ್ತೆ ಧುಮುಕಿ ದಕ್ಷಿಣಕ್ಕೆ ತಿರುಗುತ್ತದೆ. ಅಲ್ಲಿಂದ ಮುಂದೆ ಪಾಲಾರ್ ನದಿಯನ್ನು ತನ್ನಲ್ಲಿ ಸೇರಿಸಿಕೊಂಡು ಮುಂದುವರಿಯುವ ಈ ನದಿಗೆ ಮೆಟ್ಟೂರಿನ ಬಳಿ ಎತ್ತರವಾದ ಅಣೆಕಟ್ಟೆಯನ್ನು ಕಟ್ಟಲಾಗಿದೆ. ಈ ಅಣೆಕಟ್ಟೆ 8300 ಅಡಿ ಉದ್ದ, 176 ಅಡಿ ಎತ್ತರ ಇದೆ. ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಇದು ತುಂಬಾ ಸಹಕಾರಿಯಾಗಿದೆ. ಮೆಟ್ಟೂರಿನಿಂದ ಮುಂದೆ ಭವಾನಿಯವರೆಗೆ ದಕ್ಷಿಣದಿಕ್ಕಿಗೆ ಹರಿಯುವ ಕಾವೇರಿಗೆ ಭವಾನಿ ನದಿ ಬಂದು ಸೇರುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹರಿಯುವ ಈ ನದಿಗೆ ಮುಕ್ಕೊಂಬು ಎಂಬ ಸ್ಥಳದಲ್ಲಿ ಅಣೆಕಟ್ಟನ್ನು ಕಟ್ಟಲಾಗಿದೆ. ಅಲ್ಲಿಂದ ಕಾವೇರಿ ಎರಡು ಕವಲೊಡೆದು 'ಶ್ರೀರಂಗಂ' ಎಂಬ ದ್ವೀಪವನ್ನು ನಿರ್ಮಿಸಿದೆ. ಉತ್ತರದ ಕವಲನ್ನು 'ಕೊಳ್ಳಿಡಂ' ಎಂದೂ ದಕ್ಷಿಣದ ಕವಲನ್ನು 'ಕಾವೇರಿ' ಎಂದೂ ಕರೆಯುತ್ತಾರೆ. ಈ ಎರಡು ಕವಲುಗಳೂ ಶ್ರೀರಂಗಂನಿಂದ ಮುಂದೆ ಸ್ವಲ್ಪ ದೂರ ಹರಿದು ಪುನಃ ಒಂದುಗೂಡಿ ಕಲ್ಲಣೈ ಎಂಬ ಸ್ಥಳದವರೆಗೆ ಹರಿಯುತ್ತದೆ. ಅಲ್ಲಿ ಈ ನದಿಗೆ ಒಂದು ಮಹಾ ಅಣೆಕಟ್ಟೆಯನ್ನು ನಿರ್ಮಿಸಿದ್ದಾರೆ. ಇದರ ಹೆಸರೂ ಸಹ ಕಲ್ಲಣೈ. ಮುಂದೆ ಕಾವೇರಿ ಹಲವು ಕವಲುಗಳಾಗಿ ಒಡೆದು 'ಕಾವೇರಿಪೂಂಪಟ್ಟಣಂ' ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ.

ಕಾವೇರಿಯಿಂದ ಕರ್ನಾಟಕಕ್ಕೆ ಆಗಿರುವ ಉಪಕಾರ ಅಷ್ಟಿಷ್ಟಲ್ಲ. ಮೈಸೂರಿಗೆ ಸಮೀಪವಿರುವ ಕನ್ನಂಬಾಡಿ ಎಂಬ ಸ್ಥಳದಲ್ಲಿ ಕಾವೇರಿಗೆ ಅಣೆಕಟ್ಟೆಯನ್ನು ಕಟ್ಟಲಾಗಿದೆ. ಈ ಅಣೆಕಟ್ಟೆಯಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಬಹುತೇಕ ಭೂಮಿ ನೀರಾವರಿಗೆ ಒಳಪಟ್ಟಿದೆ.

ಶಿವಸಮುದ್ರದ ಬಳಿ ನಿರ್ಮಿಸಲಾಗಿರುವ ವಿದ್ಯುತ್ ಉತ್ಪಾದನಾಕೇಂದ್ರ ಇಡೀ ಏಷ್ಯಾದಲ್ಲೇ ಅತ್ಯಂತ ಹಳೆಯದು. ಅಂದಿನ ಕಾಲಕ್ಕೆ ದೊಡ್ಡದೂ ಆಗಿತ್ತು. ಕರ್ನಾಟಕದಲ್ಲಿ ಕಾವೇರಿಯ ನೀರನ್ನು ಅತ್ಯಂತ ಸಮರ್ಪಕವಾಗಿ ನೀರಾವರಿ ಹಾಗೂ ವಿದ್ಯುತ್ ಉತ್ಪಾದನೆಗೆ ಬಳಸಿಕೊಂಡ ಕೀರ್ತಿ ಸರ್.ಎಂ.ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ.

ಕೊಡಗಿನಲ್ಲಿ ಸಣ್ಣ ತೊರೆಯಾಗಿ ಹುಟ್ಟಿ ತಾರುಣ್ಯದ ಆರಂಭದಿಂದಲೇ ಸುತ್ತಲ ಸೀಮೆಯನ್ನೆಲ್ಲಾ ಸಮೃದ್ಧಗೊಳಿಸಿ ಶಿವಸಮುದ್ರದಲ್ಲಿ ಪರಿಧಿಯನ್ನು ಲಂಘಿಸುವಾಗ ವಿದ್ಯುತ್ತನ್ನು ಚಿಮ್ಮಿಸಿ ತಮಿಳುನಾಡಿನಲ್ಲಿ ತುಂಬು ಚೆಲುವು ಪಡೆದು ಸಮುದ್ರವನ್ನು ಸಂಗಮಿಸುವ ಈ ನದಿಯ ಉಪಯುಕ್ತತೆಯಿಂದಾಗಿ ಜನ ಇದನ್ನು ಪವಿತ್ರನದಿ ಎಂದು ಪೂಜಿಸುತ್ತಾರೆ.

ನಾಳೆಯಿಂದ ನನ್ನ ಪ್ರವಾಸ ಶಿವಮೊಗ್ಗ ಜಿಲ್ಲೆಯಲ್ಲಿ. ಮುಂದಿನ ಪತ್ರದಲ್ಲಿ ಸುಂದರ ಗೇರುಸೊಪ್ಪೆ ಜಲಪಾತದ ಬಗ್ಗೆ ಬರೆಯುತ್ತೇನೆ.

ಸ್ಥಳ: ಮೈಸೂರು
ದಿನಾಂಕ: 22-9-2000

ನಿನ್ನ ಪ್ರೀತಿಯ
ನೀಲಿಮಾ

ಕಠಿಣಪದಗಳ ಅರ್ಥ

ಕ್ಷೇಮ	–	safe
ಹಿಂದಿನ	–	previous

ತಾಯ್ನಾಡು	–	mother land
ದನಿ	–	voice
ದನಿಗೆ ದನಿಗೂಡಿಸು	–	to chime in
ಉಗಮ	–	origin
ಸಂತಾನ	–	progeny
ಅಭಿಧಾನ	–	name
ಮೋಕ್ಷ	–	salvation
ಜಿನುಗು	–	to drizzle
ಯಾತ್ರೆ	-	journey
ಜಲಪಾತ	–	water falls
ಕವಲು	–	branch
ಇಕ್ಕಟ್ಟು	–	narrow
ಇಳಿಜಾರು	–	slope
ಬಹುತೇಕ	-	most
ತೊರೆ	–	brook
ಪರಿಧಿ	–	limit
ಚಿಮ್ಮಿಸು	–	to spring up (generate electricity)
ಲಂಘಿಸು	–	to exceed, to overshoot the limit

ಅಭ್ಯಾಸಗಳು

I. ಬಿಡಿಸಿ ಬರೆಯಿರಿ

ಅ. ದನಿಗೂಡಿಸು

ಆ. ಸಂತಾನಾಪೇಕ್ಷೆಯಾದ

ಇ. ಮರಳನ್ನೆಲ್ಲಾ

ಈ. ಲಂಘಿಸುವಾಗ

ಕ. ಒಂದಾಗಿ

II. ಕೆಳಕಂಡ ವಾಕ್ಯವನ್ನು ಒಡೆದು ಚಿಕ್ಕಚಿಕ್ಕ ವಾಕ್ಯಗಳಾಗಿ ಮಾಡಿ

ಕಾವೇರಿ ಕೊಡಗಿನಲ್ಲಿ ಸಣ್ಣ ತೊರೆಯಾಗಿ ಹುಟ್ಟಿ ತಾರುಣ್ಯದ ಆರಂಭದಿಂದಲೇ ಸುತ್ತಲ ಸೀಮೆಯನ್ನೆಲ್ಲಾ ಸಮೃದ್ಧಗೊಳಿಸಿ ಶಿವಸಮುದ್ರದಲ್ಲಿ ಪರಿಧಿಯನ್ನು ಲಂಘಿಸುವಾಗ ವಿದ್ಯುತ್ತನ್ನು ಚಿಮ್ಮಿಸಿ ತಮಿಳುನಾಡಿನಲ್ಲಿ ತುಂಬು ಚೆಲುವು ಪಡೆದು ಸಮುದ್ರವನ್ನು ಸಂಗಮಿಸುವ ಈ ನದಿಯ ಉಪಯುಕ್ತತೆಯಿಂದಾಗಿ ಇದನ್ನು ಪವಿತ್ರನದಿ ಎಂದು ಪೂಜಿಸುತ್ತಾರೆ.

III. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಸಾಕುಮಗಳು, ಇಕ್ಕಟ್ಟು, ಎತ್ತರ, ಬಳಿ, ದನಿ, ಉಪನದಿ, ತೊರೆ, ತಥಾಸ್ತು, ಮೋಕ್ಷ)

ಅ. ಈ ಜಾಗ ತುಂಬ ....

ಆ. ನಮ್ಮ ತೋಟದ ಮಧ್ಯೆ ಒಂದು .... ಹರಿಯುತ್ತದೆ.

ಇ. ಸತ್ತವರೆಲ್ಲರಿಗೂ .... ಸಿಗುವುದಿಲ್ಲ.

ಈ. ಅವಳ ....ನನ್ನನ್ನು ಸಮ್ಮೋಹನಗೊಳಿಸಿತು.

ಕ. ಕಮಲ ರಾಮರಾಯರ ....

ಗ. ದೇವತೆಗಳು ಯಾರು ಯಾವ ವರವನ್ನು ಬೇಡಿದರೂ........ಎನ್ನುತ್ತಾರೆ.

ಚ. ಲಕ್ಷ್ಮಣತೀರ್ಥ ಕಾವೇರಿ ನದಿಯ ....

ಜ. ನನಗಿಂತ ನೀನು ಎರಡು ಇಂಚು ....

ಟ. ಕಾವೇರಿನದಿಗೆ ಮೆಟ್ಟೂರಿನ .... ಅಣೆಕಟ್ಟೆಯನ್ನು ಕಟ್ಟಲಾಗಿದೆ.

IV. **ಕೆಳಕಂಡ ವಾಕ್ಯಗಳಲ್ಲಿ ಗೀಟುಹಾಕಿ ತೋರಿಸಿರುವ ಭಾಗವನ್ನು ಸಮಾನಾರ್ಥಕ ಪದ / ಪದಪುಂಜದಿಂದ ಬದಲಾಯಿಸಿ**

ಅ. ಕಾವೇರಿ ಸಮುದ್ರವನ್ನು ಸೇರುವುದಕ್ಕೆ ಮುನ್ನ ಹಲವು ಕವಲಾಗಿ ಒಡೆಯುತ್ತದೆ.

ಆ. ಕಾವೇರಿನದಿ ರಾಮಾನಾಥಪುರದ ಬಳಿ ಪೂರ್ವಾಭಿಮುಖವಾಗಿ ಹರಿಯುತ್ತದೆ.

ಇ. ಅಂದಿನಿಂದ ಲೋಪಾಮುದ್ರೆ ಕವೇರನ ಮಗಳಾಗಿ ಕಾವೇರಿ ಎಂಬ ಅಭಿಧಾನ ಪಡೆದಳು.

ಈ. ಕೊಡಗಿನ ಬ್ರಹ್ಮಗಿರಿ ಬೆಟ್ಟದ ಹೃದಯದಿಂದ ಜಿನುಗಿದವಳು ಕಾವೇರಿ.

ಕ. ತನ್ನಲ್ಲಿ ಮಿಂದವರು ಸಕಲಪಾಪಗಳಿಂದ ಮುಕ್ತರಾಗುವಂತೆ ವರವನ್ನು ಕೊಡಬೇಕೆಂದು ಕಾವೇರಿ ಬ್ರಹ್ಮನನ್ನು ಬೇಡಿದಳು.

V. **ಮಾದರಿಯನ್ನನುಸರಿಸಿ ಕೊಟ್ಟಿರುವ ವಾಕ್ಯಗಳನ್ನು ಬದಲಾಯಿಸಿ**

ಮಾದರಿ: ಕಾವೇರಿಯಿಂದ ಕರ್ನಾಟಕಕ್ಕೆ ಆಗಿರುವ ಉಪಕಾರ ಅಷ್ಟಿಷ್ಟಲ್ಲ.

–ಕಾವೇರಿಯಿಂದ ಕರ್ನಾಟಕಕ್ಕೆ ಬಹಳ ಉಪಕಾರ ಆಗಿದೆ.

ಅ. ನಿನ್ನ ಬುದ್ಧಿವಂತಿಕೆಯಿಂದ ಆಗಿರುವ ಲಾಭ ಅಷ್ಟಿಷ್ಟಲ್ಲ.

ಆ. ಶ್ಯಾಮಲ ತಂದ ಸೀರೆ ಅಂತಿಂಥದ್ದಲ್ಲ.

ಇ. ನನ್ನ ಮಾವ ಎಲ್ಲರಂತಹವರಲ್ಲ.

VI. **ಕೆಳಕಂಡ ಪದ/ಪದಪುಂಜಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ**

ಅ. ದನಿಗೆ ದನಿಗೂಡಿಸು

ಆ. ಲಂಘಿಸುವಾಗ

ಇ. ಗಡಿಯುದ್ದಕ್ಕೂ

ಈ. ಹಂಬಲಿಸು

ಕ. ಮಿಂದವರು

ಗ. ಮುಂದುವರಿ

ಚ. ತಾರುಣ್ಯ

ಜ. ಸಂಗಮಿಸು

VII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ನದಿಗೆ ಕಾವೇರಿ ಎಂಬ ಹೆಸರು ಹೇಗೆ ಬಂದಿತು?

ಆ. ಕಾವೇರಿ ನದಿಯ ಹುಟ್ಟು ಎಲ್ಲಿ ಆಯಿತು?

ಇ. ಕಾವೇರಿ ನದಿಯನ್ನು ಸೇರುವ ಪ್ರಮುಖ ಉಪನದಿಗಳು ಯಾವುವು?

ಈ. ತಲಕಾಡಿನಲ್ಲಿ ಎಲ್ಲೆಲ್ಲೂ ಮರಳುರಾಶಿಯನ್ನು ಕಾಣಲು ಕಾರಣವೇನು?

ಕ. ಶಿವಸಮುದ್ರದ ಬಳಿ ಕಾವೇರಿ ನಿರ್ಮಿಸಿದ ಜಲಪಾತಗಳು ಯಾವುವು?

ಗ. ಕಾವೇರಿ ನದಿಯಿಂದಾಗಿ ನಿರ್ಮಿತವಾಗಿರುವ ದ್ವೀಪಗಳಾವುವು? ಅವು ಎಲ್ಲಿ ಇವೆ?

VIII. ನಿಮ್ಮ ರಾಜ್ಯದ ಪ್ರಮುಖ ನದಿಯೊಂದನ್ನು ಕುರಿತು ಪ್ರಬಂಧ ಬರೆಯಿರಿ

IX. ಕನ್ನಡಕ್ಕೆ ಭಾಷಾಂತರಿಸಿ

The Ganges is the largest and most famous river in India. It rises in the Himalayas. It is at first quite a little stream, but soon it is joined by a number of other streams and grows wide and deep. At Allahabad it is joined by the `Jamuna', itself a largest river and becomes so wide that hundreds of boats can sail up and down the river. It flows across the plains of Uttar Pradesh and falls into the Bay of Bengal.

To the Hindus the Ganges is the holiest of all the rivers. They call it `Mother Ganga'. They enjoy visiting the beautiful temples situated on the banks of the Ganges.

Haridwar and Varanasi are the holiest places on the banks of the **Ganges.** Every year big fairs are held at Haridwar and Varanasi.

12. ಜನಪದ ಗೀತೆಗಳು

ಎದ್ದೊಂದು ಗಳಿಗೇಲಿ ಯಾರ್‍ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆವಂತ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ

ತೊಟ್ಟಿಲ ಹೊತ್ಕೊಂಡು ತೌರುಬಣ್ಣ ಉಟುಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು ತಂಗೆವ್ವ ತೌರೂರ
ತಿಟ್ಟ ಹತ್ತಿ ತಿರುಗಿ ನೋಡ್ಯಾಳ

ಹಾಲುಂಡ ತವರೀಗೆ ಏನೆಂದು ಹಾಡಲಿ
ಹೊಳೆದಂಡೆಲಿರುವ ಕರಕೀಯ ಕುಡಿಹಾಂಗ
ಹಬ್ಬಲಿ ಅವರ ರಸಬಳ್ಳಿ

ಒಬ್ಬಳಿರುವ ಮನೆಗೆ ಹಬ್ಬದಿರು ಮಲ್ಲಿಗೆ
ಒಬ್ಬಳೆ ಕುಯ್ದು ಮುಡಿನಾರೆ ಮಲ್ಲಿಗೆ
ಹಬ್ಬೋಗು ನನ್ನ ತವರೀಗೆ

ತಂದೀಯ ನೆನೆದಾರೆ ತಂಗಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ ನೆನೆದಾರೆ
ಮಾಸಿದ ತಲೆಯೂ ಮಡಿಯಾಯ್ತು

ಸರದಾರ ಬರುವಾಗ ಸುರಿದಾವ ಮಲ್ಲಿಗೆ
ದೊರೆ ನನ್ನ ತಮ್ಮ ಬರುವಾಗ ಯಾಲಕ್ಕಿ
ಗೊನೆ ಬಾಗಿ ಹಾಲ ಸುರಿದಾವ

ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ
ಬಿಚ್ಚಿ ನನಮೇಲೆ ಒಗೆವಂಥ ರಾಯರನ
ಬಿಟ್ಟ್ಹ್ಯಾಂಗೆ ಬರಲಿ ಹಡದವ್ವ.

ಅಡಗೀಯ ಮನೆಯಾಗೆ ಮಡದೀಯ ಸುಳಿವಿಲ್ಲ
ಅಡಗಿ ಬಾಯಿಗೆ ರುಚಿ ಇಲ್ಲ ಹಡೆದವ್ವ
ಮಡದಿ ತವರೀಗೆ ಹೋಗ್ಯಾಳ

ಮಗ ನಿನ್ನ ಹಡಿಲಾಕೆ ಮುಗಿಲ ಮುಟ್ಟಿತ ಜೀವ
ಮದನಾರಿ ನನ್ನ ಸೊಸಿ ಬಂದು ನಡಿವಾಗ
ಮಗ ನಿನ್ನ ಮನವು ಎರಡಾಗಿ

ಸೊಸೆ ಬರುತಾಳೆಂದು ಖುಷಿ ಬಾಳ ಮನದಾಗ
ಸೊಸೆ ಬಂದು ಮಗನ ಕಸಕೊಂಡು ಬಾಳ್ವಾಗ
ಮುಗಿಲಿಗೆ ಬಾಯ ಬಡಿದಾಳ

ಅಣ್ಣನ ಹೆಂಡತಿ ಕಣ್ಣೀಗೆ ಒಳ್ಳೇವಳು
ಸುಣ್ಣದ ತಿಳಿನೀರ ಒಲಿಮುಂದ ಇಟುಗೊಂಡು
ಎಮ್ಮೆಹಾಲೆಂದು ಬಡಿಸ್ಯಾಳ.

ಅಣ್ಣನ ಮನೆಗೆ ಹೆಣ್ಣು ಬೇಡಲಿ ಹೋದೆ
ಕನ್ನಾಡಿಗೋಡಿ ಮರೆಮಾಡಿ ಅತ್ತೀಗಿ
ಕಣ್ಣು ಚಿವುಟ್ಯಾಳ ಪುರುಷಾಗ

ಕಣ್ಣುಚಿವುಟ್ಯಾಲಿ ಬ್ಯಾಡ ನಿನ್ಹೆಣ್ಣು ನಾನೊಲ್ಲೆ
ಅನ್ನಿಗರ ಮಗಳು ಅತಿ ಚೆಲುವೆ ಮಾಡಿಕೊಂಡು
ನಿನ್ನೂರ ಮೇಲೆ ಬರುವೇನ

ಚಿಂತಾಕು ಇಟುಗೊಂಡು ಚಿಪ್ಪಾಡಿ ಬಳಿವಾಕೆ
ಚಿಂತಿಲ್ಲೇನ ನಿನಗಿಷ್ಟ ನಿನಗಂಡ
ಅಲ್ಲೊಬ್ಬ ಕೂಡ ನಗುತ್ತಿದ್ದ

ಕಿಡಿಗೇಡಿ ಎಂದರೆ ತಿರುಗೊಮ್ಮೆ ನೋಡ್ಯಾನ
ನಿನ್ನಲ್ಲ ಹೋಗೋ ಕಿಡಿಗೇಡಿ
ಅಂಗಳದಿ ಮಗನಾಡುತ್ತಿದ್ದ ಕರೆದಿ

ಕವಿ, ಕಾವ್ಯ ವಿಚಾರ

ಜನಪದ ಗೀತೆಗಳನ್ನು ರಚಿಸಿದವರು ಯಾರೆಂಬುದು ತಿಳಿಯದು. ಅವರು ಹೆಸರಿಗಾಗಿ ಹೋರಾಡಿದವರಲ್ಲ, ಹಾರಾಡಿದವರಲ್ಲ ಅಥವಾ ಯಾರನ್ನು ಮೆಚ್ಚಿಸುವುದಕ್ಕಾಗಿಯೂ ಸಾಹಿತ್ಯವನ್ನು ರಚಿಸಿದವರಲ್ಲ. ತಮ್ಮ ಆತ್ಮಸಂತೋಷಕ್ಕೆಂದು ಹಾಡಿಕೊಂಡರು, ನಲಿದರು, ಬಿಟ್ಟುಹೋದರು. ಆದರೂ ಅವುಗಳು ಅಂದಿನಿಂದ ಇಂದಿನವರೆಗೂ ಕಂಠದಿಂದ ಕಂಠಕ್ಕೆ ಹಾರಿ ಹರಿದು ಬಂದಿವೆ. ಅದನ್ನು ಎಷ್ಟು ಸವಿದರೂ ಅದರ ಸವಿ ಬೇಸರ ತರಿಸುವುದಿಲ್ಲ.

ಜನಪದ ಸಾಹಿತ್ಯ ಅನಾಮಧೇಯ ಕವಿಗಳಿಂದ ರಚಿತವಾದದ್ದೇ ಆದರೂ ಅದು ತನ್ನ ವಿಶಿಷ್ಟತೆಯಿಂದಾಗಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. `ಜನತೆಯ ಕಾವ್ಯದ ಅರ್ಥವನ್ನು ತಿಳಿಯುವುದಕ್ಕೆ ಅನೇಕ ವೇಳೆ ಅಭ್ಯಾಸ ಇರಬೇಕು. ಮುಖ್ಯವಾಗಿ ಇದು ಹಾಡುವ ಕೇಳುವ ಕೃತಿ, ಬಲ್ಲವರು ಹಾಡಿ ಸಹೃದಯರು ಕೇಳಿ ಅರ್ಥವಾಗುವ ಕವಿತೆ. ವಿದ್ಯಾವಂತರೆನ್ನುವ ನಾವು ಈ ಕವಿತೆಗೆ ಬಹುವೇಳೆ ಬಲ್ಲವರೂ ಅಲ್ಲ, ಸಹೃದಯರೂ ಅಲ್ಲ' –ಎಂಬ ಮಾಸ್ತಿಯವರ ಮಾತು ಎಲ್ಲ ರೀತಿಯಿಂದಲೂ ಅರ್ಥಪೂರ್ಣವಾದುದಾಗಿದೆ, ಮೆಚ್ಚುವಂತಹುದಾಗಿದೆ.

ಕಠಿಣಪದಗಳ ಅರ್ಥ

ನೆನೆ – to remember
ಜೀರಿಗೆ – cumin seeds
ತೌರುಬಣ್ಣ - a saree gifted by maternal home
ಎಮ್ಮೆ – buffalo
ತಿಟ್ಟು – elevated place, mound
ಉಣ್ಣು – to eat
ಹೊಳೆದಂಡೆ – river bank
ಕರಕಿ – grass
ಕುಡಿ – ಚಿಗುರು, twig, a sprout
ಹಾಂಗ – ಹಾಗೆ, like that
ಮಾಸು – to get soiled, to get faded, dirty
ಮಡಿ – cleanliness
ಸುರಿ – to pour
ಮಲ್ಲಿಗೆ – jasmine flower

ದೊರೆ – ರಾಜ, ಅರಸ, king

ಗೊನೆ – bunch (banana)

ಹಚ್ಚಡ - ಬಟ್ಟೆ, bed sheet

ಅಚ್ಚ - fresh

ಬಿಚ್ಚು – to open

ಒಗೆ – ಎಸೆ, ಎರಚು, to throw

ಮಡದಿ – ಹೆಂಡತಿ, ಪತ್ನಿ, wife

ಸುಳಿವು – indication, clue, hint

ಹಡಿ – ಹೆರು, to give birth

ಮುಗಿಲು – ಮೋಡ, cloud

ಮದನಾರಿ - a girl in the bloom of youth, enchanting woman

ಖುಷಿ – delight

ಕಸಗೊಳ್ಳು – ಕಿತ್ತುಕೊಳ್ಳು, to snatch, to grab

ಬಾಯಿಬಡಿ – beating ones mouth in frastrated grief or in anguish.

ಬಾಳ – ಬಹಳ, much, many

ಸುಣ್ಣ – lime

ಒಲೆ – earthen oven

ಬಡಿಸು – to serve

ಕಣ್ಣು ಚಿವುಟು - to wink

ಅನ್ನಿಗ – outsider

ಚೆಲುವೆ – beautiful girl/woman

ಚಿಂತಾಕು – a necklace with the design of tamarind leaf

ಚಿಪ್ಪು – coconut shell

ಬಳಿ – to smear, to clean

ಕಿಡಿಗೇಡಿ – mischief monger, trouble maker.

ಅಭ್ಯಾಸಗಳು

I. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಹಬ್ಬಡ, ಕಿಡಿಗೇಡಿಗಳು, ಒಲೆ, ತಂಗಳು, ಚಿವುಟು, ಕುಡಿ, ಒಲ್ಲೆ, ತೊಟ್ಟಿಲು, ರಸಬಳ್ಳಿ)

ಅ. ಕೆಲವು ಹೆಣ್ಣುಮಕ್ಕಳು ತಲೆಯ ಮೇಲೆ ....ಹೊತ್ತುಕೊಂಡು ಹೋಗುತ್ತಿದ್ದುದನ್ನು ನಾನು ನೋಡಿದೆ.

ಆ. ಗೌರಮ್ಮನವರು ತಮ್ಮಕಾಲಿಗೆ ನಮಸ್ಕರಿಸಿದ ಆದಿತ್ಯನಿಗೆ ನಿಮ್ಮ ವಂಶದ .... ಬೆಳೆಯಲಿ ಎಂದು ಆಶೀರ್ವದಿಸಿದರು.

ಇ. ಹಬ್ಬಲಿ ಅವರ ....ಎಂದರೆ ಏನು?

ಈ. ರವಿ ಬೆಳಿಗ್ಗೆ ಎದ್ದು ....ಉಂಡು ಹೊಲಕ್ಕೆ ಹೋಗುತ್ತಾನೆ.

ಕ. ಹೊದಿಕೆಯನ್ನು ....ಎಂದೂ ಕರೆಯುತ್ತಾರೆ.

ಗ. ಕರ್ನಾಟಕದ ದಕ್ಷಿಣಭಾಗದವರು `ಕಣ್ಣು ಮಿಟಕಿಸು' ಎಂದರೆ ಉತ್ತರಕರ್ನಾಟಕದವರು ಕಣ್ಣು ....ಎನ್ನುತ್ತಾರೆ.

ಚ. ನನಗೆ ಹುಡುಗಿ ಇಷ್ಟ ಇಲ್ಲ. ನಾನು ಈ ಮದುವೆ ....

ಜ. ಬಂದ್‌ಗಳು ನಡೆದಾಗ ....ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿಮಾಡುತ್ತಾರೆ.

ಟ. ಅಡಿಗೆ ಮಾಡಲು ನನಗೆ ಒಂದು ಹೊಸ .... ಬೇಕು.

II. ಕೆಳಕಂಡವುಗಳ ಶಿಷ್ಟರೂಪವನ್ನು ಬರೆಯಿರಿ

ಅ. ನೋಡ್ಯಾಳ	ಚ. ಕುಡಿಹಾಂಗ
ಆ. ಸುರಿದಾವ	ಜ. ತಂದೀಯ
ಇ. ಮುಡಿನಾರೆ	ಟ. ಒಲಿಮುಂದೆ
ಈ. ನೆನೆದಾರೆ	ಡ. ಪದರಾಗ
ಕ. ಹಬ್ಬೋಗು	ತ. ಅಂಗಳದಿ
ಗ. ಬಾಳ	ದ. ಮನೆಯಾಗೆ

III. ಕೆಳಕಂಡವುಗಳ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ

ಅ. ತಂಗೆವ್ವ ತೌರೂರ ತಿಟ್ಹತ್ತಿ ತಿರುಗಿ ನೋಡ್ಯಾಳ

ಆ. ಒಬ್ಬಳೆ ಕುಯ್ದು ಮುಡಿನಾರೆ ಮಲ್ಲೀಗಿ

ಇ. ಗಂಗಾದೇವಿ ನನ್ನ ಹಡೆದವ್ವ ನೆನೆದಾರೆ
ಮಾಸೀದ ತಲೆಯೂ ಮಡಿಯಾಯ್ತು

ಈ. ಅನ್ನಿಗರ ಮಗಳು ಅತಿಚೆಲುವೆ ಮಾಡಿಕೊಂಡು
ನಿನ್ನೂರ ಮೇಲೆ ಬರುವೇನ

ಕ. ದೊರೆ ನನ್ನ ತಮ್ಮ ಬರುವಾಗ ಯಾಲಕ್ಕಿ
ಗೊನೆಬಾಗಿ ಹಾಲ ಸುರಿದಾವ

ಗ. ಮುಗಿಲಿಗೆ ಬಾಯಿ ಬಡಿದಾಳ

IV. ಕೆಳಕಂಡ ಪದ್ಯದಲ್ಲಿ ಗಂಡಹೆಂಡಿರ ನಡುವಿನ ಪ್ರೇಮ ಅಭಿವ್ಯಕ್ತವಾಗಿರುವ ರೀತಿಯನ್ನು ವಿವರಿಸಿ

ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ
ಬಿಚ್ಚಿ ನನ್ನಮೇಲೆ ಒಗೆವಂಥ ರಾಯರನ
ಬಿಟ್ಟ್ಯಾಂಗೆ ಬರಲಿ ಹಡೆದವ್ವ

V. ಕೆಳಕಂಡ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ತೌರೂರು	ಗ. ಸುಳಿವು
ಆ. ರಸಬಳ್ಳಿ	ಚ. ಹಡಿ
ಇ. ಕಿಡಿಗೇಡಿ	ಜ. ಕಸಗೊಳ್ಳು
ಈ. ಮುಡಿನಾರೆ	ಟ. ಕಣ್ಣುಚಿವುಟು
ಕ. ಮಡಿಯಾಗು	ಡ. ಅಂಗಳ

VI. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಜನಪದರು ಬೆಳಗಾಗ ಎದ್ದು ಯಾರನ್ನು ನೆನೆಯಲು ಇಷ್ಟಪಡುತ್ತಾರೆ?

ಆ. ತೊಟ್ಟಿಲು ಹೊತ್ತು, ತೌರುಬಣ್ಣ ಉಟ್ಟು ತಂಗೆವ್ವ ತಿಟ್ಟಹತ್ತಿ ತಿರುಗಿ ನೋಡಿದಳು ಎಂಬಲ್ಲಿ ಅಡಕವಾಗಿರುವ ಧ್ವನಿ ಏನು?

ಇ. ಹೆಣ್ಣು ಮಕ್ಕಳಿಗೆ ತೌರಿನ ಬಗ್ಗೆ ಇರುವ ಮಮಕಾರ ನೀವು ಓದಿದ ಜನಪದ ಗೀತೆಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ವಿವರಿಸಿ?

ಈ. ಜನಪದ ಕವಿ ಚಿತ್ರಿಸಿರುವ ಅಣ್ಣನ ಹೆಂಡತಿಯನ್ನು ಕುರಿತು ಬರೆಯಿರಿ.

ಕ. ತಂಗಿ ಅಣ್ಣನ ಮನೆಗೆ ಹೆಣ್ಣು ಬೇಡಲು ಹೋದ ಸನ್ನಿವೇಶವನ್ನು ಚಿತ್ರಿಸಿ.

ಗ. ಗ್ರಾಮೀಣ ಪರಿಸರದ ಉಡಾಳ ಹುಡುಗರನ್ನು ಹುಡುಗಿಯೊಬ್ಬಳು ಛೇಡಿಸಿದ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.

VII. ನಿಮ್ಮ ಭಾಷೆಯಲ್ಲಿನ ಜನಪದ ಗೀತೆಗಳ ಸ್ವಾರಸ್ಯವನ್ನು ವಿವರಿಸಿ

VIII. ಕನ್ನಡಕ್ಕೆ ಅನುವಾದಿಸಿ

Long before people could read and write, they told stories. A number of these stories have been handed down through the ages. We call them folk tales.

India was probably the original home of folk tales. From here they have travelled to other lands. Often, these stories underwent changes in many ways in their new homes. You remember we read some stories from Arabian Nights. Some people think that many of these stories came originally from India.

The ancient Indian collection of folk tales, called the 'Panchatantra' contains the world's oldest folk stories. They were collected and put in their present form over fifteen hundred years ago, but no one knows when each of them was first told.

There are different kinds of folk tales. Some are legends, some are myths and some are fables. Legends are stories about famous heroes and their great deeds. These are partly historical and partly imaginary. Myths are imaginary stories about the wonders of nature, such as rivers, rain, thunder and lightning, light and darkness, echoes and reflections. Then there are fables. A fable is a story that teaches moral.

13. ಕರ್ನಾಟಕ

ಕರ್ನಾಟಕ ತನ್ನ ವಿಸ್ತೀರ್ಣ ಮತ್ತು ಜನಸಂಖ್ಯೆಯ ಪ್ರಮಾಣದಿಂದಾಗಿ ಭಾರತದ ಎಂಟನೆಯ ದೊಡ್ಡ ರಾಜ್ಯವೆಂದು ಪರಿಗಣಿಸಲ್ಪಟ್ಟಿದೆ. `ಕರ್ನಾಟಕ' ಎಂಬ ಹೆಸರನ್ನು ಬಹಳ ವರ್ಷಗಳವರೆಗೆ ಕಳೆದುಕೊಂಡು ಮೈಸೂರು, ವಿಶಾಲಮೈಸೂರು ಎಂದು ಕರೆಸಿಕೊಂಡಿದ್ದ ಈ ರಾಜ್ಯ ನವೆಂಬರ್ 1, 1973 ರಂದು ಕರ್ನಾಟಕ ಎಂಬ ಅಭಿಧಾನವನ್ನು ಮರಳಿ ಪಡೆದುಕೊಂಡಿತು.

`ಕರ್ನಾಟಕ' ಎಂಬುದು ಈ ನಾಡಿನ ಹೆಸರನ್ನೂ `ಕನ್ನಡ' ಎಂಬುದು ಈ ನಾಡಿನ ಜನರು ಆಡುವ ಭಾಷೆಯನ್ನೂ ಸೂಚಿಸುತ್ತದೆ. `ಕರ್ನಾಟಕ' ಎಂದರೆ `ಎತ್ತರದನಾಡು' ಎಂದು ಕೆಲವು ವಿದ್ವಾಂಸರೂ ಇನ್ನು ಕೆಲವು ವಿದ್ವಾಂಸರು `ಕರಿಯಮಣ್ಣಿನ ನಾಡು' ಎಂದೂ ಅರ್ಥೈಸಿರುತ್ತಾರೆ. ಉತ್ತರ ಮತ್ತು ಮಧ್ಯ ಕರ್ನಾಟಕಗಳು ಕರಿಯ ಎರೆಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿರುವುದರಿಂದ ಎರಡನೆಯ ಅರ್ಥ ಬಹುಜನರ ಮನ್ನಣೆಯನ್ನು ಪಡೆದಿರುತ್ತದೆ.

ಕರ್ನಾಟಕವು ಪೂರ್ವಪಶ್ಚಿಮವಾಗಿ 400 ಕಿ.ಮೀ, ಉತ್ತರ ದಕ್ಷಿಣವಾಗಿ 770 ಕಿ.ಮೀ ವಿಸ್ತಾರವನ್ನು ಹೊಂದಿದೆ. ವಾಯವ್ಯ ಮತ್ತು ಉತ್ತರಭಾಗಗಳಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರಪ್ರದೇಶ, ಆಗ್ನೇಯ ಮತ್ತು ದಕ್ಷಿಣಗಳಲ್ಲಿ ತಮಿಳುನಾಡು, ನೈರುತ್ಯದಲ್ಲಿ ಕೇರಳ ಮತ್ತು ಪಶ್ಚಿಮದಲ್ಲಿ ಅರಬ್ಬೀಸಮುದ್ರವನ್ನು ಮೇರೆಯಾಗಿ ಹೊಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯೂ ಸೇರಿದಂತೆ 27 ಜಿಲ್ಲೆಗಳನ್ನೊಳಗೊಂಡಿದೆ. 1991ರ ಜನಗಣತಿಯ ಪ್ರಕಾರ ಈ ರಾಜ್ಯದ ಜನಸಂಖ್ಯೆ 4.5ಕೋಟಿ.

ಇಲ್ಲಿನ ಭೂ ಪ್ರದೇಶ ವೈವಿಧ್ಯಮಯವಾಗಿದ್ದು ದಟ್ಟವಾದ ಅರಣ್ಯಗಳಿಂದ ಕೂಡಿದ ಮಲೆನಾಡು, ವಿಶಾಲವಾಗಿ ಹರಡಿರುವ ಬಯಲುಸೀಮೆ ಮತ್ತು ಸಮುದ್ರದ

ಅಲೆಗಳು ಬಂದು ಅಪ್ಪಳಿಸುವ ಕರಾವಳಿ ಎಂದು ಮೂರುಭಾಗಗಳಾಗಿ ವರ್ಗೀಕೃತವಾಗಿದೆ. ಪಶ್ಚಿಮಘಟ್ಟಗಳ ಪೂರ್ವಭಾಗದಲ್ಲಿನ ಘಟ್ಟಕ್ಕೆ ಹೊಂದಿಕೊಂಡಂತಿರುವ ಅರಣ್ಯಪ್ರದೇಶವನ್ನು ಮಲೆನಾಡೆಂದೂ ತುಂಗಭದ್ರೆಯ ಉತ್ತರ ಮತ್ತು ದಕ್ಷಿಣಕ್ಕಿರುವ ಮೈದಾನ ಪ್ರದೇಶವನ್ನು ಬಯಲುಸೀಮೆ ಎಂದೂ ಪಶ್ಚಿಮಘಟ್ಟ ಮತ್ತು ಅರಬ್ಬೀಸಮುದ್ರದ ನಡುವಿನ ಪ್ರದೇಶವನ್ನು ಕರಾವಳಿ ಎಂದೂ ವರ್ಗೀಕರಿಸಲಾಗಿದೆ.

ಪ್ರಶಾಂತವಾಗಿ ಹರಿಯುವ ನದಿಗಳು, ಧುಮ್ಮಿಕ್ಕುವ ಜಲಪಾತಗಳ ಚೆಲುವಿನಿಂದ ಕಂಗೊಳಿಸುವ ಕರ್ನಾಟಕದ ಬಹುಮುಖ್ಯ ನದಿಗಳೆಂದರೆ ಕಾವೇರಿ, ತುಂಗಭದ್ರಾ, ಕೃಷ್ಣ ಮತ್ತು ಶರಾವತಿ. ಈ ನದಿಗಳ ನೀರನ್ನು ಕೃಷಿ ಹಾಗೂ ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲಾಗುತ್ತಿದೆ. ಕಾವೇರಿನದಿಗೆ ಅಡ್ಡಲಾಗಿ ಮೈಸೂರಿನ ಕನ್ನಂಬಾಡಿ ಎಂಬ ಸ್ಥಳದಲ್ಲಿ ಅಣೆಕಟ್ಟೆಯನ್ನು ಕಟ್ಟಲಾಗಿದೆ. ಅದನ್ನು `ಕೃಷ್ಣರಾಜಸಾಗರ' ಎಂದೂ ಕರೆಯುತ್ತಾರೆ. ಜಗದ್ವಿಖ್ಯಾತ ಜೋಗದ ಜಲಪಾತವೂ ಸೇರಿದಂತೆ ನೂರಾರು ಜಲಪಾತಗಳು ಚೆಲುವಕನ್ನಡನಾಡಿನ ಚೆಲುವನ್ನು ಮತ್ತಷ್ಟು ಹೆಚ್ಚಿಸಿವೆ.

ವಿಶೇಷ ಮಹತ್ವವನ್ನು ಪಡೆದಿರುವ ಕರ್ನಾಟಕದ ಅರಣ್ಯಗಳನ್ನು ನಿತ್ಯಹರಿದ್ವರ್ಣದಕಾಡು, ಅಂಶಿಕ ನಿತ್ಯಹರಿದ್ವರ್ಣದಕಾಡು, ಬೇಸಿಗೆಯಲ್ಲಿ ಎಲೆ ಉದುರುವಕಾಡು, ಒಣಕಲುಕಾಡು ಮತ್ತು ಕುರುಚಲುಕಾಡು ಎಂದು ಐದು ವಿಧವಾಗಿ ವರ್ಗೀಕರಿಸಲಾಗಿದೆ. ಈ ಕಾಡುಗಳಲ್ಲಿ ಬೀಟೆ, ತೇಗ, ಹೊನ್ನೆ, ಮತ್ತಿ, ನಂದಿ, ಹಲಸು ಮತ್ತು ಶ್ರೀಗಂಧಗಳು ಹೇರಳವಾಗಿ ಬೆಳೆಯುತ್ತವೆ. ಈ ಅರಣ್ಯದಲ್ಲಿ ಹುಲಿ, ಚಿರತೆ, ಆನೆ, ಕಾಡಮ್ಮೆಗಳು ಹೆಚ್ಚು ಪ್ರಮಾಣದಲ್ಲಿ ಇವೆ. ಜೊತೆಗೆ ಸಿಂಗಳೀಕ, ಮುಸುವ, ಲಂಗೂರ್ ಜಾತಿಯ ವಾನರಗಳು, ಕಿರುಬ, ತೋಳ, ಕರಡಿ, ಜಿಂಕೆ, ಕಾಡುಹಂದಿ, ನರಿ ಮುಂತಾದ ಪ್ರಾಣಿಗಳಿಂದ ಕೂಡಿದ ವನ್ಯಸಂಪತ್ತು ವೈವಿಧ್ಯ-ಮಯವಾಗಿದೆ.

ಕರ್ನಾಟಕ ಅರಣ್ಯಸಂಪತ್ತಿನಲ್ಲಿ ಎಷ್ಟು ಸಮೃದ್ಧವೋ ಖನಿಜ ಸಂಪತ್ತಿನಲ್ಲೂ ಅಷ್ಟೇ ಶ್ರೀಮಂತವಾಗಿದೆ. ಚಿನ್ನ, ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಕ್ರೋಮೈಟ್, ಬಾಕ್ಸೈಟ್ ಮುಂತಾದ ಖನಿಜಗಳು ಹೇರಳವಾಗಿ ದೊರೆಯುತ್ತವೆ.

ಕರ್ನಾಟಕ ಕೃಷಿ ಪ್ರಧಾನ ರಾಜ್ಯ. ರಾಗಿ, ಬತ್ತ, ಜೋಳ, ಗೋದಿ, ದ್ವಿದಳಧಾನ್ಯಗಳು, ಎಣ್ಣೆಕಾಳುಗಳು, ಹತ್ತಿ, ಕಬ್ಬು ಇಲ್ಲಿನ ಪ್ರಧಾನ ಬೆಳೆಗಳು. ಕಾಫಿ, ಅಡಿಕೆ, ಹೊಗೇಸೊಪ್ಪು, ಏಲಕ್ಕಿ, ಮೆಣಸು, ರಬ್ಬರ್ ಮತ್ತು ತೆಂಗನ್ನೂ ಸಹ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಇಲ್ಲಿನ ಬ್ಯಾಡಗಿಮೆಣಸಿನಕಾಯಿಗೆ ದೇಶಾದ್ಯಂತ ಒಳ್ಳೆಯ ಮಾರುಕಟ್ಟೆ ಇದೆ. ತೋಟಗಾರಿಕೆ ಉತ್ಪನ್ನಗಳಾದ ಬಾಳೆ, ಮಾವು, ಕಿತ್ತಳೆ, ದ್ರಾಕ್ಷಿ, ದಾಳಿಂಬೆ, ಸೀಬೆ, ಸಪೋಟ ಮತ್ತು ಪರಂಗಿ ಹಣ್ಣುಗಳ ಬೆಳೆಯಲ್ಲೂ ಕರ್ನಾಟಕದ ಸಾಧನೆ ತೃಪ್ತಿಕರವಾಗಿದೆ. ಪುಷ್ಪಕೃಷಿಯಲ್ಲೂ ಕರ್ನಾಟಕ ಹಿಂದೆ ಬಿದ್ದಿಲ್ಲ. ಗುಲಾಬಿ, ಮಲ್ಲಿಗೆ, ಸುಗಂಧರಾಜ, ಕನಕಾಂಬರ, ಸೇವಂತಿಗೆ, ಗ್ಲಾಡಿಯೋಲಸ್ ಮುಂತಾದ ಹೂವುಗಳಿಗೆ ವಿಶ್ವಮಾರುಕಟ್ಟೆ ಇದೆ.

ಅಗಾಧವಾದ ಖನಿಜಸಂಪತ್ತಿನಿಂದ ಸಮೃದ್ಧವಾದ ಕರ್ನಾಟಕ ಕೈಗಾರಿಕಾ ಕ್ಷೇತ್ರದಲ್ಲೂ ಮುನ್ನಡೆಯಲ್ಲಿದೆ. 19 ನೇ ಶತಮಾನದಿಂದಲೇ ಕರ್ನಾಟಕದಲ್ಲಿ ಕೈಗಾರಿಕೆಗಳು ವ್ಯವಸ್ಥಿತವಾಗಿ ಹುಟ್ಟಿಕೊಂಡವು. ಕಬ್ಬಿಣ ಮತ್ತು ಉಕ್ಕು, ಸಕ್ಕರೆ, ಸಿಮೆಂಟ್, ವಿದ್ಯುತ್, ಗಾಜು, ಪೋರ್ಸಲೀನ್ ಮುಂತಾದ ಅಧಿಕ ಪ್ರಮಾಣದ ಕೈಗಾರಿಕೆಗಳು ಸ್ಥಾಪಿತವಾದವು. ಸಾರ್ವಜನಿಕ ವಲಯದ `ಹಿಂದೂಸ್ಥಾನ್ ಏರೋನಾಟಿಕ್ಸ್ ಲಿ', `ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್', `ಭಾರತ್ ಎಲೆಕ್ಟ್ರಿಕಲ್ಸ್ ಲಿ', `ಹಿಂದೂಸ್ಥಾನ್ ಮೆಷೀನ್ ಟೂಲ್ಸ್'ಗಳು ಸ್ಥಾಪನೆಯಾಗಿ ಕರ್ನಾಟಕ ಅಂತಾರಾಷ್ಟ್ರೀಯ ಮನ್ನಣೆ ಪಡೆಯುವಂತಾಯಿತು. ಇವುಗಳೇ ಅಲ್ಲದೆ ಅಲ್ಯುಮೀನಿಯಂ, ಮ್ಯಾಂಗನೀಸ್, ಬಟ್ಟೆ, ಸೋಪು, ಗಂಧದಎಣ್ಣೆ ಕಾರ್ಖಾನೆಗಳೂ ಕಾರ್ಯ ನಿರ್ವಹಿಸಲಾರಂಭಿಸಿದವು. ವಿದ್ಯುತ್‌ಉಪಕರಣಗಳ ತಯಾರಿಕೆಯಲ್ಲಿ ಎನ್.ಜಿ.ಇ.ಎಫ್., ಜಿ.ಇ.ಎನ್ ಮತ್ತು ರೆಮ್ಕೋ ಕಾರ್ಖಾನೆಗಳು ನಮ್ಮ ನಾಡಿನ

ಪ್ರಮುಖ ಕಾರ್ಖಾನೆಗಳಾಗಿವೆ. ಮತ್ತೊಂದು ಹೆಸರಿಸಲೇಬೇಕಾದ ಉದ್ಯಮವೆಂದರೆ ರೇಷ್ಮೆ ಉದ್ಯಮ. ಇದರಲ್ಲಿ ಕರ್ನಾಟಕದ ಪಾಲು ಶೇ.85 ರಷ್ಟಿರುವುದು ಹೆಮ್ಮೆಯ ವಿಷಯ.ಕಂಪ್ಯೂಟರ್ ಸಾಫ್ಟ್‌ವೇರ್, ಮಾಹಿತಿತಂತ್ರಜ್ಞಾನ ಕ್ಷೇತ್ರದಲ್ಲೂ ಕರ್ನಾಟಕ ಮುನ್ನಡೆಯಲ್ಲಿದೆ. ಜೊತೆಗೆ ಹಲವಾರು ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲೂ ಪ್ರಗತಿಯನ್ನು ಸಾಧಿಸಿದೆ.

ಕರ್ನಾಟಕಕ್ಕೆ ತುಂಬಾ ಹಳೆಯದಾದ ಸಾಂಸ್ಕೃತಿಕ ಪರಂಪರೆ ಇದೆ. ರಾಜರು, ಕವಿಗಳು, ಸಮಾಜ ಸುಧಾರಕರು, ಧಾರ್ಮಿಕ ಮುಖಂಡರು ಕನ್ನಡ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದಿದ್ದಾರೆ. ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಗಂಗ, ಹೊಯ್ಸಳ, ವಿಜಯನಗರದ ಅರಸರು, ಮೈಸೂರಿನ ಒಡೆಯರು ಈ ರಾಜ್ಯವನ್ನು ಆಳಿದ್ದಾರೆ. ಕದಂಬ ಮಯೂರವರ್ಮ, ಚಾಲುಕ್ಯ ಇಮ್ಮಡಿಪುಲಿಕೇಶಿ, ರಾಷ್ಟ್ರಕೂಟ ಅಮೋಘವರ್ಷ ನೃಪತುಂಗ, ಹೊಯ್ಸಳ ವಿಷ್ಣುವರ್ಧನ, ತುಳುವ ಕೃಷ್ಣದೇವರಾಯ, ಚಿಕ್ಕದೇವರಾಜ ಮತ್ತು ಕೃಷ್ಣರಾಜ ಒಡೆಯರ್ ಮುಂತಾದವರು ಸಾಹಿತ್ಯ ಸಂಸ್ಕೃತಿಗಳನ್ನು ಅಜರಾಮರಗೊಳಿಸಿದ್ದಾರೆ. ಇಡೀ ದಕ್ಷಿಣ ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ದಕ್ಷಿಣಪಥಾಧೀಶ್ವರನೆನಿಸಿಕೊಂಡಿದ್ದ ಸತ್ಯಾಶ್ರಯ ಪುಲಿಕೇಶಿ. ನೃಪತುಂಗ ಸಾಹಿತ್ಯಕ್ಕೆ ನೀಡಿದ ಕಾಣಿಕೆ ಅಪಾರ. ಕರ್ನಾಟಕ ವಾಸ್ತುಶಿಲ್ಪ ಮತ್ತು ಶಿಲ್ಪ ಪರಿಪೂರ್ಣತೆಯ ಮುಗಿಲು ಮುಟ್ಟಲು ಕಾರಣನಾದವನು ಹೊಯ್ಸಳ ವಿಷ್ಣುವರ್ಧನ. ಹೊಯ್ಸಳಶೈಲಿ ಎಂದೇ ಕರೆಯಬಹುದಾದ ಒಂದು ಪರಂಪರೆಯನ್ನೇ ರೂಪಿಸಿದವನು ಇವನು. ಕೃಷ್ಣದೇವರಾಯನ ಕಾಲದಲ್ಲಿ ಚಿನ್ನ, ಮುತ್ತು, ರತ್ನ, ಮಾಣಿಕ್ಯಗಳನ್ನು ಬೀದಿಯಲ್ಲಿ ಅಳೆದು ಮಾರುತ್ತಿದ್ದರಂತೆ. ಮೈಸೂರಿನ ಒಡೆಯರು ಕಲಾಪೋಷಕರು, ಪ್ರಜೆಗಳ ಹಿತಾಸಕ್ತಿಗಳನ್ನು ಕಾಪಾಡಿದವರು.

ಕರ್ನಾಟಕ ಲಲಿತಕಲೆಗಳಿಗೆ ಪ್ರಸಿದ್ಧವಾದುದು. ವಾಸ್ತುಶಿಲ್ಪದಲ್ಲಿ `ಕರ್ನಾಟಕ ಶೈಲಿ' ಎಂಬ ಹೊಸ ಶೈಲಿಯೊಂದನ್ನು ಸೃಷ್ಟಿಸಿದ ತೌರುನಾಡು. ಐಹೊಳೆ, ಪಟ್ಟದಕಲ್ಲು, ಬಾದಾಮಿ, ಹಳೇಬೀಡು, ಬೇಲೂರು, ಹಂಪೆಯಲ್ಲಿರುವ

ದೇವಸ್ಥಾನಗಳು ಈ ಶೈಲಿಗೆ ಮಾದರಿಗಳು. ಬಿಜಾಪುರ, ಗುಲ್ಬರ್ಗ, ರಾಯಚೂರು, ಶ್ರೀರಂಗಪಟ್ಟಣದ ಗೋಲಗುಮ್ಮಟಗಳು, ದರ್ಗಾಗಳು ಮುಸ್ಲಿಮರು ವಾಸ್ತುಶಿಲ್ಪಕ್ಕೆ ಕೊಟ್ಟ ಕಾಣಿಕೆ. ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರನ ಏಕಶಿಲಾವಿಗ್ರಹ ಅದ್ಭುತವಾದುದು.

ಕರ್ನಾಟಕ ನೈಸರ್ಗಿಕ ಮತ್ತು ಸಾಂಸ್ಕೃತಿಕ ಸಂಪತ್ತಿನಿಂದ, ಪ್ರಸಿದ್ಧ ಕವಿಗಳಿಂದ, ಅದ್ಭುತ ವಾಸ್ತುಶಿಲ್ಪದಿಂದ ಕೂಡಿದೆ. ಜೊತೆಗೆ ಆಧುನಿಕ ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿ ಇಡೀ ದೇಶಕ್ಕೆ ಮೇಲ್ಪಂಕ್ತಿಯಾಗಿದೆ. ಆಧುನಿಕ ಭಾರತದ ಮುಂದುವರಿದ ರಾಜ್ಯಗಳಲ್ಲಿ ಕರ್ನಾಟಕ ಪ್ರಮುಖವಾದದ್ದು.

ಕಠಿಣಪದಗಳ ಅರ್ಥ

ಪರಿಗಣಿಸಲ್ಪಡು – to be considered
ಎರೆಮಣ್ಣು – black soil
ಮೇರೆ – boundary
ಜನಗಣತಿ – census
ಮಲೆನಾಡು – hilly region
ಬಯಲುಸೀಮೆ – plains
ಅಪ್ಪಳಿಸು – to hit hard
ಕರಾವಳಿ – costal area
ಪಶ್ಚಿಮಘಟ್ಟ – western ghat
ಜಗದ್ವಿಖ್ಯಾತ – world famous
ಚೆಲುವು – beauty
ನಿತ್ಯಹರಿದ್ವರ್ಣದಕಾಡು – tropical evergreen forest

ಆಂಶಿಕ – ನಿತ್ಯಹರಿದ್ವರ್ಣದಕಾಡು	-	semi evergreen forest
ಒಣಕಾಡು	–	tropical deciduous forest
ಕುರುಚಲುಕಾಡು	–	the thorn and shrub forest, scrub
ಬೀಟೆ	–	rose wood
ತೇಗ	–	teak
ಹೊನ್ನೆ	–	yellow teak
ಮತ್ತಿ	–	a valuable timber tree of the genus terminalia
ನಂದಿ	–	a timber tree, lagerstroemia parviflora Roxo.(Z)
ಹಲಸು	–	Jack tree
ಶ್ರೀಗಂಧ	–	sandle wood, sandle tree
ಚಿರತೆ	–	cheetah
ಕಾಡೆಮ್ಮೆ	–	bison
ಕಿರುಬ	–	leopard
ತೋಳ	–	wolf
ಕರಡಿ	–	bear
ಜಿಂಕೆ	–	deer
ಕಾಡುಹಂದಿ	–	wild pig, hog
ಖನಿಜ	–	mineral
ತಾಮ್ರ	–	copper
ಕೃಷಿ	–	ವ್ಯವಸಾಯ, agriculture
ಜೋಳ	–	jowar
ಗೋದಿ	–	wheat

ದ್ವಿದಳಧಾನ್ಯ	–	cereal
ಹತ್ತಿ	–	cotton
ಕಬ್ಬು	–	sugar cane
ಹೊಗೇಸೊಪ್ಪು	–	tobacco
ಏಲಕ್ಕಿ	–	cardamom
ಮೆಣಸು	–	pepper
ಮೆಣಸಿನಕಾಯಿ	–	chilli
ಮಾರುಕಟ್ಟೆ	–	market
ತೋಟಗಾರಿಕೆ	–	horticulture
ದಾಳಿಂಬೆ	–	pomegranate
ಪುಷ್ಪಕೃಷಿ	–	flory culture
ಗುಲಾಬಿ	–	rose
ಸುಗಂಧರಾಜ	–	tube rose
ಸೇವಂತಿಗೆ	–	crysanthemum
ಉಕ್ಕು	–	steel
ವಿದ್ಯುತ್	–	electricity
ಗಾಜು	–	glass
ಸಾರ್ವಜನಿಕ ವಲಯ	–	public sector
ಬಟ್ಟೆ	–	textile, cloth
ರೇಷ್ಮೆ	–	silk
ಪರಂಪರೆ	–	heritage
ಅಜರಾಮರಗೊಳಿಸು	–	to immortalize
ವಾಸ್ತುಶಿಲ್ಪ	–	architecture

ಪರಿಪೂರ್ಣತೆ	–	perfection
ಮುತ್ತು	–	pearl
ಮಾಣಿಕ್ಯ	-	ruby
ಅಳೆ	–	to measure
ಲಲಿತಕಲೆ	–	fine arts
ಗಣನೀಯ	-	remarkable
ಮೇಲ್ಪಂಕ್ತಿಯಾಗು	–	to be a model, example to be emulated

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದಗಳನ್ನು ಬದಲಾಯಿಸಿ ಬರೆಯಿರಿ

ಅ. ಮಾದರಿ: ನಿಸರ್ಗ – ನೈಸರ್ಗಿಕ

ಅ. ವಿವಾಹ –

ಆ. ವಿಚಾರ –

ಇ. ಸಿದ್ಧಾಂತ –

ಈ. ಇತಿಹಾಸ –

ಕ. ದೇಹ –

ಆ. ಮಾದರಿ: ಸಂಸ್ಕೃತಿ – ಸಾಂಸ್ಕೃತಿಕ

ಅ. ಕಲ್ಪನೆ –

ಆ. ಪ್ರಯೋಗ–

ಇ. ಸಂಸಾರ –

ಈ. ಸಂಕೇತ –

ಕ. ಚರಿತ್ರೆ –

ಗ. ಸಂದರ್ಭ –

II. ಬಿಡಿಸಿ ಬರೆಯಿರಿ

ಅ. ವೈವಿಧ್ಯಮಯವಾಗಿದ್ದು

ಆ. ಹಳೆಯದಾದ

ಇ. ಮಾರುತ್ತಿದ್ದರಂತೆ

ಈ. ವಚನಕಾರರು

ಕ. ಉಳಿಸಿಕೊಳ್ಳಲಾಗಿದೆ

ಗ. ಶೈಲಿಯೊಂದನ್ನು

III. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಕಾಣಿಕೆ, ಹೊಗೇಸೊಪ್ಪು, ವನ್ಯಸಂಪತ್ತು, ಕೃಷಿ, ಪಾಲು, ಕರಾವಳಿ)

ಅ. ಮಲೆನಾಡಿನ ಅರಣ್ಯಗಳಲ್ಲಿನ .... ಅಮೂಲ್ಯವಾದದ್ದು.

ಆ. ಭಾರತ .... ಪ್ರಧಾನ ದೇಶ.

ಇ. ನಿಮ್ಮ ತಾತನ ಆಸ್ತಿಯಲ್ಲಿ ನಿನ್ನ ....ಎಷ್ಟು?

ಈ. ಜಯಚಾಮರಾಜ ಒಡೆಯರ್ ಕರ್ನಾಟಕ ಸಂಗೀತಕ್ಕೆ ನೀಡಿದ .... ಅಪಾರ.

ಕ. ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ ಜಿಲ್ಲೆಗಳನ್ನು .... ಪ್ರದೇಶ ಎಂದು ಕರೆಯುತ್ತಾರೆ.

ಗ. .... ಜಗಿಯುವವರು ಬಾಯಿ ಕ್ಯಾನ್ಸರ್‌ಗೆ ತುತ್ತಾಗುವ ಸಂಭವ ಹೆಚ್ಚು.

IV. ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಖಾಲಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. 1 -11- 1973 ರಂದು ಕರ್ನಾಟಕ ಎಂಬ ಅಭಿಧಾನವನ್ನು .... ಪಡೆಯಿತು (ಮರಳು).

ಆ. ಕರ್ನಾಟಕಕ್ಕೆ ತುಂಬಾ ....ಸಾಂಸ್ಕೃತಿಕ ಪರಂಪರೆ ಇದೆ (ಹಳೆಯದು).

ಇ. ಕರ್ನಾಟಕ ನೈಸರ್ಗಿಕ ಮತ್ತು ಸಾಂಸ್ಕೃತಿಕ ....ಕೂಡಿದೆ (ಸಂಪತ್ತು).

ಈ. ಮೈಸೂರಿನ ಒಡೆಯರು ಕಲಾಪೋಷಕರು, ... ಹಿತಾಸಕ್ತಿಗಳನ್ನು ಕಾಪಾಡಿದವರು (ಪ್ರಜೆಗಳು).

ಕ. .... ನೀಡುವ ಅತ್ಯಂತ ಶ್ರೇಷ್ಠ ಪ್ರಶಸ್ತಿ ಜ್ಞಾನಪೀಠಪ್ರಶಸ್ತಿ (ಸಾಹಿತ್ಯ).

V. ಕೆಳಕಂಡ ವಾಕ್ಯಗಳನ್ನು ಪ್ರಶ್ನಾರ್ಥಕ ವಾಕ್ಯಗಳಾಗಿ ಪರಿವರ್ತಿಸಿ

ಅ. 1991ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಂಖ್ಯೆ 44,806,468.

ಆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನೊಳಗೊಂಡಂತೆ 27 ಜಿಲ್ಲೆಗಳನ್ನೊಳಗೊಂಡಿದೆ ಈ ರಾಜ್ಯ.

ಇ. ತುಂಗಭದ್ರೆಯ ಉತ್ತರ ಮತ್ತು ದಕ್ಷಿಣಕ್ಕಿರುವ ಮೈದಾನ ಪ್ರದೇಶವನ್ನು ಬಯಲುಸೀಮೆ ಎಂದು ಕರೆಯುತ್ತಾರೆ.

ಈ. `ಕರ್ನಾಟಕ' ಎಂಬುದು ಈ ನಾಡಿನ ಹೆಸರನ್ನೂ `ಕನ್ನಡ' ಎಂಬುದು ಈನಾಡಿನ ಜನರು ಆಡುವ ಭಾಷೆಯನ್ನೂ ಸೂಚಿಸುತ್ತದೆ.

ಕ. ಕರ್ನಾಟಕದ ಬಹುಮುಖ್ಯ ನದಿಗಳೆಂದರೆ ಕಾವೇರಿ, ತುಂಗಭದ್ರಾ, ಕೃಷ್ಣ ಮತ್ತು ಶರಾವತಿ.

VI. ಕೆಳಕಂಡ ಪದಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸಿ

ಅ. ಎಂಬುದು	ಕ. ದೇಶಾದ್ಯಂತ
ಆ. ಎಂದು	ಗ. ಮತ್ತೊಂದು
ಇ. ಮತ್ತಷ್ಟು	ಚ. ನೈಸರ್ಗಿಕ
ಈ. ಸಹ	ಜ. ನೂರಾರು

VII. ಪ್ರಶ್ನೆಗಳಿಗೆ ಉತ್ತರಿಸಿ

ಅ. ಕರ್ನಾಟಕದ ಮೇರೆಗಳಾವುವು?

ಆ. ಕರ್ನಾಟಕದ ಭೂಪ್ರದೇಶವನ್ನು ಎಷ್ಟು ಭಾಗವಾಗಿ ವಿಂಗಡಿಸಲಾಗಿದೆ?

ಇ. ಕರ್ನಾಟಕದ ಅರಣ್ಯಗಳಲ್ಲಿ ಎಷ್ಟು ಬಗೆ ಇದೆ? ಅವುಗಳನ್ನು ಹೆಸರಿಸಿ?

ಈ. ಕರ್ನಾಟಕದ ಮುಖ್ಯ ಬೆಳೆಗಳು ಯಾವುವು?

ಕ. ಕೈಗಾರಿಕಾ ಕ್ಷೇತ್ರದಲ್ಲಿ ಕರ್ನಾಟಕ ಯಾವ ರೀತಿ ಮುನ್ನಡೆ ಸಾಧಿಸಿದೆ

ಗ. ಕರ್ನಾಟಕವನ್ನು ಆಳಿದ ರಾಜಮನೆತನಗಳು ಯಾವುವು? ಅವುಗಳ ಕೊಡುಗೆ ಏನು?

VIII. ನಿಮ್ಮ ರಾಜ್ಯದ ಪರಿಚಯ ಮಾಡಿಕೊಡಿ

IX. ಕನ್ನಡಕ್ಕೆ ಭಾಷಾಂತರಿಸಿ

Bangalore is the capital of Karnataka. The huge Vidhana Soudha rises high above the western part of the city. It is one of the finest examples of modern Indian architecture. Bangalore is a city of parks. One can find all colours of the world in the bright flowers of Lal Bagh in September and October. The broad and neat roads add to the beauty of this city.

Mercara, the hilly district of Coorg, is another town of great natural beauty. We enjoy the winding road to the town and in March the famous harvest dance. The land here is very rich and one can see miles of Orange orchards, Coffee estates and Paddy fields.

Another worth seeing place in Karnataka is Sravanabelagola. There is a steep hill with stone steps. At the top, the gigantic statue of Gommateswara, 57 feet high. Not far from Sravanabelagola are two villages of Halebiid and Belur. The sculptures in these temples here attract visitors from all over the world.

Another important place in Karnataka is Bijapur. There, we see Gol Gumbaz, the famous tomb and the whispering gallery.

14. ಕುವೆಂಪು

`ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು' ಎಂದು ತನ್ಮಯರಾಗಿ ಹಾಡಿದ ಕುವೆಂಪು ಕನ್ನಡ ಸಾರಸ್ವತಲೋಕದ ಮನೆಮಾತು. ಕನ್ನಡದ ಗಡಿಯನ್ನು ದಾಟಿ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಕುವೆಂಪುರವರ ಪೂರ್ಣಹೆಸರು ಕುಪ್ಪಳಿ ವೆಂಕಟಪ್ಪಗೌಡ ಪುಟ್ಟಪ್ಪ. `ಕುವೆಂಪು' ಎಂಬುದು ಕಾವ್ಯನಾಮ. ನಿಸರ್ಗದೇವತೆಯ ತೂಗುತೊಟ್ಟಿಲಾದ ಕುಪ್ಪಳಿ ಕುವೆಂಪು ರವರ ತಂದೆ ವೆಂಕಟಪ್ಪಗೌಡರ ಊರು. ಹುಟ್ಟಿದ್ದು 1904ರ ಡಿಸೆಂಬರ್ 29 ರಂದು ತಾಯಿ ಸೀತಮ್ಮನವರ ತವರೂರಾದ ಹಿರೆಕೊಡಿಗೆಯಲ್ಲಿ. ಸಹ್ಯಾದ್ರಿಯ ಪಕ್ಷಿಸಂಕುಲ, ಪ್ರಾಣಿಸಮೂಹ, ಪುಷ್ಪರಾಜಿಗಳ ನಡುವೆ ಬನಗಳಲ್ಲಿ ಸಂಚರಿಸುತ್ತಲೇ ಬೆಳೆದವರು ಕುವೆಂಪು. ಕಾವ್ಯಕನ್ನಿಕೆ ಅವರ ಬೆನ್ನು ಹತ್ತಿದ್ದು ಇಲ್ಲಿಂದಲೇ.

ಕುವೆಂಪುರವರ ವಿದ್ಯಾಭ್ಯಾಸ ಪ್ರಾರಂಭವಾದದ್ದು ಐಗಳ ಮಠದಿಂದ. ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಮುಗಿಸಿದ ಕುವೆಂಪು ಮೈಸೂರಿನ ವೆಸ್ಲಿಯನ್ ಮಿಷನ್ ಪ್ರೌಢಶಾಲೆಯನ್ನು ಸೇರಿದರು. ಪ್ರೌಢಶಾಲೆಯಲ್ಲಿದ್ದಾಗಲೇ ಸಾಹಿತ್ಯದಲ್ಲಿ ಆಸಕ್ತಿ, ಪಾಶ್ಚಾತ್ಯಕವಿಗಳ ಕೃತಿಗಳ ಓದು ಪ್ರಾರಂಭವಾಗಿ ಅವರ ಒಳಗಣ್ಣು ವಿಶ್ವಸಾಹಿತ್ಯಲೋಕಕ್ಕೆ ತೆರೆದುಕೊಂಡಿತು. ಪ್ರೌಢಶಾಲಾ ಪಠ್ಯದಲ್ಲಿ ರಾಬಿನ್‌ಸನ್ ಕ್ರೂಸೋ ಕುರಿತ ಒಂದು ಪಾಠ–ಅದರಲ್ಲಿ ಮರಳಿನ ಮೇಲೆ ಮೂಡಿದ್ದ ಹೆಜ್ಜೆ ಗುರುತನ್ನು ವರ್ಣಿಸಿದ್ದ ರೀತಿ ಕುವೆಂಪುರವರ ಮನಸ್ಸಿನ ಮೇಲೆ ವಿಚಿತ್ರವಾದ ಪರಿಣಾಮ ಬೀರಿತು. ಒಂದು ಬಗೆಯ ಅತೀಂದ್ರಿಯ ಅನುಭವ ನೀಡಿತು. ಆ ಹೆಜ್ಜೆಯ ಗುರುತುಗಳು ಅವರನ್ನು ವಿಸ್ಮಯ ಲೋಕವೊಂದಕ್ಕೆ ಕರೆಯಿತು. ಆ ಕರೆಗೆ ಓಗೊಟ್ಟು ನಡೆಯತೊಡಗಿದ ಕುವೆಂಪು ಮತ್ತೆಂದೂ ಹಿಂದಿರುಗಿ ನೋಡಲಿಲ್ಲ.

ಪ್ರೌಢಶಾಲೆಯಲ್ಲಿದ್ದಾಗಲೇ ಇವರ ಕವಿತಾಶಕ್ತಿ ಪ್ರಕಟ. ಆದರೆ ಕವಿತೆ ಬರೆದದ್ದು ಕನ್ನಡದಲ್ಲಲ್ಲ, ಇಂಗ್ಲೀಷಿನಲ್ಲಿ. ಶ್ರೇಷ್ಠ ಇಂಗ್ಲೀಷ್ ಕವನಗಳನ್ನು ಅನುಕರಿಸಿ ಕವನಗಳನ್ನು ರಚಿಸಿ `ಬಿಗಿನರ್ಸ್ ಮ್ಯೂಸ್' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಇವರ ಕವನಗಳನ್ನು ಓದಿ ಮೆಚ್ಚಿದ ಜೇಮ್ಸ್ ಕಸಿನ್ ಎಂಬ ಐರಿಷ್ ಕವಿ ಕನ್ನಡದಲ್ಲೇ ಬರೆಯಬೇಕೆಂದು ಪ್ರೇರೇಪಿಸಿದರು. ಅಲ್ಲಿಂದ ಇವರ ಬಾಳು ಕನ್ನಡಕ್ಕೇ ಮುಡಿಪು.

ಕಾಲೇಜು ವ್ಯಾಸಂಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ. ಆ ವೇಳೆಯಲ್ಲೇ ಸ್ವಾಮಿ ಸಿದ್ದೇಶ್ವರಾನಂದರ ಜೊತೆ ಒಡನಾಟ, ರಾಮಕೃಷ್ಣಾಶ್ರಮದ ಸಖ್ಯ. ಅಲ್ಲೇ ವಾಸ್ತವ್ಯ. ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಗಾಂಧಿ-ಇವರ ವಿಚಾರಗಳಿಗೆ ಬೆರಗಾದ ಮನಸ್ಸು ಅವ್ಯಕ್ತ ತುಡಿತಕ್ಕೆ ಒಳಗಾಯಿತು. ಗುರುಗಳಾದ ಬಿ.ಎಂ.ಶ್ರೀಕಂಠಯ್ಯ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿಗಳ ಪ್ರೀತಿವಾತ್ಸಲ್ಯ, ಮಾರ್ಗದರ್ಶನದಿಂದ ಇವರ ಕನ್ನಡಾಭಿಮಾನ ಮತ್ತಷ್ಟು ದೃಢ. ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗಿನ ಇವರ ಸಾಹಿತ್ಯ ಸೃಷ್ಟಿ ಅದ್ಭುತ. ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಸಂಪದ್ಭರಿತಗೊಳಿಸಿದ ಇವರ ಸಾಧನೆ ಅದ್ವಿತೀಯ. ಅಮಲನಕತೆಯಿಂದ ಹಿಡಿದು ಶ್ರೀರಾಮಾಯಣದರ್ಶನಂ ವರೆಗಿನ ಇವರ ಸಾಹಿತ್ಯಸೃಷ್ಟಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವದ ಅಧ್ಯಾಯ.

ಮಿಲ್ಟನ್ನನನ್ನು ಅಭ್ಯಸಿಸಿದ್ದ ಕವಿಗೆ ತಾವೂ ಮಿಲ್ಟನ್ನನಂತೆ ಮಹಾಕಾವ್ಯವೊಂದನ್ನು ರಚಿಸಬೇಕೆಂಬ ಹಂಬಲ. ಮಹಾಕಾವ್ಯ ಸೃಷ್ಟಿಯ ಮೊದಲ ಪ್ರಯೋಗವಾಗಿ `ಚಿತ್ರಾಂಗದಾ' ಎಂಬ ಖಂಡಕಾವ್ಯದ ರಚನೆ. ಇದು ಅರ್ಜುನನ ಕಾಮ-ಪ್ರೇಮಕ್ಕೆ ಬಲಿಯಾದ ಚಿತ್ರಾಂಗದೆಯ ಪ್ರೇಮ, ತ್ಯಾಗ, ತಪಸ್ಸು ಮತ್ತು ಪಾತಿವ್ರತ್ಯದ ಮಹತ್ವವನ್ನು ಸಾರುವ ಸುಂದರಕೃತಿ.

ಕುವೆಂಪು ಮೂಲತಃ ದಾರ್ಶನಿಕರು. ಶ್ರೀರಾಮಾಯಣದರ್ಶನಂ ಮಹಾಕಾವ್ಯದ ರಚನೆಯನ್ನು ಪ್ರಾರಂಭಿಸಿದ್ದ ಕಾಲ ಅದು. ಮೊದಲ ಐದು ಸಾವಿರ

ಪಂಕ್ತಿಗಳನ್ನು ಬರೆಯುವವರೆಗೂ ಏನೋ ತೊಳಲಾಟ. ಕಡೆಗೊಮ್ಮೆ ರಾಮಾಯಣಗಳ ಭಾರದಿಂದ ತಿಣುಕುತ್ತಿದ್ದ ಫಣಿರಾಯ ಆಚಾರದ ಪೊರೆಕಳಚಿ ಹೊರಬಂದ. ಆಮೇಲೆ ಭೂ ವ್ಯೋಮವನ್ನೇ ತುಂಬಿನಿಂತ ಮಹಾದೃಷ್ಟಿ ಬೆಳಗಿತು. ಕೆ.ವಿ.ಪುಟ್ಟಪ್ಪ `ಕುವೆಂಪು' ಆದರು. `ಶ್ರೀಕುವೆಂಪುವಂ ಸೃಷ್ಟಿಸಿದ ಮಹಾಛಂದಸ್ಸಿನ ಮೇರುಕೃತಿ ಮೇಣ್ ಜಗದ್ಭಾವ್ಯ ರಾಮಾಯಣದ ಸೃಷ್ಟಿಯಾಯಿತು'. ಈ ಮಹಾನ್‌ಕೃತಿಗೆ ಜ್ಞಾನಪೀಠ ಪ್ರಶಸ್ತಿಯ ಸಂದಾಯ. ಕನ್ನಡಕ್ಕೆ ಸಂದ ಮೊಟ್ಟ ಮೊದಲ ಜ್ಞಾನಪೀಠ ಪ್ರಶಸ್ತಿ.

ಕುವೆಂಪು ಹುಟ್ಟು ಕವಿ. ಅನುಪಮ ಶ್ರೇಯಸ್ಸು ಸಾಧಿಸಿರುವುದು ಕಾವ್ಯದಲ್ಲಿ. ಕೊಳಲು, ಪಾಂಚಜನ್ಯ, ನವಿಲು, ಕೃತ್ತಿಕೆ, ಕಲಾಸುಂದರಿ, ಪಕ್ಷಿಕಾಶಿ, ಇಕ್ಷುಗಂಗೋತ್ರಿ, ಅನಿಕೇತನ, ಜೇನಾಗುವ, ಪ್ರೇಮಕಾಶ್ಮೀರ, ಕಬ್ಬಿಗನ ಕೈ ಬುಟ್ಟಿ, ಚಂದ್ರಮಂಚಕೆ ಬಾ ಚಕೋರಿ ಮುಂತಾದವು ಕುವೆಂಪುರವರ ಪ್ರಮುಖ ಕವನ ಸಂಕಲನಗಳು.

ಕುವೆಂಪು ಮೂಲತಃ ಕವಿಯಾದರೂ ಉಳಿದ ಯಾವ ಪ್ರಕಾರವನ್ನೂ ಬಿಟ್ಟವರಲ್ಲ. ಅವರು ರಚಿಸಿರುವ ಎರಡು ಮಹಾ ಕಾದಂಬರಿಗಳಾದ `ಕಾನೂರು ಸುಬ್ಬಮ್ಮ ಹೆಗ್ಗಡತಿ', `ಮಲೆಗಳಲ್ಲಿ ಮದುಮಗಳು' ಕೃತಿಗಳಲ್ಲಿನ ಪ್ರಾದೇಶಿಕ ವೈವಿಧ್ಯತೆ, ಮಲೆನಾಡಿನ ಸಂಕೀರ್ಣ ಬದುಕು, ಅಲ್ಲಿ ಹಾಸುಹೊಕ್ಕಾಗಿರುವ ಹೆಣ್ಣು – ಮಣ್ಣಿನ ವಾಸನೆ, ಕಳ್ಳು – ಬಾಡಿನ ವಾಸನೆ – ಇವುಗಳನ್ನಾವರಿಸಿಕೊಂಡ ಜನಜೀವನ ಅನಾವರಣಗೊಂಡ ರೀತಿ, ಒಂದೊಂದೂ ಅದ್ಭುತ. ಕಾದಂಬರಿ ಕ್ಷೇತ್ರದಲ್ಲಿ ಹೊಸಪರಂಪರೆಯ ನಿರ್ಮಾಣಕ್ಕೆ ಕಾರಣವಾದ ಈ ಎರಡು ಕೃತಿಗಳು ಮಲೆನಾಡಿನ ಜನತೆಯ ಬೃಹತ್ಕತೆಗಳು.

ಕುವೆಂಪು ಅಪೂರ್ವಕತೆಗಾರರೂ ಹೌದು. ನನ್ನದೇವರು ಮತ್ತು ಇತರ ಕಥೆಗಳು ಹಾಗೂ ಸನ್ಯಾಸಿ ಮತ್ತು ಇತರ ಕಥೆಗಳು ಇವರ ಕಥಾ ಸಂಕಲನಗಳು. ಇವರ ವಿಶಿಷ್ಟ ಕಥನ ಕೌಶಲಕ್ಕೆ ಇವು ಸಾಕ್ಷಿ.

ಕುವೆಂಪು ಒಟ್ಟು 14 ನಾಟಕಗಳ ಕರ್ತೃ. ಜಾಲಗಾರ, ಶೂದ್ರತಪಸ್ವಿ, ಯಮನಸೋಲು, ಮಹಾರಾತ್ರಿ, ಸ್ಮಶಾನಕುರುಕ್ಷೇತ್ರ, ಬೆರಳ್ಗೆಕೊರಳ್, ವಾಲ್ಮೀಕಿಯ ಭಾಗ್ಯ, ಬಲಿದಾನ, ಚಂದ್ರಹಾಸ ಮೊದಲಾದವು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ವಸ್ತುವನ್ನುಳ್ಳ ನಾಟಕಗಳು. ರಕ್ತಾಕ್ಷಿ ಮತ್ತು ಬಿರುಗಾಳಿ ಶೇಕ್ಸ್‌ಪಿಯರ್‌ನ ನಾಟಕಗಳಾದ ಹ್ಯಾಮ್ಲೆಟ್ ಮತ್ತು ಟೆಂಪೆಸ್ಟ್‌ಗಳ ರೂಪಾಂತರ. ಮೋಡಣ್ಣನ ತಮ್ಮ ಮತ್ತು ನನ್ನ ಗೋಪಾಲ ಮಕ್ಕಳ ನಾಟಕಗಳು.

ಸೂಕ್ಷ್ಮ ಸಂವೇದನೆಯ ವಿಮರ್ಶಕ ಕುವೆಂಪು. ಅವರು ತಮ್ಮದೇ ಆದ ವಿಮರ್ಶಾ ಸಿದ್ಧಾಂತವನ್ನು ರೂಪಿಸಿದ್ದಾರೆ. ರಸೋವೈಸಃ, ವಿಭೂತಿಪೂಜೆ, ತಪೋನಂದನ, ದ್ರೌಪದಿಯ ಶ್ರೀಮುಡಿ ಮುಂತಾದವು ಗಮನಾರ್ಹ ಕೃತಿಗಳು.

ಶ್ರೀರಾಮಕೃಷ್ಣ ಪರಮಹಂಸರಿಂದ ಪ್ರಭಾವಿತರಾದ ಕುವೆಂಪು ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಕುವೆಂಪು ತಮ್ಮ ಜೀವನ ಸ್ಮರಣೆಯನ್ನು 'ನೆನಪಿನ ದೋಣಿಯಲಿ' ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ.

ವೃತ್ತಿಯಿಂದ ಅಧ್ಯಾಪಕರಾದ ಕುವೆಂಪು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ, ಕಡೆಗೆ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಸೇವೆಸಲ್ಲಿಸಿದರು. ವಿಶ್ವವಿದ್ಯಾನಿಲಯಗಳ ಗೌರವ ಡಿ.ಲಿಟ್ ಪ್ರಶಸ್ತಿಗಳು, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಪದ್ಮಭೂಷಣ, ರಾಷ್ಟ್ರಕವಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ – ಹೀಗೆ ಹಲವು ಗೌರವಗಳು ಅವರನ್ನು ಹುಡುಕಿಕೊಂಡು ಬಂದವು.

ಕುವೆಂಪು ಅವರು ಭಾರತೀಯ ಅಧ್ಯಾತ್ಮ ಚಿಂತನೆಯ ಒಳ್ಳೆಯದನ್ನೆಲ್ಲಾ ಮೈಗೂಡಿಸಿಕೊಂಡವರು. ನಮ್ಮ ಧರ್ಮದಲ್ಲಿ ಸ್ವೀಕಾರಯೋಗ್ಯವಾದದ್ದು ಯಾವುದು, ತಿರಸ್ಕರಿಸಬೇಕಾದದ್ದು ಏನನ್ನು ಎಂಬ ತರ್ಕ, ವಿಚಾರವಾದಗಳನ್ನು ಜನಮನದಲ್ಲಿ ಬಿತ್ತಿದವರು. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ – ಇದು

ಕುವೆಂಪುರವರ ಸಂದೇಶ. ಪ್ರತಿಯೊಬ್ಬ ಮನುಷ್ಯನೂ ವಿಶ್ವಮಾನವನಾಗಿ ವಿಕಾಸಹೊಂದಬೇಕೆಂಬುದು ಅವರ ಸದಾಶಯ.

ಕಠಿಣಪದಗಳ ಅರ್ಥ

ನಿಮಿರು	–	stand on end
ಗಡಿ	–	ಎಲ್ಲೆ, boundary
ತೂಗುತೊಟ್ಟಿಲು	–	swinging cradle
ಬನ	–	ಕಾಡು, ಅರಣ್ಯ, forest
ಬೆನ್ನುಹತ್ತು	–	to be after, to chase
ಒಳಗಣ್ಣು	–	inner eye
ತೆರೆದುಕೊಳ್ಳು	–	open up
ಮೂಡು	–	imprint
ಹೆಜ್ಜೆಗುರುತು	–	foot print
ಅತೀಂದ್ರಿಯ	–	extra sensory
ಮುಡಿಪು	–	being dedicated to
ಒಡನಾಟ	–	to be in company
ವಾಸ್ತವ್ಯ	–	stay
ಬೆರಗಾಗು	-	awe stucked, wonder stucked
ತುಡಿತ	–	zeal
ಅದ್ವಿತೀಯ	-	unparallel
ಹಂಬಲ	–	keen desire
ಖಂಡಕಾವ್ಯ	–	epic fragment

ತೊಳಲಾಟ	–	restlessness
ಪೊರೆ ಕಳಚು	–	to slough, to let skin
ಕಳ್ಳು	–	toddy
ಬಾಡು	–	ಮಾಂಸ, meat
ಹಾಸುಹೊಕ್ಕು	-	familiar, warp and weft (in weaving)
ಅನಾವರಣಗೊಳ್ಳು	–	unvail, unravel
ರೂಪಾಂತರ	–	adoptation
ಮೈಗೂಡಿಸಿಕೊಳ್ಳು	-	to imbibe, to internalize, to make one's own
ಬಿತ್ತು	–	to sow

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದಗಳನ್ನು ಬದಲಾಯಿಸಿ ಬರೆಯಿರಿ

ಅ. ಮಾದರಿ : ಕತೆ – ಕತೆಗಾರ

ಅ. ಕಲೆ –

ಆ. ವರದಿ –

ಇ. ಕೆಲಸ –

ಈ. ಸಂಗೀತ –

ಕ. ಕಾವಲು –

ಗ. ಜಾದು –

ಆ. ಮಾದರಿ: ವಿಮರ್ಶೆ – ವಿಮರ್ಶಕ

ಅ. ಪರೀಕ್ಷೆ –

ಆ. ಚಿಕಿತ್ಸೆ –

ಇ. ನಿರೀಕ್ಷೆ –

ಈ. ಸೇವೆ –

ಇ. ಮಾದರಿ: ಕೊಡು – ಕೊಡುಗೆ

ಅ. ಉಡು –

ಆ. ತೊಡು –

ಇ. ಆಡು –

ಈ. ಮಾದರಿ: ತುಡಿ – ತುಡಿತ

ಅ. ಮಿಡಿ –

ಆ. ಕಡಿ –

ಇ. ದುಡಿ –

ಈ. ಉರಿ –

ಕ. ಇಳಿ –

ಗ. ಇರಿ –

ಚ. ಸಿಡಿ –

II. ಸೂಕ್ತ ಪದದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಕುವೆಂಪು ಎಂಬುದು ....

ಆ. ಮಲೆನಾಡಿನ ಬನಗಳಲ್ಲಿ ಸಂಚರಿಸುತ್ತಲೇ .... ಕುವೆಂಪು.

ಇ. ಅವರ ....ವಿಶ್ವಸಾಹಿತ್ಯಲೋಕಕ್ಕೆ ತೆರೆದುಕೊಂಡಿತು.

ಈ. ಕುವೆಂಪುರವರು ಶ್ರೇಷ್ಠ ಇಂಗ್ಲಿಷ್ ಕವನಗಳನ್ನು ಅನುಕರಿಸಿ ಕವನ ರಚಿಸಿ ....ಎಂಬ ಹೆಸರಿನಲ್ಲಿ ಪ್ರಕಟಿಸಿದರು.

ಕ. ಮಹಾಕಾವ್ಯ ರಚನೆಯ ಮೊದಲ ಪ್ರಯೋಗವಾಗಿ ....ಎಂಬ ಖಂಡಕಾವ್ಯವನ್ನು ರಚಿಸಿದರು.

ಗ. ಕೆ.ವಿ. ಪುಟ್ಟಪ್ಪ .... ಆದರು.

ಚ. ಕುವೆಂಪು ತಮ್ಮ ಜೀವನ ಸ್ಮರಣೆಯನ್ನು ....ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ.

ಜ. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ – ಇದು ಕುವೆಂಪುರವರ ....

III. ಕೊಟ್ಟಿರುವ ಪದದ ಸಮನಾರ್ಥಕ ಪದವನ್ನು ಆವರಣದಲ್ಲಿ ಕೊಟ್ಟಿರುವ ಪದಗಳಿಂದ ಆಯ್ದು ಬಿಟ್ಟಿರುವ ಜಾಗದಲ್ಲಿ ಬರೆಯಿರಿ

ಅ. ಬನ ....(ಹೊಲ, ಗದ್ದೆ, ಕಾಡು, ಜಮೀನು)

ಆ. ಅಪೂರ್ವ ....(ವಿಶಿಷ್ಟ, ವಿಭಿನ್ನ, ಸುಂದರ, ಅಲೌಕಿಕ)

ಇ. ಕೊಡುಗೆ ....(ಕಾಣಿಕೆ, ದತ್ತಿ, ಉಂಬಳಿ, ಬಹುಮಾನ)

ಈ. ಮುಡಿಪು ....(ಮೀಸಲು, ರಕ್ಷೆ, ಅಂತ್ಯ, ಹರಕೆ)

ಕ. ತುಡಿತ ....(ಕಳವಳ, ಕಾತರ, ಸ್ಪಂದನ, ಹೊಯ್ದಾಟ)

ಗ. ಒಡನಾಟ ....(ವಿಶ್ವಾಸ, ಸ್ನೇಹ, ಓಡಾಟ, ಪ್ರೀತಿ)

IV. ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ:

ಅ. ಕುವೆಂಪುರವರ ವಿದ್ಯಾಭ್ಯಾಸ ಪ್ರಾರಂಭವಾದದ್ದು ಐಗಳ ....(ಮಠ).

ಆ. ಈ ....ಜ್ಞಾನಪೀಠ ಪ್ರಶಸ್ತಿ ದೊರೆತಿದೆ. (ಮಹಾನ್‌ಕೃತಿ).

ಇ. ....ಅಭ್ಯಸಿಸಿದ್ದ ಕವಿಗೆ ಮಹಾಕಾವ್ಯವೊಂದನ್ನು ರಚಿಸಬೇಕೆಂಬ ಹಂಬಲ (ಮಿಲ್ಟನ್).

ಈ. ಭಾರತೀಯ ಆಧ್ಯಾತ್ಮ ಚಿಂತನೆಯ ಒಳ್ಳೆಯದನ್ನೆಲ್ಲಾ .... ಕುವೆಂಪು (ಮೈಗೂಡಿಸಿಕೊಳ್ಳು).

ಕ. ಕುವೆಂಪು ಹುಟ್ಟಿದ್ದು ತಾಯಿ ಸೀತಮ್ಮನವರ ತೌರೂರಾದ................ (ಹಿರೆಕೊಡಿಗೆ).

V. ಮಾದರಿಯನ್ನನುಸರಿಸಿ ಕೊಟ್ಟಿರುವ ವಾಕ್ಯಗಳನ್ನು ಬದಲಾಯಿಸಿ

ಅ. ಮಾದರಿ: ಪ್ರೌಢಶಾಲೆಯಲ್ಲಿದ್ದಾಗಲೇ ಇವರ ಕವಿತಾಶಕ್ತಿ ಪ್ರಕಟ.
ಪ್ರೌಢಶಾಲೆಯಲ್ಲಿದ್ದಾಗಲೇ ಇವರ ಕವಿತಾಶಕ್ತಿ ಪ್ರಕಟ ಆಯಿತು.

ಅ. ಅಲ್ಲಿಂದ ಅವರ ಬಾಳು ಕನ್ನಡಕ್ಕೆ ಮುಡಿಪು.

ಆ. ಈ ಮಹಾನ್ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಸಂದಾಯ.

ಇ. ಭಾರಿ ಮಳೆಯಿಂದಾಗಿ ಜನರಿಗೆ ತೊಂದರೆ.

ಈ. ಗುಂಪು ಘರ್ಷಣೆಯಲ್ಲಿ ಚಿತ್ರ ಮಂದಿರ ಭಸ್ಮ.

ಕ. ಆನೆಗಳಿಂದ ಬುಡಕಟ್ಟು ಜನರ ಮನೆಗಳು ನೆಲಸಮ.

ಆ. ಮಾದರಿ: ಕುವೆಂಪುರವರ ವಿದ್ಯಾಭ್ಯಾಸ ಐಗಳ ಮಠದಿಂದ ಪ್ರಾರಂಭವಾಯಿತು.
ಕುವೆಂಪುರವರ ವಿದ್ಯಾಭ್ಯಾಸ ಪ್ರಾರಂಭವಾದದ್ದು ಐಗಳ ಮಠದಿಂದ.

ಅ. ಕುವೆಂಪು ಕಾವ್ಯದಲ್ಲಿ ಅನುಪಮ ಶ್ರೇಯಸ್ಸು ಸಾಧಿಸಿದರು.

ಆ. ಕಾವ್ಯಕನ್ನಿಕೆ ಇಲ್ಲಿಂದಲೇ ಅವರ ಬೆನ್ನು ಹತ್ತಿದಳು.

ಇ. ಕುವೆಂಪು ಇಂಗ್ಲೀಷಿನಲ್ಲಿ ಕವಿತೆ ರಚಿಸಿದರು.

ಈ. ಗೌರಿ ನಿನ್ನನ್ನು ಕನಸಿನಲ್ಲಿ ಕಂಡಳು.

ಕ. ಡಾ.ಯು.ಆರ್.ಅನಂತಮೂರ್ತಿಯವರಿಗೆ ಸಮಗ್ರ ಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿ ಸಿಕ್ಕಿತು.

ಗ. ನಾನು ಮೈಸೂರಿನಲ್ಲಿ ಹುಟ್ಟಿದೆ.

ಚ. ಪಾರ್ಥಸಾರಥಿ ಇಪ್ಪತ್ತೈದು ವರ್ಷಗಳ ಕಾಲ ಅಮೆರಿಕದಲ್ಲೇ ಇದ್ದರೂ ಕಡೆಗೆ ಕರ್ನಾಟಕದಲ್ಲೇ ಬಂದು ನೆಲಸಿದರು.

VI. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ

ಅ. ಕುವೆಂಪು ಹುಟ್ಟಿದ್ದು ಹಿರೆಕೊಡಿಗೆಯಲ್ಲಿ

(transform into a verbal sentence).

ಆ. ಕಾಲೇಜು ವ್ಯಾಸಂಗ ಮಹಾರಾಜಾ ಕಾಲೇಜಿನಲ್ಲಿ

(transform into verbal sentence by using appropriate collocative verb).

ಇ. ಶ್ರೀಲಂಕಾ ಅಧ್ಯಕ್ಷೆ ಸಿರಿಮಾವೊ ಬಂಡಾರನಾಯಕೆ ರಾಜೀನಾಮೆ

(transform into verbal sentence by using appropriate collocative verb).

ಈ. ರವಿ ನೋಡಿದ ಹುಡುಗಿ ಕುಸುಮ.

(transform into negative sentence)

ಕ. ಕುವೆಂಪು ಅವರು ಭಾರತೀಯ ಆಧ್ಯಾತ್ಮ ಚಿಂತನೆಯ ಒಳ್ಳೆಯದನೆಲ್ಲಾ ಮೈಗೂಡಿಕೊಂಡವರಲ್ಲ.

(transform into affirmative).

VII. ಕೆಳಕಂಡ ಪದ/ಪದಪುಂಜಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ತೂಗುತೊಟ್ಟಿಲು

ಆ. ಬಲಿಯಾಗು

ಇ. ಪುಷ್ಪರಾಜಿ

ಈ. ಅನಾವರಣಗೊಳ್ಳು

ಕ. ಒಳಗಣ್ಣು

ಗ. ರೂಪಾಂತರ

ಚ. ಬೆರಗಾಗು

VIII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕುವೆಂಪುರವರ ಹುಟ್ಟೂರು ಯಾವುದು?

ಆ. ಕುವೆಂಪುರವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು?

ಇ. ಕುವೆಂಪುರವರ ಮೊಟ್ಟಮೊದಲ ಕವನ ಸಂಕಲನ ಯಾವುದು?

ಈ. ಕುವೆಂಪುರವರ ಕಾದಂಬರಿಗಳು ಯಾವುವು. ಅವುಗಳಲ್ಲಿ ಓದುಗ ಕಾಣುವ ಮಿಡಿತ ಏನು?

ಕ. ಕುವೆಂಪುರವರ ಕವನ ಸಂಕಲನಗಳನ್ನು ಹೆಸರಿಸಿ?

ಗ. ಕುವೆಂಪುರವರ ನಾಟಕಗಳು ಯಾವುವು?

ಚ. ಕುವೆಂಪು ಸೃಷ್ಟಿಸಿರುವ `ಚಿತ್ರಾಂಗದೆಯ' ವೈಶಿಷ್ಟ್ಯವೇನು?

ಜ. ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಸಂದಾಯವಾಗಿದೆ?

IX. ನಿಮ್ಮ ಭಾಷೆಯ ಒಬ್ಬರು ಸಾಹಿತಿಯ ಪರಿಚಯ ಮಾಡಿಕೊಡಿ

X. ಕನ್ನಡಕ್ಕೆ ಅನುವಾದಿಸಿ

Kuvempu's `Sree Ramayana Darshanam' is not only the stroy of the great victory of Rama over his formidable enemy. It is also the story of a spiritual pilgrimage. Rama himself grows in the epic. The poet devoted nine years to this work. It was completed in 1945. It comprises 22,284 lines, distributed over 50 cantos, which make up four volumes. The story is taken from Valmiki, but Kuvempu has made significant modifications. Manthara is not a jealous woman in this poetry. Manthara is an unfortunate woman whose physical ugliness has repelled one and all, but who has received affection from Kaikeyi. So Manthara

becomes wrapped up in the young beauty, rejoices in her prosperity and lives through her. So she becomes human and earns, not contempt but compassion. Shabari gives up her life for the sake of Rama. Ravana is not merely a warrier of formidable prowess. He tells his wife, I have not seen a woman who could resist me. If I had, I would have touched her feet. He knows Seeta will not surrender. He decides at one stage to defeat Rama on the battle field and then unite husband and wife. But he dies before achieving his feat. After the death of Ravana, Rama insults Seeta before the assembled chiefs and soldiers, and she decides to enter fire. Rama leaps into the fire with Seeta, are the striking modifications made by Kuvempu.

15. ಕನ್ನಡ ಭಾಷೆ

ಭಾರತದ ಪ್ರಾಚೀನ ಭಾಷೆಗಳಲ್ಲಿ ಕನ್ನಡಭಾಷೆಯೂ ಒಂದು. ಇದು ದ್ರಾವಿಡಭಾಷಾ ಪರಿವಾರಕ್ಕೆ ಸೇರಿದ ಒಂದು ಪ್ರಮುಖ ಭಾಷೆ. ಕನ್ನಡ ಒಂದು ಪ್ರಾಚೀನಭಾಷೆ ಎಂಬುದನ್ನು ಸಾಬೀತುಪಡಿಸಲು ಅನೇಕ ಆಧಾರಗಳಿವೆ. ಅವುಗಳೆಂದರೆ:

1. ಹರಪ್ಪಾ–ಮೊಹೆಂಜೋದಾರೋ ಸಂಸ್ಕೃತಿಗೆ ಸೇರಿದ ಮುದ್ರಿಕೆಗಳಲ್ಲಿ ಕನ್ನಡ ಜನರ ಉಲ್ಲೇಖವಿದೆಯೆಂದೂ ಅವರು ಕಣನೀರ್ ಜನಾಂಗದವರೆಂದೂ ಸಿಂಧೂ ಸಂಸ್ಕೃತಿಯ ಭಾಷೆಯೂ ಕೂಡ ಒಂದು ಬಗೆಯ ದ್ರಾವಿಡ ಭಾಷೆಯಾಗಿತ್ತೆಂದೂ ಡಾ. ಹೆರಾಸ್ ಅಭಿಪ್ರಾಯಪಟ್ಟಿರುತ್ತಾರೆ.

2. ಛಾಂದಗ್ಯೋಪನಿಷತ್ತಿನಲ್ಲಿ ದೊರೆಯುವ `ಚೆನ್' (ಚಂದ್ರ) `ಮಟಚಿ' (ಮಿಡತೆ) ಮುಂತಾದ ಶಬ್ದಗಳು ಕನ್ನಡಪದಗಳೆಂದು ಡಾ.ಭಂಡಾರ್‌ಕರ್ ಅಭಿಪ್ರಾಯಪಟ್ಟಿರುತ್ತಾರೆ.

3. ಕ್ರಿ.ಶ.1ನೇ ಶತಮಾನಕ್ಕೆ ಸೇರಿದ ಶಾತವಾಹನ ವಂಶದ ಹಾಲರಾಜನ `ಗಾಥಾಸಪ್ತಶತಿ' ಎಂಬ ಪ್ರಾಕೃತಗ್ರಂಥದಲ್ಲಿ ಸಂಸ್ಕೃತ ಮತ್ತು ಪ್ರಾಕೃತಭಾಷೆಗಳಿಗೆ ಸೇರದ ಅತ್ತಾ (ಅತ್ತೆ), ತುಪ್ಪ, ಪೊಟ್ಟೆ (ಹೊಟ್ಟೆ), ಪೆಟ್ಟು, ತೀರ್ (ಸಮರ್ಥನಾಗು) ಎಂಬ ಪದಗಳು ಬಳಕೆಯಾಗಿವೆ. ಇವು ಶುದ್ಧಗನ್ನಡ ಪದಗಳೆಂದು ಡಾ.ಎಂ.ಗೋವಿಂದ ಪೈ ಅವರು ಅಭಿಪ್ರಾಯಪಟ್ಟಿರುತ್ತಾರೆ.

4. ಟಾಲೆಮಿ (ಕ್ರಿ.ಶ. 3ನೇ ಶತಮಾನ) ಪ್ರಾಚೀನ ಭಾರತದ ಭೂಗೋಳವನ್ನು ಕುರಿತ ತನ್ನ ಗ್ರಂಥದಲ್ಲಿ ಬಹುಶಃ ಭೀಮಾನದಿಯಿಂದ ಬನವಾಸಿವರೆಗಿನ ಪ್ರದೇಶದ ನಡುವೆ ಇದ್ದ ಹತ್ತು ಸ್ಥಳಗಳನ್ನು ಹೆಸರಿಸಿದ್ದಾರೆ. ಆ ಹೆಸರುಗಳನ್ನು ಡಾ.ಎಂ.ಗೋವಿಂದ ಪೈ ಅವರು ಇಂದಿನ ಕರ್ನಾಟಕದ ಸ್ಥಳಗಳಾಗಿ ಗುರುತಿಸಿದ್ದಾರೆ. ಅವುಗಳೆಂದರೆ ೧. Nagarouris-ನಗರೂರು

೨. Tabase- ತವಸಿ ೩. Kalligeri – ಕಲಗೇರಿ ೪. Soubouttou – ಸವದಿ ೫. Tiripangalida-ಗದಾಹಿಂಜಲಗ ೬. Hippo- Kaura-ಹೂವಿನ ಹಿಪ್ಪರಗಿ ೭. Sirimalaga–ಚಿಮ್ಮಲಗಿ ೮. Modugoulla - ಮುದ್ಗಲ ೯. Petirigala - ಹಟ್ಟಿಕೆಹಾಳ. ೧೦. Inde - ಇಂಡಿ. ಮೇಲಿನ ಆಧಾರಗಳಿಂದ ಟಾಲೆಮಿಯ ಗ್ರಂಥರಚನೆಯ ಕಾಲಕ್ಕಿಂತಲೂ ಹಿಂದೆ ಅಂದರೆ ಕ್ರಿ.ಶ.3ನೇ ಶತಮಾನಕ್ಕೆ ಒಂದೆರಡು ಶತಮಾನಗಳಷ್ಟು ಹಿಂದೆಯೇ ಕನ್ನಡ ಭಾಷೆ ಬಳಕೆಯಲ್ಲಿತ್ತು ಎಂಬುದು ಖಚಿತವಾಗುತ್ತದೆ.

5. ಕನ್ನಡ ಭಾಷೆಯ ಪ್ರಾಚೀನತೆಯನ್ನು ಸಾಬೀತುಪಡಿಸಲು ದೊರತಿರುವ ಶಾಸನಗಳು ಹಲವಾರು. ಕರ್ನಾಟಕದಲ್ಲಿ ಮೊಟ್ಟಮೊದಲು ಸಿಕ್ಕ ಶಾಸನಗಳೆಂದರೆ ಬ್ರಾಹ್ಮಿಲಿಪಿಯಲ್ಲಿ ಬರೆದಿರುವ ಪ್ರಾಕೃತಭಾಷೆಯ ಅಶೋಕನ ಶಾಸನಗಳು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ (ಕ್ರಿ.ಶ.3ನೇಶತಮಾನ) `ಇಸಿಲ' ಎಂಬ ಅಚ್ಚಗನ್ನಡ ಪದವಿದೆ. `ಇಸಿಲ' ಎಂದರೆ ಕೋಟೆ ಅಥವಾ ಕೋಟೆಯೊಳಗಿರುವ ಊರು ಎಂಬ ಅರ್ಥವಿದೆ. ಈ ಪದವೇ ದಾಖಲಿಸಲಾದ ಅತ್ಯಂತ ಪ್ರಾಚೀನ ಕನ್ನಡ ಪದ.

6. ನಮಗೆ ಸಿಕ್ಕಿರುವ ಮೊದಲ ಕನ್ನಡ ಬರವಣಿಗೆ ಕ್ರಿ.ಶ.450 ರ ಹಲ್ಮಿಡಿ ಶಾಸನ. ಈ ಶಾಸನದಲ್ಲಿ ಕನ್ನಡ ಭಾಷೆಯ ಸ್ವರೂಪದ ಸ್ಪಷ್ಟ ಪರಿಚಯವಾಗುತ್ತದೆ. ಹಲ್ಮಿಡಿ ಶಾಸನದ ಸಂಪಾದಕರಾದ ಡಾ.ಎಂ.ಎಚ್.ಕೃಷ್ಣ ಅವರು ಈ ಶಾಸನದ ಭಾಷಾ ವೈಲಕ್ಷಣ್ಯವನ್ನು ಗಮನಿಸಿ "ಕನ್ನಡ ಭಾಷೆಯೂ ಅದರ ವಾಙ್ಮಯವೂ ಕೆಲವು ಶತಮಾನಗಳ ಹಿಂದೆ ಬದುಕಿ ಬಾಳಿರಬೇಕು" ಎಂದಿದ್ದಾರೆ.

7. ಕನ್ನಡ ಭಾಷೆಯ ಮೊಟ್ಟಮೊದಲ ಉಪಲಬ್ಧ ಕೃತಿ ಕವಿರಾಜಮಾರ್ಗ. ಇದು ಕಾವ್ಯಶಾಸ್ತ್ರವನ್ನು ಕುರಿತ ಲಕ್ಷಣಗ್ರಂಥವಾಗಿರುವುದರಿಂದ ಇದಕ್ಕಿಂತಲೂ ಹಿಂದೆಯೇ ಅನೇಕ ಲಕ್ಷ್ಯ ಗ್ರಂಥಗಳ ರಚನೆ ಆಗಿಯೇ ಇರುತ್ತದೆ. ಕವಿರಾಜಮಾರ್ಗಕ್ಕಿಂತಲೂ ಹಿಂದೆಯೇ ಗದ್ಯಕೃತಿಗಳು, ಕಾವ್ಯಗಳು

ರಚನೆಯಾಗಿದ್ದವೆಂಬುದನ್ನು ಗದ್ಯಕಾರರು ಹಾಗೂ ಕವಿಗಳ ಒಂದು ಪಟ್ಟಿಯನ್ನು ಕೊಟ್ಟು ಖಚಿತಗೊಳಿಸಿದ್ದಾನೆ ಕವಿರಾಜಮಾರ್ಗಕಾರ.

ಪ್ರಾಚೀನ ಭಾಷೆಯಾದ ಕನ್ನಡ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಹೊಂದುತ್ತಾ ಬೆಳೆದುಬಂದಿದೆ. ಈ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಿದ್ದಾರೆ. ಅವುಗಳೆಂದರೆ: 1 ಪೂರ್ವದ ಹಳಗನ್ನಡ (ಕ್ರಿ.ಶ. 850 ರವರೆಗೆ) 2.ಹಳಗನ್ನಡ (ಕ್ರಿ.ಶ. 12 ನೇಶತಮಾನದವರೆಗೆ), 3. ನಡುಗನ್ನಡ (ಕ್ರಿ.ಶ. 17ನೇ ಶತಮಾನದವರೆಗೆ) 4. ಹೊಸಗನ್ನಡ (ಕ್ರಿ.ಶ. 18 ನೇ ಶತಮಾನದಿಂದೀಚೆಗೆ).

ಮೇಲೆ ಸೂಚಿಸಿದ ನಾಲ್ಕು ಹಂತಗಳಲ್ಲಿ ಕನ್ನಡ ಭಾಷೆಯಲ್ಲಿ ವಿಶಿಷ್ಟ ಬದಲಾವಣೆಗಳಾದವು. ಪೂರ್ವದ ಹಳಗನ್ನಡದಲ್ಲಿ ಮೂಲದ್ರಾವಿಡದ `ವಕಾರ' `ವ' ಕಾರವಾಗಿಯೇ ಉಳಿದರೆ ಹಳಗನ್ನಡದಲ್ಲಿ `ವ'ಕಾರ `ಬ'ಕಾರವಾಗುತ್ತದೆ. ಉದಾಹರಣೆಗೆ ಪೂರ್ವದ ಹಳಗನ್ನಡದ ವೆಟ್ಟ, ವಿತ್ತು, ವೆಳೆ ಮುಂತಾದ ರೂಪಗಳು ಕ್ರಮವಾಗಿ ಬೆಟ್ಟ, ಬಿತ್ತು, ಬೆಳೆ ಎಂದಾಗಿವೆ.

ಹಳಗನ್ನಡವು ನಡುಗನ್ನಡವಾಗಿ ಮಾರ್ಪಡುವಾಗ ವ್ಯಂಜನಾಂತವಾಗಿದ್ದ ಪದಗಳೂ, ಪ್ರತ್ಯಯಗಳೂ ಸ್ವರಾಂತವಾದವು. ಉದಾಹರಣೆಗೆ ಕರುಳ್, ಉಸಿರ್, ನೇಸರ್ ಎಂಬ ಪದಗಳು ಕರುಳು, ಉಸಿರು, ನೇಸರು ಎಂದಾದವು. ಆನ್, ಆಮ್, ನೀನ್, ನೀಮ್, ಅವನ್, ಅವಳ್ ಮುಂತಾದ ವ್ಯಂಜನಾಂತ ಸರ್ವನಾಮಗಳು ಕ್ರಮವಾಗಿ ನಾನು, ನಾವು, ನೀನು, ನೀವು, ಅವನು, ಅವಳು ಎಂಬುದಾಗಿ ಸ್ವರಾಂತವಾಗಿ ಮಾರ್ಪಟ್ಟವು. ಹಳಗನ್ನಡದ `ಪ' ಕಾರ `ಹ' ಕಾರವಾಗಿ ಪಳ್ಳಿ, ಪಾಲು, ಪಂದಿ, ಪಸುಳೆ, ಪಸಿರು ಮುಂತಾದ ಪದಗಳು ಕ್ರಮವಾಗಿ ಹಳ್ಳಿ, ಹಾಲು, ಹಂದಿ, ಹಸುಳೆ, ಹಸಿರು ಆಗಿ ಬದಲಾದವು. ಷಷ್ಟಿ ವಿಭಕ್ತಿ ಪ್ರತ್ಯಯ `ಆ' ಇದ್ದದ್ದು `ಅ' ಆಯಿತು. ಪೂರ್ವದ ಹಳಗನ್ನಡದಲ್ಲಿ `ಉಳ್' ಎಂದಿದ್ದ ಸಪ್ತಮಿ ವಿಭಕ್ತಿ ಪ್ರತ್ಯಯ ಹಳಗನ್ನಡದಲ್ಲಿ `ಒಳ್' ಆಗಿ ಹೊಸಗನ್ನಡದಲ್ಲಿ `ಅಲ್ಲಿ' ಎಂದಾಯಿತು. ಹೀಗೆ ವರ್ಣಮಾಲೆಯಿಂದ ಹಿಡಿದು ವಾಕ್ಯರಚನೆಯವರೆಗೆ

ಅನೇಕ ಬದಲಾವಣೆಗಳು ನಡೆದವು. ಈ ಬದಲಾವಣೆಗಳೆಲ್ಲವೂ ಗ್ರಂಥಸ್ಥ ಭಾಷೆಯ ಮೇಲೆ ಉಂಟಾದಂತಹವುಗಳು.

ಗ್ರಂಥಸ್ಥಭಾಷೆಯಲ್ಲಿ ಬದಲಾವಣೆಗಳು ಉಂಟಾದಂತೆಯೇ ಆಡುಭಾಷೆಯೂ ಬದಲಾವಣೆಗೆ ಒಳಗಾಗಿದೆ. ಭಾಷಾಶಾಸ್ತ್ರಜ್ಞರು ಈ ವಿಷಯದ ಮೇಲೆ ಗಮನ ಹರಿಸಿ ಭಾಷೆಗಳ ವೈಜ್ಞಾನಿಕ ವಿಶ್ಲೇಷಣೆಯಲ್ಲಿ ಆಡುಮಾತಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟು ಭಾಷೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಅವುಗಳ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಶಿಷ್ಟಭಾಷೆಯ ಮೇಲೆ ಅನ್ಯಭಾಷಾಸಂಸರ್ಗ, ಅನ್ಯ ಸಂಸ್ಕೃತಿಯ ಪ್ರಭಾವ, ಸಾಮಾಜಿಕ ಮತ್ತು ಭೌಗೋಳಿಕ ಪರಿಸರದ ಕಾರಣಗಳಿಂದಾಗಿ ಉಪಭಾಷೆಗಳು ಹುಟ್ಟಿಕೊಳ್ಳುತ್ತವೆ. ಉಪಭಾಷೆಗಳನ್ನು ಶಿಷ್ಟಭಾಷೆಯ ಜೊತೆ ಹೋಲಿಸಿದಾಗ ಅವು ಉಚ್ಚಾರಣೆ, ಶಬ್ದಸಮೂಹ ಹಾಗೂ ವ್ಯಾಕರಣ ಪ್ರಕ್ರಿಯೆಗಳಲ್ಲಿ ಭಿನ್ನವಾಗಿರುತ್ತವೆ. ಈ ಕಾರಣಗಳ ಹಿನ್ನೆಲೆಯಲ್ಲಿ ಎರಡು ರೀತಿಯ ಉಪಭಾಷೆಗಳನ್ನು ಗುರುತಿಸಬಹುದು. 1. ಪ್ರಾದೇಶಿಕ ಉಪಭಾಷೆಗಳು. 2 ಸಾಮಾಜಿಕ ಉಪಭಾಷೆಗಳು.

ವಿಶಾಲವಾದ ಭೂಪ್ರದೇಶದಲ್ಲಿ ಬಳಕೆಯಾಗುವ ಒಂದು ಭಾಷೆ ಅದೇ ಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆಬೇರೆ ರೀತಿಯಲ್ಲಿ ಬಳಕೆಯಲ್ಲಿರುತ್ತದೆ. ಈ ಭಿನ್ನರೂಪಗಳನ್ನು ಪ್ರಾದೇಶಿಕ ಉಪಭಾಷೆಗಳು ಎಂದು ಕರೆಯುತ್ತಾರೆ. ಕನ್ನಡದಲ್ಲಿ ಸ್ಥೂಲವಾಗಿ ನಾಲ್ಕು ರೀತಿಯ ಪ್ರಾದೇಶಿಕ ಉಪಭಾಷೆಗಳನ್ನು ಗುರುತಿಸಬಹುದು. 1.ಮೈಸೂರು ಕನ್ನಡ 2. ಧಾರವಾಡ ಕನ್ನಡ 3. ಮಂಗಳೂರು ಕನ್ನಡ ಮತ್ತು 4. ಗುಲ್ಬರ್ಗ ಕನ್ನಡ. ತುಂಗಭದ್ರಾ ನದಿಯ ದಕ್ಷಿಣ ಭಾಗದ ಕನ್ನಡವನ್ನು ಮೈಸೂರು ಕನ್ನಡವೆಂದೂ, ತುಂಗಭದ್ರೆಯ ಉತ್ತರ ಭಾಗದ ಕನ್ನಡವನ್ನು ಧಾರವಾಡ ಕನ್ನಡವೆಂದೂ, ಕರಾವಳಿಯ ಕನ್ನಡವನ್ನು ಮಂಗಳೂರು ಕನ್ನಡವೆಂದೂ, ಹೈದರಾಬಾದ್ ಕರ್ನಾಟಕದ ಕನ್ನಡವನ್ನು ಗುಲ್ಬರ್ಗ ಕನ್ನಡವೆಂದೂ ಕರೆಯುತ್ತಾರೆ. ಮೈಸೂರಿನ `ಅಮ್ಮ' ಧಾರವಾಡದಲ್ಲಿ ' ಅವ್ವ ' ನಾಗಿ ಮಂಗಳೂರಿಗೆ

ಬರುವಷ್ಟರಲ್ಲಿ ` ಅಜ್ಜಿ ' ಯಾಗಿ, ಗುಲ್ಬರ್ಗದಲ್ಲಿ ` ಆಯಿ ' ಆಗುತ್ತಾಳೆ. ಹಾಗೆಯೇ ಮೈಸೂರಿನ `ತಾತ' ಮಂಗಳೂರಿನಲ್ಲಿ `ಅಜ್ಜ' ನಾಗಿ ಧಾರವಾಡದಲ್ಲಿ `ಮುತ್ಯ' ನಾಗಿ ಗುಲ್ಬರ್ಗಾದಲ್ಲಿ `ಮುತ್ತೆ' ಯಾಗುತ್ತಾನೆ. ಮೈಸೂರಿನ `ಪುರಿ', ಮಂಗಳೂರಿನ `ಹುರಿಯಕ್ಕಿ', ಧಾರವಾಡದ `ಚುರುಮುರಿ', ಗುಲ್ಬರ್ಗಾದ `ಮಂಡಾಳ' (ಮಂಡಕ್ಕಿ) ಬಾಯಲ್ಲಿ ನೀರೂರಿಸುವುದಂತೂ ಖಂಡಿತ. ಮೈಸೂರಿನವರು ಹೂವನ್ನು `ಕಿತ್ತರೆ' ಮಂಗಳೂರಿನವರು ಹೂವನ್ನು `ಕೊಯ್ತಾರೆ'. ಧಾರವಾಡದಲ್ಲಿ ಹೂವನ್ನು `ಹರಿದರೆ' ಗುಲ್ಬರ್ಗಾದಲ್ಲಿ `ಕಡಿ'ಯುತ್ತಾರೆ. ಮೈಸೂರಿನ `ಕೂಗು' ಮಂಗಳೂರಿನಲ್ಲಿ `ಬೊಬ್ಬೆಹಾಕಿ' ಧಾರವಾಡ, ಗುಲ್ಬರ್ಗಾಗಳಲ್ಲಿ `ಒದರ್ಲಿಕ್ಕ ಹತ್ಯಾವ'.

ಹೀಗೆಯೇ ಒಂದು ಭಾಷೆಯನ್ನಾಡುವ ಸಮಾಜದ ಸಾಮಾಜಿಕ ವ್ಯವಸ್ಥೆಯಿಂದಾಗಿ ಸಾಮಾಜಿಕ ಉಪಭಾಷೆಗಳು ಹುಟ್ಟಿಕೊಳ್ಳುತ್ತವೆ. ಒಂದು ಊರನ್ನು ಒಂದು ಘಟಕವಾಗಿ ತೆಗೆದುಕೊಂಡಾಗ ಅಲ್ಲಿ ವಾಸಿಸುವ ಭಿನ್ನಭಿನ್ನ ಜಾತಿ ಅಥವಾ ವರ್ಗಕ್ಕೆ ಸೇರಿದವರು ಭಿನ್ನಭಿನ್ನ ರೂಪಗಳನ್ನು ಬಳಸುತ್ತಾರೆ. ಈ ಭಿನ್ನ ರೂಪಗಳು ಉಚ್ಚಾರಣೆ, ಶಬ್ದಸಮೂಹ ಮತ್ತು ವ್ಯಾಕರಣ ಪ್ರಕ್ರಿಯೆಗಳಲ್ಲಿ ಭಿನ್ನವಾಗಿರುತ್ತವೆ. ಉದಾರಹಣೆಗೆ ಒಂದು ವರ್ಗಕ್ಕೆ ಸೇರಿದ ಜನ ಹಣ್ಣು, ಹಾಲು, ಹೂವು ಮುಂತಾದ ಪದಗಳನ್ನು ಹಣ್ಣು, ಹಾಲು, ಹೂವು ಎಂದೇ ಉಚ್ಚರಿಸಿದರೆ ಮತ್ತೊಂದು ವರ್ಗಕ್ಕೆ ಸೇರಿದ ಜನ ಅಣ್ಣು, ಆಲು, ಊವು ಎಂಬುದಾಗಿ ಉಚ್ಚರಿಸುತ್ತಾರೆ. ಒಂದು ಸಮುದಾಯದಲ್ಲಿ ಶ,ಷ, ಸಗಳು ಶ, ಸಗಳಾದರೆ ಮತ್ತೊಂದು ಸಮುದಾಯದಲ್ಲಿ ಸ ಮಾತ್ರ ಆಗುತ್ತದೆ. ಉದಾಹರಣೆಗೆ ಶಂಕರ, ಷಣ್ಮುಖ, ಸರಸ್ವತಿ ಕ್ರಮವಾಗಿ ಶಂಕರ, ಶಣ್ಮುಕ, ಸರಸ್ವತಿಯಾದರೆ ಮತ್ತೊಂದು ಸಮುದಾಯದಲ್ಲಿ ಸಂಕರ, ಸಣ್ಮುಕ, ಸರಸ್ವತಿ ಎಂದಾಗುತ್ತದೆ. ಹಾಗೆಯೇ ಒಂದು ವರ್ಗದವರು ಉಪಯೋಗಿಸುವ ದೋಸೆಹಿಟ್ಟು ಮತ್ತೊಂದು ವರ್ಗದಲ್ಲಿ `ಸಂಪಣ' ವಾಗುತ್ತದೆ. ಒಂದು ವರ್ಗದಲ್ಲಿನ `ವಿದ್ಯಾರ್ಥಿಗಳು' ಇನ್ನೊಂದು ವರ್ಗದವರ ಬಾಯಲ್ಲಿ `ವಿದ್ಯಾರ್ಥಿಗೋಳು' ಆಗುತ್ತಾರೆ. ಕೆಲವರು ಬೆಂಗಳೂರಿಗೆ ಒಗ್ತಾರೆ ಮತ್ತೆ ಕೆಲವರು ಬೆಂಗಳೂರಿಗೆ

ವೊಯ್ತಾರೆ. ಹಾಗೆಯೇ ಅವನು ಎನ್ನುವ ಸರ್ವನಾಮ ಅವ್ನು, ಅವ, ಅಂವ ಎಂದಾಗುತ್ತದೆ. ಹೀಗೆ ಭೌಗೋಳಿಕ, ಸಾಮಾಜಿಕ ಕಾರಣಗಳಿಂದ ವ್ಯತ್ಯಾಸಗಳನ್ನು ತನ್ನ ಒಡಲಿನಲ್ಲಿ ಸೇರಿಸಿಕೊಂಡು ನಿರಂತರವಾಗಿ ಬದಲಾವಣೆಗೆ ಒಳಗಾಗಿ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ ಭಾಷೆ.

ವಿಭಿನ್ನ ಪ್ರದೇಶಗಳಲ್ಲಿ ವಾಸಿಸುವ ಹಾಗೂ ಒಂದೇ ಪ್ರದೇಶದ ವಿವಿಧ ಜಾತಿ ವರ್ಗಗಳ ಜನರು ಉಪಯೋಗಿಸುವ ಭಾಷಾ ರೂಪಗಳಲ್ಲಿ ವ್ಯತ್ಯಾಸವಿದೆಯಾದ ಕಾರಣ ಸಂವಹನಕ್ರಿಯೆಗಾಗಿ ಒಂದು ಶಿಷ್ಟರೂಪ ಅನಿವಾರ್ಯವಾಗುತ್ತದೆ. ಹೀಗಾಗಿ ಒಂದು ಭಾಷೆಯ ಆಡುನುಡಿಗಳಲ್ಲಿನ ಯಾವುದಾದರೂ ಒಂದು ರೂಪವನ್ನು ಶಿಷ್ಟರೂಪವೆಂದು ಪರಿಗಣಿಸಲಾಗುವುದು. ಹೀಗೆ ಪರಿಗಣಿಸಲಾದ ಶಿಷ್ಟರೂಪ ಗ್ರಾಂಥಿಕ ರೂಪಕ್ಕೆ ಹತ್ತಿರವಾಗಿದ್ದು ಸಭೆ ಸಮಾರಂಭಗಳಲ್ಲಿ ಸಮೂಹ ಮಾಧ್ಯಮಗಳಲ್ಲಿ ಬಳಕೆಯಾಗುವಂತಹದಾಗಿರುತ್ತದೆ.

ಅನೌಪಚಾರಿಕ ಸನ್ನಿವೇಶಗಳಲ್ಲಿ ಮಾತಾಡುವಾಗ ದಿನನಿತ್ಯದ ವ್ಯಾವಹಾರಿಕ ರೂಪದ ಕನ್ನಡವನ್ನು ಬಳಸುತ್ತೇವೆ. ಔಪಚಾರಿಕ ಸನ್ನಿವೇಶಗಳಾದ ಸಭೆ, ಸಮಾರಂಭಗಳಲ್ಲಿ ಪ್ರತಿಷ್ಠಿತ ವೇದಿಕೆಗಳಲ್ಲಿ, ಸಮೂಹಮಾಧ್ಯಮಗಳಲ್ಲಿ ಶಿಷ್ಟಕನ್ನಡ ರೂಪವನ್ನು ಬಳಸಲಾಗುತ್ತದೆ.

ಹೀಗೆ ಭಾಷೆ ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ವರ್ಗದಿಂದ ವರ್ಗಕ್ಕೆ ಬದಲಾವಣೆ ಹೊಂದುತ್ತಲೇ ಇರುತ್ತದೆ.

ಕಠಿಣಪದಗಳ ಅರ್ಥ

ದ್ರಾವಿಡಭಾಷೆ	–	Dravidian Language
ಪರಿವಾರ	–	family
ಸಾಬೀತುಪಡಿಸು	–	to prove, to establish

ಮುದ್ರಿಕೆ	–	seal
ಸ್ಪಷ್ಟ	-	clear
ಹಳಗನ್ನಡ	–	old Kannada
ನಡುಗನ್ನಡ	–	medival Kannada
ಹೊಸಗನ್ನಡ	–	modern Kannada
ಸೂಚಿಸು	-	to indicate
ಮೂಲದ್ರಾವಿಡ	–	proto dravidian
ವೈಜ್ಞಾನಿಕ ವಿಶ್ಲೇಷಣೆ	–	scientific analysis
ಶಿಷ್ಟಭಾಷೆ	–	standard language
ಅನ್ಯಭಾಷಾಸಂಸರ್ಗ	–	language in contact with other languages
ಪರಿಸರ	–	ambience
ಶಬ್ದಸಮೂಹ	–	lexis
ಉಪಭಾಷೆ	–	dialect
ಪ್ರಾದೇಶಿಕ ಉಪಭಾಷೆ	–	regional dialect
ಸಾಮಾಜಿಕ ಉಪಭಾಷೆ	–	social dialect
ಅಬ್ಬೆ	–	mother
ಆಯಿ	–	literally `mother' in Marathi language
ಮುತ್ಯ /ಮುತ್ತೆ	–	grandfather
ಸಂವಹನ ಕ್ರಿಯೆ	-	communication
ಗ್ರಾಂಥಿಕ ರೂಪ	–	written form/style
ಅನೌಪಚಾರಿಕ ಸನ್ನಿವೇಶ	–	informal situation
ಔಪಚಾರಿಕ ಸನ್ನಿವೇಶ	–	formal situation
ಸಮೂಹಮಾಧ್ಯಮ	–	mass media

ಅಭ್ಯಾಸಗಳು

I. ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಪದದಿಂದ ಭರ್ತಿ ಮಾಡಿ

ಅ. ಭಾರತದ .... ಭಾಷೆಗಳಲ್ಲಿ ಕನ್ನಡ ಭಾಷೆಯೂ ಒಂದು.

ಆ. ಛಾಂದಗ್ಯೋಪನಿಷತ್ತಿನಲ್ಲಿ ದೊರೆತಿರುವ ...., ... ಮುಂತಾದ ಶಬ್ದಗಳು ಕನ್ನಡ ಪದಗಳು.

ಇ. ಹಾಲರಾಜನ .... ಎಂಬ ಕೃತಿಯಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಗೆ ಸೇರದ ಕೆಲವು ಶಬ್ದಗಳಿವೆ.

ಈ. ಕ್ರಿ.ಶ. 3ನೇ ಶತಮಾನಕ್ಕೆ ಸೇರಿದ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ .... ಎಂಬ ಅಚ್ಚಗನ್ನಡ ಪದವಿದೆ.

ಕ. ನಮಗೆ ಸಿಕ್ಕಿರುವ ಮೊದಲ ಕನ್ನಡ ಬರವಣಿಗೆ ಕ್ರಿ.ಶ. 450 ರ ....

ಗ. ಕ್ರಿ.ಶ. 850 ರ .... ಎಂಬ ಕೃತಿಯೇ ಕನ್ನಡದ ಮೊಟ್ಟಮೊದಲ ಉಪಲಬ್ಧ ಕೃತಿ.

II. ಕೆಳಕಂಡ ಪದಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ

ಅ. ಪ್ರಾಚೀನ ....

ಆ. ಸ್ಪಷ್ಟ ....

ಇ. ವಿಶಾಲ ....

ಈ. ಔಪಚಾರಿಕ ....

ಕ. ಮೊಟ್ಟಮೊದಲು ....

ಗ. ವ್ಯವಸ್ಥೆ ....

III. ಟಿಪ್ಪಣಿ ಬರೆಯಿರಿ

ಅ. ಸಾಮಾಜಿಕ ಉಪಭಾಷೆಗಳು.

ಆ. ಕನ್ನಡಭಾಷೆಯ ಅವಸ್ಥಾಭೇದಗಳು.

IV. ಕೆಳಕಂಡ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಇಂದಿನ

ಆ. ಉಲ್ಲೇಖ

ಇ. ಅಚ್ಚಗನ್ನಡ

ಈ. ಬರವಣಿಗೆ

ಕ. ಇದಕ್ಕಿಂತಲೂ

ಗ. ಹಾಗೆಯೇ

ಚ. ಹೀಗೆ

ಜ. ಹೀಗೆಯೇ

ತ. ಒಳಗಾಗು

ದ. ಸ್ಥೂಲವಾಗಿ

V. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕನ್ನಡ ಭಾಷೆಯ ಪ್ರಾಚೀನತೆಯನ್ನು ಅರಿಯಲು ಇರುವ ಶಾಸನೇತರ ಆಧಾರಗಳು ಯಾವುವು?

ಆ. ಕನ್ನಡ ಭಾಷೆಯ ಪ್ರಾಚೀನತೆಯನ್ನು ನಿರ್ಧರಿಸುವುದಕ್ಕೆ ಶಾಸನಗಳಲ್ಲಿ ಸಿಗುವ ಆಧಾರಗಳಾವುವು?

ಇ. ಹಳಗನ್ನಡ ನಡುಗನ್ನಡವಾಗಿ ಮಾರ್ಪಡುವಾಗ ಉಂಟಾದ ಬದಲಾವಣೆಗಳಾವುವು?

ಈ. ಕನ್ನಡ ಭಾಷೆಯ ಪ್ರಾದೇಶಿಕ ಉಪಭಾಷೆಗಳಾವುವು?

ಕ. ಸಾಮಾಜಿಕ ಉಪಭಾಷೆ ಎಂದರೇನು ಎಂಬುದನ್ನು ಸೋದಾಹರಣವಾಗಿ ವಿವರಿಸಿ?

ಗ. ಶಿಷ್ಟಭಾಷೆ ಎಂದರೇನು?

VI. ನಿಮ್ಮ ಮಾತೃಭಾಷೆಯ ಬಗ್ಗೆ ಒಂದು ಪ್ರಬಂಧವನ್ನು ಬರೆಯಿರಿ

VII. ಕನ್ನಡಕ್ಕೆ ಅನುವಾದಿಸಿ

Happy is the man who acquires the habit of reading when he is young. He has secured a life-long source of pleasure, instruction and inspiration. So long as he has his beloved books, he need never feel lonely. He always has a pleasant occupation of leisure moments, so that he need never feel bored. He is the possessor of wealth more precious than gold. Ruskin calls books "Kings Treasuries" --- treasuries filled, not with gold and silver and precious stones, but with riches much more valuable than these --- knowledge, noble thoughts and rich ideals. Poor indeed is the man who does not read.

Books are the most faithful of friends. Our friends may change, or die; but our books are always patiently waiting to talk to us. They are never cross, peevish, or unwilling to converse, as our friends sometimes are. No wonder a reader becomes a "book-lover".

16. ಬೆಳಗು

ಮೂಡಲ ಮನೆಯ ಮುತ್ತಿನ ನೀರಿನ
ಎರಕsವ ಹೊಯ್ದಾ
ನುಣ್ಣನ್ನೆರಕsವ ಹೊಯ್ದಾ
ಬಾಗಿಲ ತೆರದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ – ಜಗವೆಲ್ಲಾ ತೊಯ್ದಾ
        ರನ್ನದ ರಸದಾ ಕಾರಂಜೀಯ
        ಪುಟಪುಟನೆ ಪುಟಿದು
        ತಾನೇ – ಪುಟಪುಟನೆ ಪುಟಿದು
        ಮಘಮಘೀಸುವಾ ಮುಗಿದ ಮೋಗ್ಗೀ
        ಪಟಪಟನೆ ಒಡೆದು
        ತಾನೆ – ಪಟಪಟನೇ ಒಡೆದು
ಎಲೆಗಳ ಮೇಲೆ ಹೂಗಳ ಒಳಗೇ
ಅಮೃತsದ ಬಿಂದು
ಕಂಡವು – ಅಮೃತsದ ಬಿಂದು
ಯಾರಿರಿಸಿರುವರು ಮುಗಿಲsಮೇಲಿಂ
ದಿಲ್ಲಿಗೇ ತಂದು
ಈಗ – ಇಲ್ಲಿಗೇ ತಂದು
        ತಂಗಾಳೀಯಾ ಕೈಯೊಳಗಿರಿಸೀ
        ಎಸಳೀನಾ ಚವರಿ

ಹೂವಿನ – ಎಸಳೀನಾ ಚವರಿ
ಹಾರಿಸಿಬಿಟ್ಟರು ದುಂಬಿಯ ದಂಡು
ಮೈಯೆಲ್ಲಾ ಸವರಿ
ಗಂಧಾ – ಮೈಯೆಲ್ಲಾ ಸವರಿ
ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು – ಹಕ್ಕಿಗಳಾ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನ ನಾಡು
ಕ್ಷಣದೊಳು – ಕಾಡಿನಾ ನಾಡು
ಕಂಡಿತುಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹಾ
ಸ್ಪರ್ಶಾ – ಪಡೆದೀತೀ ದೇಹಾ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ – ದೀ ಮನಸಿನ ಗೇಹಾ
ಅರಿಯದ ಅಳವು, ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ – ಕಾಣದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರೀತಣ್ಣಾ
ಇದು ಬರಿ – ಬೆಳಗಲ್ಲೋ ಅಣ್ಣಾ

– ಅಂಬಿಕಾತನಯದತ್ತ

ಕವಿ, ಕಾವ್ಯ ವಿಚಾರ

ಅಂಬಿಕಾತನಯದತ್ತ ಎಂಬುದು ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕಾವ್ಯನಾಮ. ಹುಟ್ಟಿದ್ದು 1896ರ ಜನವರಿ 31ರಂದು, ಧಾರವಾಡದಲ್ಲಿ. ಇವರು ನವೋದಯದ ಹಿರಿಯ ತಲೆಮಾರಿನ ಪ್ರಮುಖ ಕವಿಗಳಲ್ಲಿ ಒಬ್ಬರು. ನಾಟಕ, ವಿಮರ್ಶೆ, ಮೀಮಾಂಸೆ, ಸಣ್ಣಕತೆ ಮುಂತಾದ ಕ್ಷೇತ್ರಗಳಲ್ಲಿ ಕೃತಿ ರಚಿಸಿದ ಬೇಂದ್ರೆಯವರಿಗೆ ಆಧುನಿಕ ಕನ್ನಡ ಕಾವ್ಯಕ್ಷೇತ್ರದಲ್ಲಿ ಒಂದು ಪ್ರಮುಖಸ್ಥಾನವಿದೆ. ಕವಿತೆಯ ಸೀಮೆಯಲ್ಲಿ ಮಾತ್ರ ಬೇಂದ್ರೆಯಂತೆ ಬರೆಯುವವರು ಇನ್ನೊಬ್ಬರಿಲ್ಲ. ಒಂದು ಪೂರ್ಣ ಆಯುಷ್ಯವನ್ನು ಸಾರ್ಥಕವಾಗಿ, ಸಫಲವಾಗಿ ಯಾರ ಕಾವ್ಯದ ಅಭ್ಯಾಸಕ್ಕಾಗಿ ಮುಡುಪಿಡಬಹುದೋ ಅಂಥ (ಕನ್ನಡ) ಕವಿಗಳಲ್ಲಿ ಬೇಂದ್ರೆಯವರು ಅಗ್ರಸ್ಥಾನದಲ್ಲಿದ್ದಾರೆ. ಕೃಷ್ಣಕುಮಾರಿ ಅವರ ಪ್ರಕಟಿತ ಮೊದಲ ಕವನ. ನಾದಲೀಲೆ, ಗರಿ, ಉಯ್ಯಾಲೆ, ಸಖೀಗೀತ, ಅರಳುಮರಳು, ನಾಕುತಂತಿ, ಇದು ನಭೋವಾಣಿ ಮುಂತಾದವು ಅವರ ಕವನ ಸಂಕಲನಗಳು. ಸಾಯೋಆಟ, ದೆವ್ವದಮನೆ, ಹೊಸಸಂಸಾರ ಮುಂತಾದವು ಬೇಂದ್ರೆಯವರ ಕಥಾಸಂಕಲನಗಳು. ಸಂವಾದ, ವಿಠಲ ಸಂಪ್ರದಾಯ, ಶಾಂತಲಾ – ಇವರ ಮರಾಠಿಕೃತಿಗಳು. ಇವರ ಅರಳು–ಮರಳು ಕಾವ್ಯಸಂಕಲನಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1973ರಲ್ಲಿ ನಾಕುತಂತಿ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ, ವಿಶ್ವ ವಿದ್ಯಾನಿಲಯಗಳಿಂದ ಗೌರವ ಡಿ.ಲಿಟ್ ಪ್ರಶಸ್ತಿಗಳು ಸಂದಾಯವಾಗಿವೆ.

ಈ ಕವನವನ್ನು `ಗರಿ' ಎಂಬ ಕಾವ್ಯ ಸಂಕಲನದಿಂದ ಆರಿಸಕೊಳ್ಳಲಾಗಿದೆ. ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯೋದಯದ ವರ್ಣನೆಯೇ ಈ ಕವನದ ವಸ್ತು. ಬೇಂದ್ರೆಯವರಿಗೆ ಸೂರ್ಯೋದಯ ಮೂಡಲಮನೆಯಾಗಿ ಕಂಡಿದೆ. ಆ ಮುತ್ತಿನ ಮನೆಯ ಬಾಗಿಲು ತೆರೆದ ಕೂಡಲೇ, ಚಿನ್ನದಂತೆ ಹೊಳೆಯುವ ಬೆಳಕು ಇಡೀ ಜಗತ್ತನ್ನೇ ತೋಯಿಸುವಷ್ಟರಮಟ್ಟಿಗೆ ಎಲ್ಲೆಡೆಯೂ ಆವರಿಸುತ್ತದೆ. ಬೆಳಗಿನ ಹುಲ್ಲು, ಎಲೆ, ಹೂವುಗಳ ಮೇಲಿನ ಇಬ್ಬನಿ ಹನಿಗಳು, ಗಿಡ ಗಂಟೆಯ

ಕೊರಳೊಳಗಿಂದ ಬರುವ ಸಮೂಹ ಗಾನದಿಂದ ಈ ನಾಡನ್ನು ಗಂಧರ್ವರ ಸೀಮೆಯಾಗಿ ಮಾರ್ಪಡಿಸಿದ ಪ್ರಕೃತಿಯ ರಂಗುರಂಗಿನ ಚೆಲುವನ್ನು ತಮ್ಮ ಪ್ರತಿಭಾ ಶಕ್ತಿಯಿಂದ ಅದ್ಭುತವಾಗಿ ವರ್ಣಿಸಿದ್ದಾರೆ ಕವಿ.

ಕಠಿಣಪದಗಳ ಅರ್ಥ

ಮೂಡಲು	–	east
ಎರಕ ಹೊಯ್ಯು	–	to cast metal into a mould
ಬೆಳಕುಹರಿ	–	to dawn, to begin to grow light
ತೋಯು	-	to be drenched
ಪುಟಿ	–	to bumps up
ಅಮೃತ	-	nectar, Ambrosia
ಬಿಂದು	–	drop
ಎಸಳು	–	petel
ದುಂಬಿ	–	bee
ದಂಡು	–	group, host
ಗಂಧ	–	fragrance, aroma
ಕೊರಳು	–	the throat, voice
ಸೀಮೆ	–	land, region
ಮೂಸು	-	to smell
ತನ್ಮಯ	–	engrossment
ಅಳವು	–	measure
ಮೈದೂರು	–	to appear

ಅಭ್ಯಾಸಗಳು

I. ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. .... ಮನೆಯ .... ನೀರಿನ

...............ಹೊಯ್ದಾ

ಆ. ಮಘಮಘೀಸುವಾ .... ಮೊಗ್ಗೀ

............ಒಡೆದು

ಇ. .... ಕೊರಳೊಳಗಿಂದ

ಹಕ್ಕಿಗಳಾ ....

ಈ. ....ಪ್ರೀತಿಯಿಂದಾ

....

ಇದು ಬರಿ .... ಅಣ್ಣಾ

II. ಕೆಳಕಂಡವುಗಳ ಸ್ವಾರಸ್ಯವನ್ನು ವಿವರಿಸಿ

ಅ. ಯಾರಿರಿಸಿರುವರು ಮುಗಿಲಃ ಮೇಲಿಂ

ದಿಲ್ಲಿಗೇ ತಂದು

ಆ. ತಂಗಾಳೀಯಾ ಕೈಯೊಳಗಿರಿಸೀ

ಎಸಳೀನಾ ಚವರಿ

ಹೂವಿನ – ಎಸಳೀನಾ ಚವರಿ

ಇ. ಗಂಧರ್ವರಾ ಸೀಮೆಯಾಯಿತು

ಕಾಡಿನ ನಾಡು

III. ಪುಟಪುಟನೆ, ಪಟಪಟನೆ – ಇವು ಅನುಕರಣ ಶಬ್ದಗಳು. ನಿಮಗೆ ಗೊತ್ತಿರುವ ಯಾವುದಾದರೂ 10 ಅನುಕರಣ ಶಬ್ದಗಳನ್ನು ಪಟ್ಟಿಮಾಡಿ

IV. ವಾಕ್ಯದಲ್ಲಿ ಪ್ರಯೋಗಿಸಿ

ಅ. ಎರಕ	ಕ. ಬೆಳಗು
ಆ. ಕಾರಂಜಿ	ಗ. ಮಘಮಘಿಸು
ಇ. ಚವರಿ	ಚ. ಹಾರಿಸಿಬಿಡು
ಈ. ತನ್ಮಯ	ಜ. ಮೈದೋರು

V. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಬೆಳಕು ಹರಿದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

ಆ. ಕ್ಷಣವೊಂದರಲ್ಲಿ ಕಾಡಿನ ನಾಡು ಗಂಧರ್ವರ ಸೀಮೆಯಾದದ್ದು ಹೇಗೆ?

ಇ. ಪಂಚೇಂದ್ರಿಯಗಳಿಗೆ ಬೆಳಗಿನ ಸ್ಪರ್ಶ ಹೇಗೆ ಉಂಟಾಯಿತು?

ಈ. ಇದು ಬರಿ ಬೆಳಗಲ್ಲೊ ಅಣ್ಣಾ ಎನ್ನುತ್ತ ಕವಿ ವಿಸ್ಮಯಗೊಂಡದ್ದನ್ನು ವರ್ಣಿಸಿ?

ಕ. ಬೆಳಗು ಪದ್ಯದ ಭಾವವನ್ನು ವಿವರಿಸಿ?

VI. ನೀವು ನೋಡಿದ ಬೆಳಗು, ಅದು ನೀಡಿದ ಮುದವನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ

VII. ಕನ್ನಡಕ್ಕೆ ಅನುವಾದಿಸಿ

One of the most colourful writers of this country, a poet who mesmerised large audience with his magical rhythms, a poet who broke new ground, a charismatic taken to whom people would listen for hours, a poet who became immediately the centre of attraction wherever he went.

He was born at Dharwar on 31-1-1896. While he studied at Ferguson College, Poona, upto 1918, he was

a member of a literroup "Sharada Mandala". He started his career as a te: at Dharwar Victoria High School. He married Lakshı in 1919, and his first publication "Krishna Kumari, rative poem, appeared in 1922. In 1925, at Belgaumerence of Kannada writers he read his poem "Hakki rutide NooDidiraa" and became a celebrity.

Bendre hadre under the influence of English Romantic poets, T: and Aurobindo. He wrote about the beauty of nature, between man and women, patriotism and the joys and scs of his personal life.

Bendre is m known as a poet, and it was for his poems, `Naaku Tathat he won the Jnanapith Award in 1974.

Dattatreya Rhandra Bendre died on October 29, 1981.

17. ಚಿತ್ರದುರ್ಗ

ಇತಿಹಾಸ ಪ್ರಸಿದ್ಧ ಸ್ಥಳ ಚಿತ್ರದುರ್ಗ ಬೆಂಗಳೂರು-ಪುಣೆ ಹೆದ್ದಾರಿಯಲ್ಲಿ ಬೆಂಗಳೂರಿನಿಂದ 200 ಕಿ.ಮೀ ದೂರದಲ್ಲಿ ಇದೆ. ಕರ್ನಾಟಕದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಯಾವುದೇ ದಿಕ್ಕಿನಿಂದ ಹೊರಟರೂ ಸೇರುವುದು ಕರ್ನಾಟಕದ ಕಟಿ ಪ್ರದೇಶದಲ್ಲಿರುವ ಚಿತ್ರದುರ್ಗವನ್ನೇ. ಇಡೀ ಕರ್ನಾಟಕದ ಎಲ್ಲ ವೈವಿಧ್ಯಗಳೂ ಸಂಗಮಿಸಿರುವ ಜಿಲ್ಲೆ ಚಿತ್ರದುರ್ಗ.

ಚಿತ್ರದುರ್ಗವನ್ನು ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ನೊಳಂಬ ಪಲ್ಲವರು, ಹೊಯ್ಸಳರು, ವಿಜಯನಗರದ ಅರಸರುಗಳು ಆಳಿದ್ದರೂ ಅದು ಪ್ರವರ್ಧಮಾನಕ್ಕೆ ಬಂದದ್ದು ವಿಜಯನಗರಕ್ಕೆ ಅಧೀನರಾಗಿದ್ದು ವಿಜಯನಗರದ ಪತನಾನಂತರ ಸ್ವತಂತ್ರರಾದ ಪಾಳೆಯಗಾರರಿಂದ. ಚಿತ್ರದುರ್ಗದ ಪಾಳೆಯಗಾರನಾಗಿದ್ದ ಓಬಣ್ಣನಾಯಕನು ಮದಿಸಿದ ಆನೆಯೊಂದು ವಿಜಯನಗರದ ರಾಜಬೀದಿಯಲ್ಲಿ ಹಾವಳಿ ನಡೆಸಿದಾಗ ಅದನ್ನು ಹಿಡಿದು ನಿಲ್ಲಿಸಿದನಂತೆ. ಆದುದರಿಂದ ಅವನಿಗೆ `ಮದಕರಿನಾಯಕ' ಎಂಬ ಹೆಸರು ಬಂದಿತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಚಿತ್ರದುರ್ಗವನ್ನು ಆಳಿದ ಪಾಳೆಯಗಾರರಲ್ಲಿ ಅತ್ಯಂತ ಪರಾಕ್ರಮಿಯಾದ ಕಿರಿಯ ಮದಕರಿನಾಯಕನ ಕಾಲದಲ್ಲಿ ಚಿತ್ರದುರ್ಗ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿ ಒಂದು ಬಲಿಷ್ಠ ರಾಜ್ಯವಾಯಿತು.

ಬಂಡೆಗಳ ಮೇಲೆ ಬಂಡೆಗಳನ್ನು ಪೇರಿಸಿಟ್ಟಂತಿರುವ ಚಿತ್ರದುರ್ಗದ ಬೆಟ್ಟ, ಈ ಬೆಟ್ಟವನ್ನು ಸುತ್ತುವರಿದಂತೆ ನಿರ್ಮಿಸಿದ ಕೋಟೆಸಾಲುಗಳು, ಬುರುಜು ಬತೇರಿಗಳು, ಗುಡಿಗೋಪುರಗಳು, ಮುಖಮಂಟಪಗಳು ಐತಿಹಾಸಿಕ ಮಹತ್ವವನ್ನು ಪಡೆದಿವೆ. ಇಂದಿಗೂ ಜನರು ಬೆಟ್ಟದಮೇಲೆ, ಕೋಟೆ ಬತೇರಿಗಳ ಮೇಲೆ, ಬೆಟ್ಟದ ತಪ್ಪಲಿನಲ್ಲಿ, ಕೆರೆಯಂಚಿನಲ್ಲಿ, ಕೋಡುಗಲ್ಲುಗಳ ನೆರಳಿನಲ್ಲಿ, ನೆಲಮಾಳಿಗೆಗಳಲ್ಲಿ, ದೇವಗಣಿಗಲೆ – ಬಿಲ್ವಪತ್ರೆ ಮರಗಳ ನೆರಳಿನಲ್ಲಿ ಮೈಮರೆತು ನೋಡುತ್ತಾ

ಚಿತ್ರದುರ್ಗದ ಗತವೈಭವವನ್ನು ಸ್ಮೃತಿಪಟಲದಲ್ಲಿ ತಂದುಕೊಳ್ಳಲು 200-250 ವರ್ಷಗಳ ಹಿಂದಕ್ಕೆ ಹೋಗುತ್ತಾರೆ.

ಚಿತ್ರದುರ್ಗಕ್ಕೆ ಚಿತ್ರಕಲ್‌ದುರ್ಗ, ಬೆಮ್ಮತ್ತನ ಕಲ್ಲು ಎಂಬ ಹೆಸರುಗಳಿದ್ದವು. ಹಿಂದೆ ಚಿತ್ರದುರ್ಗಪಟ್ಟಣ ಬಂಡೆಗಳಿಂದ ಆವೃತ್ತವಾಗಿದ್ದ ಬೆಟ್ಟದ ಮೇಲೆ ಇತ್ತು. ಇಡೀ ಬೆಟ್ಟವನ್ನೇ ಬಳಸಿನಿಂತಂತೆ ಮೂರು ಕೋಟೆಗಳಿದ್ದು ಬೃಹದಾಕಾರದ ಬಂಡೆಗಳಿಂದ ಆವೃತವಾದ ಬೆಟ್ಟದ ಮೇಲೆ ನಾಲ್ಕು ಸುತ್ತಿನಕೋಟೆ ಇದೆ.

ಚಿತ್ರದುರ್ಗದ ಮುಖ್ಯ ಆಕರ್ಷಣೆ ಎಂದರೆ ಅಲ್ಲಿಯ ಕೋಟೆ, ಕೋಟೆಯೊಳಗಿರುವ ದೇವಾಲಯಗಳು ಮತ್ತು ಶತ್ರುಗಳ ದಾಳಿಗೆ ಸಿಕ್ಕಿಯೂ ಸಂಪೂರ್ಣ ನಾಶವಾಗದೆ ಉಳಿದಿರುವ ಅವಶೇಷಗಳು. ಮೊದಲನೆಯ ಕೋಟೆಗೆ ನಾಲ್ಕೂ ದಿಕ್ಕುಗಳಲ್ಲೂ ನಾಲ್ಕು ಬಾಗಿಲುಗಳು ಇವೆ. ಪೂರ್ವಕ್ಕೆ ರಂಗಯ್ಯನ ಬಾಗಿಲು, ಪಶ್ಚಿಮಕ್ಕೆ ಉಚ್ಚಂಗಿ ಅಥವಾ ಸಿಹಿನೀರು ಹೊಂಡದ ಬಾಗಿಲು, ಉತ್ತರಕ್ಕೆ ಸಿದ್ದಯ್ಯನ ಬಾಗಿಲು, ದಕ್ಷಿಣಕ್ಕೆ ಲಾಲ್‌ಕೋಟೆಗಳಿವೆ.

ರಂಗಯ್ಯನ ಬಾಗಿಲಿನ ಮೂಲಕ ಒಳಹೊಕ್ಕರೆ ರಾಜಮಾರ್ಗದ ಕೊನೆಯಲ್ಲಿ ಉತ್ಸವಾಂಬ ಅಥವಾ ಉಚ್ಚಂಗಮ್ಮ ದೇವಾಲಯ ಸಿಗುತ್ತದೆ. ಈ ಐದಂತಸ್ತಿನ ಭವ್ಯ ದೇವಾಲಯವನ್ನು ಕಟ್ಟಿಸಿದವನು ಪಾಳೆಯಗಾರ ಬಿಚ್ಚುಗತ್ತಿ ಭರಮಣ್ಣನಾಯಕ. ಉತ್ಸವಾಂಬ ದೇವಾಲಯದ ಹಿಂಭಾಗಕ್ಕೆ ಹೊಂದಿಕೊಂಡಂತೆ ಎರಡನೆಯ ಕೋಟೆ ಇದೆ. ಈ ಕೋಟೆಯನ್ನು ಅನುಸರಿಸಿ ಮುಂದೆ ಹೋದರೆ ಕಾಮನ ಬಾಗಿಲು ಸಿಗುತ್ತದೆ. ಕಾಮನ ಬಾಗಿಲೇ ಬೆಟ್ಟದ ಮೇಲಕ್ಕೆ ಹೋಗುವ ಮಹಾದ್ವಾರ. ಈ ಬಾಗಿಲು ಹಾಗೂ ಅದನ್ನು ಅನುಸರಿಸಿ ಕಟ್ಟಿರುವ ಕೋಟೆ ಗೋಡೆ, ಒಂದೊಂದೂ ವಾಸ್ತುಶಿಲ್ಪದ ಅಪೂರ್ವ ಮಾದರಿಗಳು. ಮೂರು ಮೈಲಿ ದೂರದಲ್ಲಿ ನಿಂತು ಯಾವ ಕೋನದಿಂದ ಫಿರಂಗಿ ಉಡಾಯಿಸಿದರೂ ಈ ಬಾಗಿಲಿಗೆ ತಾಗುವುದಿಲ್ಲ. ಕಾಮನ ಬಾಗಿಲಿನ ಅಕ್ಕಪಕ್ಕದ ಕೋಟೆಯ ಗೋಡೆಗಳ ತೆನೆಗಳಲ್ಲಿ ಅಡಗಿ ಕುಳಿತ ರಕ್ಷಣಾ ದಳದವರ ಆಯುಧಗಳ ಏಟಿನಿಂದ ತಪ್ಪಿಸಿಕೊಂಡು ಒಳಗೆ

ಹೋಗುವುದು ಎಂತಹ ಚಾಣಾಕ್ಷ ಯೋಧನಿಗೂ ಒಂದು ಸವಾಲು. ಈ ಬಾಗಿಲಿಗೆ ಹುಲಿಮುಖದ ಬಾಗಿಲು ಎಂಬ ಅನ್ವರ್ಥನಾಮವೂ ಇದೆ. ಈ ಬಾಗಿಲು ದಾಟಿದರೆ ಮತ್ತೆ ಎದುರಿಗೆ ಗೋಡೆ, ಬಲಕ್ಕೆ ತಿರುಗಿದರೆ ಗೋಡೆ, ನಾಲ್ಕು ಹೆಜ್ಜೆ ಮುಂದೆ ಹೋಗಿ ಎಡಕ್ಕೆ ತಿರುಗಿದರೆ ಪುನಃ ಅಡ್ಡಗೋಡೆ, ಬಲಕ್ಕೆ ತಿರುಗಿ ಸ್ವಲ್ಪ ದೂರ ಹೋದರೆ ಇನ್ನೊಂದು ಬಾಗಿಲು. ಇದು ಚಿತ್ರಬಿಮ್ಮನ ಕೋಟೆ, ನೇರವಾಗಿ ಒಳಗೆ ಹೋಗುವಂತೆಯೇ ಇಲ್ಲ. ಈ ಬಾಗಿಲನ್ನು ದಾಟಿದರೆ ಎರಡು ಪಕ್ಕಗಳಲ್ಲೂ ವಿಶಾಲ ಬಯಲು ಪ್ರದೇಶ. ಬಯಲಿನಲ್ಲಿ ಮದ್ದನ್ನು ಅರೆಯಲು ಉಪಯೋಗಿಸುತ್ತಿದ್ದ ನಾಲ್ಕು ಬೃಹದ್ಗಾತ್ರದ ಬೀಸುವಕಲ್ಲುಗಳನ್ನು ಕಾಣಬಹುದು. ಮನುಷ್ಯಮಾತ್ರರು ಬೀಸಲು ಆಗುವುದಿಲ್ಲ. ಈ ನಾಲ್ಕು ಬೀಸುವ ಕಲ್ಲುಗಳಿಗೂ ಮಧ್ಯದಲ್ಲಿ ಒಂದು ತಿರುಗುಗಾಲಿ ಇದ್ದು ಅದನ್ನು ಆನೆಗಳಿಂದ ತಿರುಗಿಸುವ ಮೂಲಕ ಒಂದೇಬಾರಿಗೆ ನಾಲ್ಕು ಬೀಸುವಕಲ್ಲುಗಳೂ ಬೀಸುತ್ತಿದ್ದವು. ಇಲ್ಲಿಂದ ರಾಜಮಾರ್ಗದಲ್ಲೇ ಸ್ವಲ್ಪ ಮುಂದೆ ಹೋಗಿ ಬಲಕ್ಕೆ ತಿರುಗಿ ಉತ್ತರಕ್ಕೆ ಹೋದರೆ ಬಸವನ ಬುರುಜು ಸಿಗುತ್ತದೆ. ಇದು ಭಾರಿ ಬುರುಜು. ಇದರ ಮೇಲೆ ಹತ್ತಿ ನಿಂತರೆ ಊರಿಗೆ ಊರೇ ಕಾಣುತ್ತದೆ. ಪುನಃ ರಾಜಮಾರ್ಗವನ್ನು ಸೇರಿ ಸ್ವಲ್ಪ ಮುಂದೆ ಹೋಗಿ ನಾಲ್ಕಾರು ಮೆಟ್ಟಿಲುಗಳನ್ನು ಏರಿದರೆ ಪರ್ಶಿಯನ್ ವಾಸ್ತುಶಿಲ್ಪದ ಮಾದರಿಯಲ್ಲಿ ಕಟ್ಟಿದ ಒಂದು ಕಮಾನು ಸಿಗುತ್ತದೆ. ಕಮಾನಿನ ಬಾಗಿಲನ್ನು ಟಾಕಿನ ಬಾಗಿಲು ಎಂದು ಕರೆಯುತ್ತಾರೆ. ಇದು ಬಹಳ ಇಕ್ಕಟ್ಟಾದ ಆಯಕಟ್ಟಿನ ಸ್ಥಳದಲ್ಲಿ ನಿರ್ಮಿಸಿದ ಬಾಗಿಲು. ಈ ಬಾಗಿಲಿನ ವೈಶಿಷ್ಟ್ಯವೆಂದರೆ ಶತ್ರುಸೈನ್ಯ ಬಂದಲ್ಲಿ ಅದು ಒಳಗೂ ಹೋಗದಂತೆ ಹೊರಗೂ ಬಾರದಂತೆ ಮಾಡಿ ನಾಲ್ಕು ಕಡೆಗಳಿಂದಲೂ ಗುಂಡಿನ ಮಳೆಗರೆದು ಶತ್ರುವಿನ ನಾಶ ಮಾಡಲು ಅನುಕೂಲವಾಗುವಂತೆ ನಿರ್ಮಿತವಾಗಿರುವುದು. ಈ ಬಾಗಿಲಿಗೆ ಸೇರಿದಂತಿರುವ ಮಂಟಪದ ಮೂಲಕ ಸ್ವಲ್ಪ ದೂರ ಹೋದರೆ ಆನೆಯ ಬೆನ್ನಿನ ಮೇಲೆ ಕುಳಿತಂತಿರುವ ಹಿಡಿಂಬೇಶ್ವರ ದೇವಾಲಯ, ಅಷ್ಟು ದೂರಕ್ಕೆ ಕಾಣುವ ಉಯ್ಯಾಲೆ ಕಂಬ, ದೀಪದ ಕಂಬ, ಅದರ ಎದುರೇ ಏಕನಾಥೇಶ್ವರಿಯ

ದೇವಾಲಯ. ಕೋಡುಗಲ್ಲುಗಳನ್ನು ಬಳಸಿಕೊಂಡೇ ಈ ದೇವಾಲಯವನ್ನು ಕಟ್ಟಲಾಗಿದೆ. ಏಕನಾಥೇಶ್ವರಿ ಪಾಳೆಯಗಾರರ ಮನೆ ದೇವತೆ, ದುರ್ಗದ ಅಧಿದೇವತೆ.

ಹಿಡಿಂಬೇಶ್ವರ ದೇವಾಲಯದ ವಿಶಾಲ ಬಯಲಿನಲ್ಲೇ ಬಲಗಡೆ ಮುರಘೀಮಠ, ಎದುರುಗಡೆ ಸಂಪಿಗೆ ಸಿದ್ದೇಶ್ವರ ದೇವಾಲಯದ ಹಿಂದೆಯೇ ಒಂದು ಸ್ವಾಭಾವಿಕ ಗುಡ್ಡ ಮೇಲೆದ್ದುನಿಂತಿದೆ. ಈ ಗುಡ್ಡದ ಮೇಲಿರುವ ಬತೇರಿಯೇ ಕಹಳೆ ಬತೇರಿ. ಇದರ ಮೇಲೆ ಹತ್ತಿನಿಂತು ಸುತ್ತಲ ಪರಿಸರವನ್ನು ನೋಡಿ ಆನಂದಿಸುವುದೇ ಕಣ್ಣಿಗೆ ಹಬ್ಬ. ಬತೇರಿಯಿಂದ ಕೆಳಗೆ ಇಳಿದು ಕಲ್ಲು ಗುಂಡುಗಳ ಮಧ್ಯೆ ಸ್ವಲ್ಪ ದೂರ ಕ್ರಮಿಸಿದಲ್ಲಿ ಒಂದು ಮಂಟಪದಂತೆ ಕಾಣಿಸುವ ಕಲ್ಲಿನ ಕಟ್ಟಡ ಸಿಗುತ್ತದೆ. ಇದು ತುಪ್ಪದ ಕೊಳ. ಮಂಟಪದ ಸಣ್ಣ ಬಾಗಿಲಿನಲ್ಲಿ ಮೆಲ್ಲಗೆ ಬಗ್ಗಿ ಒಳಗೆ ಹೋದರೆ ಒಂದು ಬಾವಿ ಕಾಣುವುದು. ಬಾವಿಗೆ ಇಳಿಯಲು 35-40 ಮೆಟ್ಟಿಲುಗಳು. ಇದರಲ್ಲಿ ತುಪ್ಪ ತುಂಬುತ್ತಿದ್ದರೆಂದೇಇದಕ್ಕೆ ತುಪ್ಪದ ಕೊಳ ಎಂದು ಹೆಸರು. ಇಲ್ಲಿಂದ ಮುಂದೆ ಸಿಗುವುದು ಗೋಪಾಲಸ್ವಾಮಿ ಹೊಂಡ. ಹೊಂಡದ ಮೇಲ್ಭಾಗದಲ್ಲಿ ಕಾಣುವ ವಿಶಾಲ ವೇದಿಕೆಯ ಮೇಲಿದೆ ಗೋಪಾಲಸ್ವಾಮಿ ದೇವಾಲಯ. ಬೆಟ್ಟದ ಮೇಲಿರುವ 14 ದೇವಾಲಯಗಳಲ್ಲಿ ಇದೇ ಅತ್ಯಂತ ದೊಡ್ಡದು. ಇಲ್ಲಿಂದ ಕೆಳಗೆ ಇಳಿದರೆ ಮೊದಲು ಸಿಗುವುದೇ ಏಳನೆಯ ಬಾಗಿಲು. ಶತ್ರುಸೈನ್ಯ ಅರಮನೆಗೆ ಮುತ್ತಿಗೆ ಹಾಕಬೇಕಾದರೆ ರಂಗಯ್ಯನ ಬಾಗಿಲಿನಿಂದ ಏಳು ಬಾಗಿಲುಗಳನ್ನು ದಾಟಿಯೇ ಇಲ್ಲಿಗೆ ಬರಬೇಕು. ಏಳನೆಯ ಬಾಗಿಲಿನ ಮೂಲಕ ಹೊರಗೆ ಹೋದಾಗ ದಾರಿಯ ಎಡಬಲದಲ್ಲಿ ಕಾಣುವ ಜೋಡಿ ಹೊಂಡಗಳನ್ನು ಅಕ್ಕತಂಗಿಯರ ಹೊಂಡ ಎಂದು ಕರೆಯುತ್ತಾರೆ. ಈ ಹೊಂಡಗಳನ್ನು ದಾಟಿ ಮುಂದೆ ಹೋದರೆ ಆಂಜನೇಯನ ಗುಡಿ ಸಿಗುತ್ತದೆ. ಇದರ ಎಡಗಡೆ ಕಲ್ಲು ಬಂಡೆಗಳ ಇಕ್ಕಟ್ಟಾದ ದಾರಿಯಲ್ಲಿ ತೆವಳಿಕೊಂಡು ಹೋದರೆ ಒಬ್ಬೊಬ್ಬರೇ ತೂರಿ ಕೋಟೆಯಿಂದ ಹೊರಗೆ ಹೋಗುವಷ್ಟು ಜಾಗ ಇರುವ ಒಂದು ಕಿಂಡಿ ಇದೆ. ಇದೇ `ಓಬವ್ವೆಯ ಒನಕೆ ಕಿಂಡಿ'.

ಚಿತ್ರದುರ್ಗದ ಕೋಟೆಕೊತ್ತಲಗಳ ಗುಡಿಗೋಪುರಗಳ ವಿಷಯ ಇಲ್ಲಿಗೇ ಮುಗಿಯುವುದಿಲ್ಲ. ಬೆಟ್ಟದ ಮೂಲೆಮೂಲೆಗಳಲ್ಲೂ ಗುಹೆಗಳು, ಗುಹೆಯೊಳಗಿನ ಗುಹೆಗಳು, ಸುರಂಗಮಾರ್ಗಗಳು, ಕಳ್ಳದಾರಿಗಳು, ನೆಲಮಾಳಿಗೆಗಳು, ಸಣ್ಣಪುಟ್ಟ ದೇವಾಲಯಗಳು. ಎಲ್ಲಕ್ಕಿಂತಲೂ ಹೆಚ್ಚಾಗಿ ನೀರಿನ ಸಂಗ್ರಹಣೆಗಾಗಿ ಮಾಡಿಕೊಂಡಿದ್ದ ವ್ಯವಸ್ಥೆ ಅಪೂರ್ವವಾದದ್ದು. ಕೆಳದುರ್ಗದ ಸುತ್ತಮುತ್ತಲಿರುವ ಅನೇಕ ಹೊಂಡಗಳಲ್ಲಿ ನೀರನ್ನು ಸಂಗ್ರಹಿಸಿ ಇಡುತ್ತಿದ್ದ ರೀತಿ ಅದ್ಭುತ. ದಕ್ಷಿಣದ ಜೋಗಿಮಟ್ಟಿಯಿಂದ ಹೊರಹರಿದು ಬರುತ್ತಿದ್ದ ನೀರನ್ನು ದೊಡ್ಡಣ್ಣನ ಕೆರೆಯಲ್ಲಿ ಸಂಗ್ರಹಿಸಿ ಇಡಲಾಗುತ್ತಿತ್ತು. ಅಲ್ಲಿ ಕೋಡಿ ಬಿದ್ದು ಹರಿದ ನೀರು ತಿಮ್ಮಣ್ಣನಾಯಕನ ಕೆರೆಗೆ ಬರುತ್ತಿತ್ತು. ಅಲ್ಲಿಂದ ಸಣ್ಣ ಕೆರೆಗಳಿಗೆ ಹರಿಯುವ ವ್ಯವಸ್ಥೆ ಮಾಡಲಾಗಿತ್ತು. ಮೇಲುದುರ್ಗದಲ್ಲಿ ಬೀಳುವ ಒಂದೊಂದು ಮಳೆಯ ಹನಿ ನೀರೂ ವ್ಯರ್ಥವಾಗದ ರೀತಿಯಲ್ಲಿ ಒಂದರ ಕೆಳಗೆ ಒಂದರಂತೆ ಇರುವ ಗೋಪಾಲಸ್ವಾಮಿ ಹೊಂಡ, ಅಕ್ಕತಂಗಿಯರ ಹೊಂಡ, ಸಿಹಿನೀರು ಹೊಂಡ ಮತ್ತು ಸಂತೆ ಹೊಂಡಗಳಲ್ಲಿ ಸಂಗ್ರಹವಾಗುತ್ತಿತ್ತು. ಅಂದಿನ ಚಿತ್ರದುರ್ಗ ಎಂದೂ ನೀರಿನ ಬರ ಕಾಣಲಿಲ್ಲ.

ಪರಕೀಯರ ದಾಳಿ, ಒಳಸಂಚು, ಆಂತರಿಕ ಕಲಹದಿಂದಾಗಿ ಸಬಲ, ಸಮೃದ್ಧ ಚಿತ್ರದುರ್ಗವೂ ದುರ್ಗಾಸ್ತಮಾನವನ್ನು ಕಂಡಿತು.

ಕಠಿಣಪದಗಳ ಅರ್ಥ

ಹೆದ್ದಾರಿ	–	highway
ಕಟಿ	–	waist
ಸಂಗಮಿಸು	–	come together, to meet
ಪತನ	–	fall, decline
ರಾಜಬೀದಿ	–	royal path
ಬಂಡೆ	-	rock

ಬುರುಜು	–	a rampart
ಬತೇರಿ	–	battery
ಮುಖಮಂಟಪ	–	the portico
ಬೆಟ್ಟದತಪ್ಪಲು	–	foot hill, the slope of the mountain or hill
ಕೋಡುಗಲ್ಲು	–	the top-stone
ನೆರಳು	–	shade, shadow
ಮೈಮರೆ	–	to forget oneself; to be absorbed
ಸ್ಮೃತಿಪಟಲ	–	memory screen
ಬಳಸು	–	encircle
ಒಳಹೊಗು	–	to enter
ಮಹಾದ್ವಾರ	–	main entrance
ಕೋನ	–	angle
ಫಿರಂಗಿ	–	cannon
ಮದ್ದು	–	gun powder
ಬೀಸುವಕಲ್ಲು	–	mill stone
ಆಯಕಟ್ಟು	–	strategic (place)
ಕಹಳೆ	–	trumpet
ಕ್ರಮಿಸು	–	to traverse (a distance)
ತುಪ್ಪ	–	ghee
ಕೊಳ	–	pond
ಬಾವಿ	–	well
ಜೋಡಿ	–	pair
ಹೊಂಡ	–	natural pond, a pit
ಇಕ್ಕಟ್ಟು	–	narrow

ಒಳಸಂಚು – conspiracy

ಪರಕೀಯರು – outsiders; aliens

ಆಂತರಿಕ ಕಲಹ – internal strife

ಅಭ್ಯಾಸಗಳು

I. ಬಿಡಿಸಿ ಬರೆಯಿರಿ

ಅ. ಬೃಹದಾಕಾರ

ಆ. ಪೇರಿಸಿಟ್ಟಂತಿರುವ

ಇ. ನಾಶವಾಗದೆ

ಈ. ತುಂಬುತ್ತಿದ್ದರೆಂದೇ

ಕ. ಗುಹೆಯೊಳಗಿನ

ಗ. ಒಬ್ಬೊಬ್ಬರೇ

II. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಒಂದುಬಾರಿ, ಒಂದೊಂದು, ನಾಲ್ಕೂಕಡೆ, ಕಿಂಡಿ, ಇಕ್ಕಟ್ಟು, ಹಾವಳಿ)

ಅ. ನೀನು ತೋಟದಲ್ಲೆಲ್ಲಾ .... ಮಾಡಿದರೆ ಏಟು ಕೊಡ್ತೀನಿ.

ಆ. ಆ ಕೆಲಸ ಮಾಡಬೇಡ ಅಂತ ನಾನು ನಿನಗೆ ....ಮಾತ್ರ ಹೇಳ್ತೀನಿ.

ಇ. ನಮ್ಮ ಮನೆಯ ಬಾಗಿಲಿನಲ್ಲಿ ಒಂದು ....ಇದೆ.

ಈ. ಬೇಸಿಗೆಯಲ್ಲಿ ರಾಜಾಸ್ಥಾನದ ಕೆಲವು ಹಳ್ಳಿಗಳಲ್ಲಿ .... ಹನಿ ನೀರಿಗೂ ಪರದಾಟ.

ಕ. ಈ ಜಾಗ ತುಂಬ ....

ಗ. ಆ ಬಂಗಲೆಯ .... ರಸ್ತೆಗಳಿವೆ.

III. ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ನೀರಿನ ....ಮಾಡಿಕೊಂಡಿದ್ದ ವ್ಯವಸ್ಥೆ ಅಪೂರ್ವವಾದದ್ದು (ಸಂಗ್ರಹಣೆ).

ಆ. ಬೆಟ್ಟದ ಮೇಲಿರುವ 14 ದೇವಾಲಯಗಳಲ್ಲಿ ಗೋಪಾಲಸ್ವಾಮಿ ದೇವಾಲಯವೇ ಅತ್ಯಂತ ....(ದೊಡ್ಡ).

ಇ. ಉಚ್ಚಂಗಮ್ಮ ದೇವಾಲಯವನ್ನು .... ಬಿಚ್ಚುಗತ್ತಿ ಭರಮಣ್ಣನಾಯಕ (ಕಟ್ಟಿಸು).

ಈ. ಕಾಮನ ಬಾಗಿಲೇ ಬೆಟ್ಟದ ಮೇಲಕ್ಕೆ .... ಮಹಾದ್ವಾರ (ಹೋಗು).

ಕ. ಮೂರು ಮೈಲಿ ದೂರದಲ್ಲಿ ನಿಂತು ಯಾವ ಕೋನದಿಂದ ಫಿರಂಗಿ .... ಈ ಬಾಗಿಲಿಗೆ ಅಪಾಯವಾಗುವುದಿಲ್ಲ (ಹಾರಿಸು).

ಗ. ಅಂದಿನ ಚಿತ್ರದುರ್ಗ .... ನೀರಿನ ಬರ ಕಾಣಲಿಲ್ಲ (ಎಂದು).

IV. ವಾಕ್ಯಗಳನ್ನು ಕೂಡಿಸಿ

ಅ. i. ಪಾಳೆಯಗಾರ ಉಚ್ಚಂಗಮ್ಮನ ದೇವಾಲಯವನ್ನು ಕಟ್ಟಿಸಿದ.
   ii. ಅವನು ಬಿಚ್ಚುಗತ್ತಿ ಭರಮಣ್ಣನಾಯಕ.

ಆ. i. ಚಿತ್ರದುರ್ಗವನ್ನು ಪಾಳೆಯಗಾರರು ಆಳಿದರು.
   ii. ಅವರಲ್ಲಿ ಅತ್ಯಂತ ಪರಾಕ್ರಮಿ ಕಿರಿಯ ಮದಕರಿನಾಯಕ.

ಇ. i ಮದಿಸಿದ ಆನೆಯೊಂದು ವಿಜಯನಗರದ ರಾಜಬೀದಿಯಲ್ಲಿ ಹಾವಳಿ ನಡೆಸಿತು.
   ii. ಓಬಣ್ಣನಾಯಕ ಚಿತ್ರದುರ್ಗದ ಪಾಳೆಯಗಾರನಾಗಿದ್ದ.
   iii. ಓಬಣ್ಣನಾಯಕ ಆನೆಯನ್ನು ಹಿಡಿದುನಿಲ್ಲಿಸಿದ.

V. ಕೆಳಕಂಡ ವಾಕ್ಯಗಳ ಅರ್ಥವನ್ನು ಬದಲಾಯಿಸದಂತೆ ಬೇರೊಂದು ವಾಕ್ಯದಲ್ಲಿ ಬರೆಯಿರಿ

ಅ. ಬಸವನ ಬುರುಜಿನ ಮೇಲೆ ಹತ್ತಿನಿಂತರೆ ಊರಿಗೆ ಊರೇ ಕಾಣಿಸುತ್ತದೆ.

ಆ. ಒಂದೊಂದೂ ವಾಸ್ತು ಶಿಲ್ಪದ ಅಪೂರ್ವ ಮಾದರಿಗಳು.

ಇ. ಚಿತ್ರದುರ್ಗದ ಕೋಟೆಕೊತ್ತಳ ಗುಡಿಗೋಪುರಗಳ ವಿಷಯ ಇಲ್ಲಿಗೇ ಮುಗಿಯುವುದಿಲ್ಲ.

ಈ. ಸಬಲ, ಸಮೃದ್ಧ ಚಿತ್ರದುರ್ಗವೂ ದುರ್ಗಾಸ್ತಮಾನವನ್ನು ಕಂಡಿತು.

VI. ಕೆಳಕಂಡವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಗತವೈಭವ

ಆ. ಬೃಹದಾಕಾರ

ಇ. ಹೊಂದಿಕೊಂಡಂತೆ

ಈ. ಇಂದಿಗೂ

ಕ. ಮೂಲಕ

ಗ. ಒಂದೊಂದೂ

ಚ. ಎಂದೂ

ಜ. ಒಂದೇಬಾರಿಗೆ

ಟ. ಮೂಲೆಮೂಲೆಗಳಲ್ಲೂ

ಡ. ಒಬ್ಬೊಬ್ಬರೇ

VII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಚಿತ್ರದುರ್ಗವನ್ನು ಆಳಿದ ರಾಜಮನೆತನಗಳಾವುವು?

ಆ. ಓಬಣ್ಣನಾಯಕನಿಗೆ ಮದಕರಿನಾಯಕ ಎಂಬ ಹೆಸರು ಬರಲು ಕಾರಣವೇನು?

ಇ. ಚಿತ್ರದುರ್ಗಕ್ಕೆ ಇದ್ದ ಹೆಸರುಗಳಾವುವು?

ಈ. ಕಾಮನಬಾಗಿಲಿನ ವೈಶಿಷ್ಟ್ಯವೇನು?

ಕ. ಟಾಕಿನಬಾಗಿಲು ಯಾವ ಕಾರಣಕ್ಕಾಗಿ ವಿಶಿಷ್ಟವೆನ್ನಿಸಿದೆ?

ಗ. ಕೆಳದುರ್ಗ ಮತ್ತು ಮೇಲುದುರ್ಗಗಳಲ್ಲಿ ನೀರನ್ನು ಹೇಗೆ ಸಂಗ್ರಹಿಸು–ತ್ತಿದ್ದರೆಂಬುದನ್ನು ವಿವರಿಸಿ?

VIII. ನೀವು ನೋಡಿರುವ ಯಾವುದಾದರೂ ಒಂದು ಐತಿಹಾಸಿಕ ಸ್ಥಳದ ಪರಿಚಯ ಮಾಡಿಕೊಡಿ

IX. ಕನ್ನಡಕ್ಕೆ ಭಾಷಾಂತರಿಸಿ

A group of eager school children and their teachers went on an excursion to Chitradurga. They went straight to the big fort there. A guide took them round the fort. He pointed to a small gate and said, "that is Obavva's Onake Kindi".

How did it get that name? asked one of the students. The guide started narrating the story.

Obavva lived in Chitradurga, about 200 years ago. She was the wife of the gate keeper of the fort. One day Hyder Ali of Mysore became very angry with Madakarinayaka, the chieftain of Chitradurga. Hyder Ali sent his army to attack Chitradurga.

There was a long and fierce battle. But Hyder Ali's army was not able to take the fort. He heard about a secret entry into the fort and ordered his army to enter the fort silently in the night.

Hanumanayaka, the gate keeper of the fort went home for dinner. His wife Obavva was going to bring some water. Suddenly she stood still and listened. There was a strange sound near the secret door. Someone was trying to enter the fort. There was no time to get help. She ran home, took up the pounding stick and ran back to the secret door. She hid herself near the door. `Crash' came the pounding stick on his head. He died at once. Like this she killed many

more soldiers. The gatekeeper came back. He sent signals to the army. Having heard about the brave woman entire Chitradurga rejoiced. They gave the name `Obavvana Onake Kindi' to the secret door. Obavva's name is a house hold name in Karnataka.

18. ಟಿಪ್ಪುಸುಲ್ತಾನ್

ಕ್ರಿ.ಶ 1761 ರಿಂದ 1782 ರವರೆಗೆ ಮೈಸೂರು ಸಂಸ್ಥಾನವನ್ನು ಆಳಿದ ನವಾಬ ಹೈದರಾಲಿಯ ಧೀಮಂತ ಪುತ್ರ ಟಿಪ್ಪುಸುಲ್ತಾನ್. ಸಂತ ಟಿಪ್ಪುಮಸ್ತಾನ್ ಔಲಿಯನ ಆಶೀರ್ವಾದದಿಂದ ಹುಟ್ಟಿದ ಮಗುವಿಗೆ ಟಿಪ್ಪುಸುಲ್ತಾನ್ ಎಂದು ನಾಮಕರಣ ಮಾಡಿದ ಹೈದರಾಲಿ.

ಅನಕ್ಷರಸ್ಥನಾಗಿದ್ದ ಹೈದರಾಲಿ ತನ್ನ ಮಗನಿಗೆ ಮಾತ್ರ ಚೆನ್ನಾಗಿ ವಿದ್ಯಾಭ್ಯಾಸ ಮಾಡಿಸಿದ್ದ. ಟಿಪ್ಪು ಅರಬ್ಬಿ, ಪಾರ್ಸಿ, ಉರ್ದು ಮತ್ತು ಕನ್ನಡ ಭಾಷೆಗಳನ್ನು ಕಲಿತಿದ್ದ. ಟಿಪ್ಪುವಿಗೆ ಆಡಳಿತ ಮತ್ತು ಯುದ್ಧ ವಿದ್ಯೆಯಲ್ಲಿ ವ್ಯವಸ್ಥಿತ ತರಬೇತಿಯನ್ನೂ ನೀಡಿದ್ದ ಹೈದರಾಲಿ.

ಟಿಪ್ಪು ತಂದೆಯ ಜೊತೆಗೂಡಿ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದ. ಮೊದಲನೆಯ ಇಂಗ್ಲೀಷ್–ಮೈಸೂರು ಯುದ್ಧ (1767-69) ಮತ್ತು ಮರಾಠ–ಮೈಸೂರು ಯುದ್ಧಗಳಲ್ಲಿ (1769-72) ಟಿಪ್ಪು ತೋರಿದ ಯುದ್ಧ ಸಾಹಸ ಎಲ್ಲರ ಗಮನವನ್ನೂ ಸೆಳೆಯಿತು. ಎರಡನೆಯ ಇಂಗ್ಲೀಷ್–ಮೈಸೂರು ಯುದ್ಧ ಸಾಗುತ್ತಿದ್ದ ಕಾಲದಲ್ಲಿ (1782) ಹೈದರಾಲಿ ತೀರಿಕೊಂಡಾಗ ಟಿಪ್ಪುವಿಗೆ ಪಟ್ಟ ಕಟ್ಟಲಾಯಿತು.ಇಂಗ್ಲೀಷ್–ಮೈಸೂರು ಯುದ್ಧದಲ್ಲಿ ಟಿಪ್ಪು ಅತ್ಯಂತ ಶೌರ್ಯದಿಂದ ಹೋರಾಡಿ ಇಂಗ್ಲೀಷರನ್ನು ತತ್ತರಿಸುವಂತೆ ಮಾಡಿದ. ಗತ್ಯಂತರವಿಲ್ಲದೆ ಇಂಗ್ಲೀಷರು ಟಿಪ್ಪುವಿನ ಜೊತೆ ಒಪ್ಪಂದವನ್ನು ಮಾಡಿಕೊಳ್ಳಬೇಕಾಯಿತು.ಇದೇಇತಿಹಾಸ ಪ್ರಸಿದ್ಧ ಮಂಗಳೂರು ಒಪ್ಪಂದ(1784). ಇದು ಇಂಡೋ–ಬ್ರಿಟಿಷ್ ಇತಿಹಾಸದಲ್ಲಿ ಒಂದು ಪ್ರಮುಖ ದಾಖಲೆ.

ಐತಿಹಾಸಿಕ ಮಂಗಳೂರು ಒಪ್ಪಂದ ತಾತ್ಕಾಲಿಕವಾಗಿದ್ದು ಸದ್ಯದಲ್ಲಿಯೇ ತಾನು ಮತ್ತೊಂದು ಯುದ್ಧವನ್ನು ಎದುರಿಸುವ ಅನಿವಾರ್ಯತೆ ಉಂಟಾಗಬಹುದು ಎಂಬ ಅರಿವು ಟಿಪ್ಪುವಿಗೆ ಇದ್ದೇ ಇತ್ತು. ಟಿಪ್ಪುಅಂದುಕೊಂಡಂತೆಯೇ ಎಲ್ಲವೂ

ನಡೆಯತೊಡಗಿದವು. ಟಿಪ್ಪು ಇಂಗ್ಲೀಷರೊಡನೆ ಅನಿವಾರ್ಯವಾಗಿ ಯುದ್ಧ ಮಾಡಬೇಕಾಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಪಾಳೆಯಗಾರರು ಸ್ವತಂತ್ರರಾಗಲು ಪ್ರಯತ್ನ ನಡೆಸಿ ತಾವು ಸ್ವತಂತ್ರರೆಂದು ಸ್ವಯಂ ಘೋಷಿಸಿಕೊಂಡರು. ಇಂತಹ ಒಂದು ಸನ್ನಿವೇಶದಲ್ಲಿ ಕಪ್ಪ ಕೊಡದಿದ್ದ ನರಗುಂದದ ದೇಸಾಯಿಯನ್ನು ಹತ್ತಿಕ್ಕಲು ಟಿಪ್ಪು ಯತ್ನಿಸಿದಾಗ ದೇಸಾಯಿಯ ಬೆಂಬಲಕ್ಕೆ ಇದ್ದ ಮರಾಠರಿಗೆ ಟಿಪ್ಪುವಿನ ಮೇಲೆ ಸೇಡುತೀರಿಸಿಕೊಳ್ಳಲು ಅವಕಾಶ ಸಿಕ್ಕಂತಾಯಿತು. ಯುದ್ಧದಲ್ಲಿ ಟಿಪ್ಪುವಿನದೇ ಮೇಲುಗೈಯಾದರೂ ಪರಕೀಯರನ್ನು ಈ ದೇಶದಿಂದ ಒದ್ದೋಡಿಸಬೇಕಾದರೆ ದೇಶೀಯರೊಡನೆ ವಿರಸ ಸರಿಯಲ್ಲ ಎಂಬ ಒಂದೇ ಕಾರಣಕ್ಕೆ ಗಜೇಂದ್ರಗಡದ ಒಪ್ಪಂದವನ್ನು ಮಾಡಿಕೊಂಡು ಯುದ್ಧವನ್ನು ಕೊನೆಗಾಣಿಸಿದ ಟಿಪ್ಪು. ಈ ಯುದ್ಧದಿಂದ ಯಾರಿಗೂ ಯಾವುದೇ ಲಾಭ ಆಗಲಿಲ್ಲ.

ಟಿಪ್ಪುವನ್ನು ಸರ್ವನಾಶ ಮಾಡಲು ಹೊಂಚು ಹಾಕುತ್ತಿದ್ದ ಇಂಗ್ಲೀಷರ ಜೊತೆ ಟಿಪ್ಪುವಿನ ಬಗ್ಗೆ ಅಸೂಯೆಗೊಂಡಿದ್ದ ದೇಶೀಯ ರಾಜರೆಲ್ಲರೂ ಸೇರಿ ಒಂದು ಒಕ್ಕೂಟವನ್ನು ರಚಿಸಿಕೊಂಡು ಸಮಯ ಕಾಯುತ್ತಿದ್ದರು. ದೇಶೀರಾಜರುಗಳ ದೌರ್ಬಲ್ಯ ಮತ್ತು ಅನೈತಿಕತೆಯಿಂದಾಗಿ ಟಿಪ್ಪು ಸಹಾಯಕ್ಕಾಗಿ ಹೊರ ದೇಶಗಳತ್ತ ಕೈಚಾಚಬೇಕಾಯಿತು. ಹೀಗೆ ಕೈಚಾಚುವುದಕ್ಕೆ ಎರಡು ಪ್ರಬಲ ಉದ್ದೇಶಗಳಿದ್ದವು. ಮೊದಲನೆಯದು ಇಂಗ್ಲೀಷರ ವಿರುದ್ಧ ಒಂದು ಒಕ್ಕೂಟವನ್ನು ರಚಿಸುವುದು. ಎರಡನೆಯದು ಸಂಸ್ಥಾನದ ವಾಣಿಜ್ಯ ಮತ್ತು ವ್ಯಾಪಾರವನ್ನು ವೃದ್ಧಿಪಡಿಸುವುದು. ಇದಕ್ಕಾಗಿ ರಾಜಕೀಯ ಬೆಂಬಲವನ್ನು ಪಡೆಯುವ ಸಲುವಾಗಿ ಅನೇಕ ದೇಶಗಳೊಡನೆ ವಾಣಿಜ್ಯ ಸಂಬಂಧವನ್ನು ಏರ್ಪಡಿಸಿಕೊಂಡ. ಟಿಪ್ಪು ಫ್ರೆಂಚರ ನೆರವನ್ನು ಪಡೆಯಲೂ ಪ್ರಯತ್ನಪಟ್ಟ. ಆದರೆ ಆ ಕಾಲಕ್ಕೆ ಫ್ರಾನ್ಸ್‌ನಲ್ಲಿ ನಡೆದ ಫ್ರೆಂಚ್ ಮಹಾಕ್ರಾಂತಿ ಮತ್ತು ಅದರ ಪರಿಣಾಮಗಳಿಂದಾಗಿ ಟಿಪ್ಪುವಿಗೆ ಫ್ರೆಂಚರ ಸಹಾಯ ಸಿಗಲಿಲ್ಲ. ಇಲ್ಲಿಗೆ ಫ್ರೆಂಚರ ಸಹಾಯ ಪಡೆದು ಭಾರತದಿಂದ ಇಂಗ್ಲೀಷರನ್ನು ತೊಲಗಿಸಬೇಕೆಂಬ ಟಿಪ್ಪುವಿನ ಕನಸು ನುಚ್ಚುನೂರಾಯಿತು.

ಹೀಗಿರುವಲ್ಲಿ ಟಿಪ್ಪುವಿನ ಊಹೆಯಂತೆ ಇಂಗ್ಲೀಷರ ಜೊತೆ ಇನ್ನೊಂದು ಯುದ್ಧ ಅನಿವಾರ್ಯವಾಯಿತು. ಇಂಗ್ಲೀಷರ ಮಿತ್ರನಾಗಿದ್ದ ತಿರುವಾಂಕೂರು ರಾಜ ಟಿಪ್ಪುವಿನ ಜೊತೆ ಕಾಲುಕೆರೆದುಕೊಂಡು ಜಗಳಕ್ಕೆ ನಿಂತಾಗ ಟಿಪ್ಪು ಅವನ ಮೇಲೆ ಆಕ್ರಮಣ ಮಾಡಿದ. ಇಂತಹ ಒಂದು ಸಂದರ್ಭಕ್ಕಾಗಿಯೇ ಕಾಯುತ್ತಿದ್ದ ಇಂಗ್ಲೀಷರು, ಮರಾಠರು ಮತ್ತು ನಿಜಾಮರನ್ನು ಸೇರಿಸಿಕೊಂಡು ಲಾರ್ಡ್‌ಕಾರನ್‌ವಾಲೀಸ್ ನೇತೃದ್ವದಲ್ಲಿ ಬೆಂಗಳೂರಿನ ಮೇಲೆ ದಾಳಿ ಇಟ್ಟು ಆಕ್ರಮಿಸಿಕೊಂಡರು. ನಂತರ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಕೋಟೆಯೊಂದನ್ನುಳಿದು ಎಲ್ಲವೂ ಇಂಗ್ಲೀಷರ ವಶವಾಯಿತು. ಪ್ರತಿಕೂಲ ಪರಿಸ್ಥಿತಿಯನ್ನು ಅರಿತಿದ್ದ ಟಿಪ್ಪು ಬೇರೆ ದಾರಿ ಕಾಣದೆ ಇಂಗ್ಲೀಷರೊಡನೆ ಒಪ್ಪಂದ ಮಾಡಿಕೊಂಡ. ಇದೇ ಶ್ರೀರಂಗಪಟ್ಟಣದ ಒಪ್ಪಂದ (1792).

ಕಾರನ್‌ವಾಲೀಸ್ ಶಾಂತಿ ಸಂಧಾನಕ್ಕೆ ಒಪ್ಪಿದರೂ ಭಾರತದಲ್ಲಿ ಇಂಗ್ಲೀಷರ ವಿಸ್ತರಣೆಗೆ ದೊಡ್ಡ ಅಡ್ಡಿಯಾಗಿದ್ದ ಟಿಪ್ಪುವನ್ನು ಸದೆಬಡಿಯಲು ಕಠಿಣ ಷರತ್ತುಗಳನ್ನೇ ಒಡ್ಡಿದ. ಷರತ್ತಿನ ಸಾರಾಂಶವೆಂದರೆ ಟಿಪ್ಪುಸುಲ್ತಾನ್ ತನ್ನ ರಾಜ್ಯದ ಅರ್ಧಭಾಗವನ್ನು ಇಂಗ್ಲೀಷರಿಗೆ ಬಿಟ್ಟುಕೊಡುವುದು, ಯುದ್ಧದ ವೆಚ್ಚಕ್ಕೆಂದು ಮೂರು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ದಂಡ ತೆರುವುದು, ಇದು ಪಾವತಿ ಯಾಗುವವರೆಗೂ ಟಿಪ್ಪುವಿನ ಇಬ್ಬರು ಮಕ್ಕಳಾದ ಐದು ವರ್ಷದ ಖಾದೀರ್ ಮತ್ತು ಏಳು ವರ್ಷದ ಮೊಹಿದ್ದೀನ್ ಅವರನ್ನು ಇಂಗ್ಲೀಷರಲ್ಲಿ ಒತ್ತೆ ಇಡುವುದು. ಪರಕೀಯರನ್ನು ಒದ್ದೋಡಿಸಬೇಕೆಂಬ ಒಂದೇ ಒಂದು ಆಸೆಯಿಂದ ಇಂಗ್ಲೀಷರ ಎಲ್ಲಾ ಷರತ್ತುಗಳನ್ನು ಒಪ್ಪಿ ಹೆತ್ತ ಮಕ್ಕಳನ್ನೇ ಒತ್ತೆ ಇಟ್ಟ ಟಿಪ್ಪು.

ಶ್ರೀರಂಗಪಟ್ಟಣದ ಒಪ್ಪಂದದ ನಂತರ ಟಿಪ್ಪು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಈ ಒಪ್ಪಂದದಿಂದ ತಾಯ್ನಾಡಿಗೆ ಒದಗಿದ ದುರ್ಗತಿ, ಸ್ವಂತಕ್ಕೆ ಆದ ಮಾನಸಿಕ ಕ್ಷೋಭೆ ಅವನಿಗೆ ಕೊಂಚವೂ ವಿಶ್ರಮಿಸಲು ಪುರಸತ್ತು ಕೊಡಲಿಲ್ಲ. ಹೇಗಾದರೂ ಮಾಡಿ ಕಳೆದುಕೊಂಡಿದ್ದ ಪ್ರತಿಷ್ಠೆಯನ್ನು ತಾಯ್ನಾಡಿಗೆ ಮರಳಿ

ತಂದುಕೊಡಬೇಕೆಂದು ಟಿಪ್ಪುವಿನ ಮನಸ್ಸು ಸದಾ ತುಡಿಯುತ್ತಿತ್ತು. ಇದೇ ಸಮಯದಲ್ಲಿ ಸ್ವಜನರ ಸಂಚೂ ನಡೆದಿತ್ತು. ಸಂಚಿನ ರುವಾರಿ ಬೇರಾರೂ ಅಲ್ಲ, ಟಿಪ್ಪುವಿನ ನಂಬಿಕಸ್ಥ, ಇಂಗ್ಲೀಷರ ಗೂಢಚಾರಿ ಮೀರ್‌ಸಾಧಿಖ್. ಟಿಪ್ಪುವಿನ ತಹತಹವನ್ನು ಅರಿತಿದ್ದ ಮೀರ್‌ಸಾಧಿಖ್ ಫ್ರೆಂಚ್ ಸಾಹಸಿ ರೀಫಾನನ್ನು ತನ್ನ ಒಳಸಂಚಿನಲ್ಲಿ ಸೇರಿಸಿಕೊಂಡು ರೀಫಾ-ಟಿಪ್ಪುವಿನ ಭೇಟಿಯನ್ನು ಏರ್ಪಡಿಸಿದ. ಮಾರಿಷಸ್ ದ್ವೀಪದಲ್ಲಿ ಫ್ರೆಂಚರ ಭಾರಿ ಸೇನೆ ಇರುವುದಾಗಿಯೂ ನಿಯೋಗವೊಂದನ್ನು ಕಳಿಸಿದಲ್ಲಿ ಫ್ರೆಂಚ್ ಸೈನ್ಯದ ಸಹಾಯ ಸಿಗುವುದೆಂದೂ ರಿಫಾ ಟಿಪ್ಪುವಿಗೆ ತಿಳಿಸಿದ. ಇದನ್ನು ಸಂಪೂರ್ಣವಾಗಿ ನಂಬಿದ ಟಿಪ್ಪು ನಿಯೋಗವೊಂದನ್ನು ಮಾರಿಷಸ್‌ಗೆ ಕಳಿಸಿದ. ಆದರೆ ನಿಯೋಗ ಮಾರಿಷಸ್‌ಗೆ ಹೋಗಿ ನೋಡಿದಾಗ ಅಲ್ಲಿ ಯಾವುದೇ ಸೈನ್ಯ ಇರಲಿಲ್ಲ. ಅಲ್ಲಿನ ಗವರ್ನರ್ ಮಲಾರ್‌ಟಿಕ್ ನಿಯೋಗವನ್ನು ಗೌರವದಿಂದ ಬರಮಾಡಿಕೊಂಡ. ನಿಯೋಗವನ್ನು ಬರಿಗೈಯಲ್ಲಿ ವಾಪಸ್ ಕಳಿಸಬೇಕಾಗುತ್ತದಲ್ಲ ಎಂದು ಯೋಚಿಸಿದ ಮಲಾರ್‌ಟಿಕ್ ಟಿಪ್ಪುವಿನ ಸೇನೆ ಸೇರಲು ದ್ವೀಪವಾಸಿಗಳಿಗೆ ಘೋಷಣೆಯ ಮೂಲಕ ಕರೆಕೊಟ್ಟ. "ಇಂಗ್ಲೀಷರ ವಿರುದ್ಧ ಯುದ್ಧ ಘೋಷಿಸಲು ಮತ್ತು ಅವರನ್ನು ಭಾರತದಿಂದ ಓಡಿಸಲು ಬಹಳ ಆಸಕ್ತಿವುಳ್ಳವನಾಗಿ ಫ್ರೆಂಚರ ಸಹಾಯಕ್ಕಾಗಿ ಟಿಪ್ಪು ಕಾಯುತ್ತಾ ಕುಳಿತಿದ್ದಾನೆ" ಎಂಬುದು ಘೋಷಣೆಯ ಸಾರಾಂಶ. ರಾಜತಂತ್ರದಲ್ಲಿ ಯಾವ ಪರಿಣತಿಯನ್ನೂ ಪಡೆಯದ ಟಿಪ್ಪುವಿಗೆ ಈ ರಾಯಭಾರ ಯಾವ ಪ್ರತಿಫಲವನ್ನು ಕೊಡದಿದ್ದರೂ ನಾಲ್ಕನೆಯ ಮೈಸೂರು ಯುದ್ಧಕ್ಕೆ ನಾಂದಿಯನ್ನು ಹಾಡಿತು.

ಶ್ರೀರಂಗಪಟ್ಟಣದ ಒಪ್ಪಂದದ ನಂತರ ಟಿಪ್ಪುವಿನ ಆರ್ಥಿಕ ಪರಿಸ್ಥಿತಿ ಹಾಗೂ ಸೈನಿಕ ಶಕ್ತಿ ಕುಗ್ಗಿದ್ದರೂ ಅವನ ಆತ್ಮಸ್ಥೈರ್ಯ ಕುಗ್ಗಿರಲಿಲ್ಲ. ಅಲ್ಪ ಕಾಲದಲ್ಲಿ ತನ್ನ ರಾಜ್ಯವನ್ನು ಮೊದಲಿನಂತೆ ಬಲಿಷ್ಠವನ್ನಾಗಿ ಮಾಡುವುದರಲ್ಲಿ ಟಿಪ್ಪು ಯಶಸ್ವಿಯೂ ಆದ. ಟಿಪ್ಪುವಿನ ದಕ್ಷತೆಯನ್ನು ನೋಡಿ ಸಹಿಸದ ವೆಲೆಸ್ಲಿ ಮಾರಿಷಸ್‌ಗೆ ರಾಯಭಾರವನ್ನು ಕಳುಹಿಸಿದ್ದನ್ನೇ ನೆಪ ಮಾಡಿಕೊಂಡು ಟಿಪ್ಪುವಿನ

ಮೇಲೆ ಯುದ್ಧಕ್ಕೆ ನಿಂತ. ಇದೇ ನಾಲ್ಕನೆಯ ಮೈಸೂರು ಯುದ್ಧ. ಶ್ರೀರಂಗಪಟ್ಟಣವನ್ನು ಉಳಿಸಿಕೊಳ್ಳಲು ಘೋರ ಹೋರಾಟ ನಡೆಸಿದ ಟಿಪ್ಪು ಇಂಗ್ಲೀಷರ ಗುಂಡೇಟಿಗೆ ರಣರಂಗದಲ್ಲಿಯೇ ಧರಾಶಾಯಿಯಾದ. ಇಂಗ್ಲೀಷರೊಡನೆ ಯುದ್ಧದಿಂದ ಆರಂಭವಾದ ಟಿಪ್ಪುವಿನ ಆಳ್ವಿಕೆ ಇಂಗ್ಲೀಷರ ಮೇಲಿನ ಯುದ್ಧದಲ್ಲೇ ಅಂತ್ಯಗೊಂಡಿದ್ದು ಒಂದು ವಿಪರ್ಯಾಸ.

ಭಾರತದ ಇತಿಹಾಸದಲ್ಲಿ ಅದರಲ್ಲೂ ಕರ್ನಾಟಕದ ಇತಿಹಾಸದಲ್ಲಿ ಟಿಪ್ಪುಸುಲ್ತಾನನ ಹೆಸರು ಚಿರಸ್ಥಾಯಿಯಾಗಿರುತ್ತದೆ. ಟಿಪ್ಪುಸುಲ್ತಾನನ ಆಳ್ವಿಕೆಯು ಕೇವಲ 17 ವರ್ಷಗಳಾದರೂ ಅದು ಭೋರ್ಗರೆಯುತ್ತಾ ಸಾಗಿತು. ಅವನ ಆಳ್ವಿಕೆಯ ಕಾಲ ಹಲವಾರು ರೀತಿಗಳಿಂದ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಭಾರತದಲ್ಲಿ ಇಂಗ್ಲೀಷರ ವಿರುದ್ಧ ಇವನಷ್ಟು ಉಗ್ರ ಪ್ರತಿಭಟನೆಯನ್ನು ಯಾರೂ ತೋರಿಸಿರಲಿಲ್ಲ. ಹಾಗೆಯೇ ಇಂಗ್ಲೀಷರು ಟಿಪ್ಪುವಿನಂತಹ ಅಸಾಮಾನ್ಯ ಶತ್ರುವನ್ನು ಹಿಂದೆಂದೂ ಎದುರಿಸಿರಲಿಲ್ಲ. ಟಿಪ್ಪು ಹುಲಿಯಂತೆ ಉಗ್ರವಾಗಿ ಕಾದಾಡಿದ. ಅವನ ಜೀವನದ ಏಕೈಕ ಗುರಿ ಎಂದರೆ ಇಂಗ್ಲೀಷರನ್ನು ಭಾರತದಿಂದ ತೊಲಗಿಸುವುದು. ಮೈಸೂರು, ಟಿಪ್ಪುಸುಲ್ತಾನ್ ಎಂಬ ಹೆಸರುಗಳೇ ಲಂಡನ್ ನಗರದ ಲೀಡನ್‌ಹಾಲ್ ರಸ್ತೆಯ ಈಸ್ಟ್ ಇಂಡಿಯಾ ಕಂಪೆನಿಯ ಕೇಂದ್ರ ಕಛೇರಿಯಲ್ಲಿ ಕುಳಿತಿದ್ದವರ ಬೆನ್ನುಹುರಿಯಲ್ಲಿ ನಡುಕ ಹುಟ್ಟಿಸುತ್ತಿತ್ತು. ಇಂಗ್ಲೀಷರನ್ನು ಭಾರತದಿಂದ ತೊಲಗಿಸಲು ಎಲ್ಲಾ ಪ್ರಯತ್ನಗಳನ್ನು ಕೈಗೊಂಡು ಅಲ್ಪ ಕಾಲದಲ್ಲೇ ಮೈಸೂರು ಸಂಸ್ಥಾನವನ್ನು ಸಮೃದ್ಧ ರಾಜ್ಯವನ್ನಾಗಿ ಮಾಡಿ ದಕ್ಷಿಣ ಭಾರತದಲ್ಲೆಲ್ಲಾ ಹುಲಿಯಂತೆ ಗರ್ಜಿಸುತ್ತಾ ಶತ್ರುಗಳನ್ನು ಸದೆ ಬಡಿದು ವೀರ ಮರಣವನ್ನಪ್ಪಿದ, ಮೈಸೂರು ಹುಲಿ ಟಿಪ್ಪುಸುಲ್ತಾನ್.

ಕಠಿಣಪದಗಳ ಅರ್ಥ

ಅನಕ್ಷರಸ್ಥ	–	non - literate
ಆಡಳಿತ	–	administration

ಜೊತೆಗೂಡು – to join
ತೀರಿಕೊಳ್ಳು – to die
ತತ್ತರಿಸು – to shiver, to tremble
ದಾಖಲೆ – record
ಒಪ್ಪಂದ – treaty
ಕಪ್ಪ – tax
ಹತ್ತಿಕ್ಕು – to put down, to repress
ಸೇಡುತೀರಿಸಿಕೊಳ್ಳು – to take revenge
ಒದ್ದೋಡಿಸು – to oust
ವಿರಸ – falling out, enmity
ಹೊಂಚುಹಾಕು – to bide one's time
ಒಕ್ಕೂಟ – union
ಕೈಚಾಚು – to seek help
ಬೆಂಬಲ – support
ನೆರವು – help
ನುಚ್ಚುನೂರಾಗು – crushed into pieces
ಪ್ರತಿಕೂಲ ಪರಿಸ್ಥಿತಿ – adverse situation
ಒತ್ತೆಇಡು – to pledge, to pawn
ಮಾನಸಿಕ ಕ್ಷೋಭೆ – mental affliction
ತುಡಿ – to yarn, to be anxious
ರುವಾರಿ – sculptor
ಗೂಢಚಾರಿ – spy
ನಿಯೋಗ – delegation

ರಾಯಭಾರ – diplomacy, negotiation

ದಕ್ಷತೆ - efficiency

ವಿಪರ್ಯಾಸ – irony

ಬರಿಗೈ – empty hand (without any help)

ಓಡಿಸು – to drive away, to oust

ಧಾರಾಶಾಯಿಯಾಗು – to die

ಅಭ್ಯಾಸಗಳು

I. ಮಾದರಿಯನ್ನನುಸರಿಸಿ ಕೊಟ್ಟಿರುವ ಪದಗಳನ್ನು ಬದಲಾಯಿಸಿ ಬರೆಯಿರಿ

ಅ. ಮಾದರಿ: ಸಾಮಾನ್ಯ – ಅಸಾಮಾನ್ಯ

ಅ. ಸಹಾಯ –

ಇ. ಗೌರವ –

ಈ. ನೈತಿಕ –

ಕ. ಪರಿಚಿತ –

ಗ. ಹಿತ –

ಆ. ಮಾದರಿ: ಅನುಕೂಲ – ಅನಾನುಕೂಲ

ಅ. ಅವಶ್ಯ –

ಆ. ಉಚಿತ –

ಇ. ಆರೋಗ್ಯ –

ಈ. ಅಸೂಯೆ –

ಕ. ಉಪಮ –

ಇ. ಮಾದರಿ: ನಂಬಿಕೆ – ಅಪನಂಬಿಕೆ

ಅ. ಹಾಸ್ಯ –

ಆ. ವ್ಯಯ –

ಇ. ಶಕುನ –

ಈ. ಪ್ರಚಾರ –

ಕ. ನಂಬಿಕೆ –

ಗ. ಮೃತ್ಯು –

II. ಬಿಡಿಸಿ ಬರೆಯಿರಿ

ಅ. ಭೋರ್ಗರೆಯುತ್ತಾ

ಆ. ಒದ್ದೋಡಿಸಬೇಕಾದರೆ

ಇ. ಸುಭದ್ರವಾಗೇನೂ

ಈ.ಕೋಟೆಯೊಂದನ್ನುಳಿದು

ಕ. ಜೊತೆಗೂಡಿ

ಗ. ಮೇಲುಗೈಯಾದರೂ

III. ಆವರಣದಲ್ಲಿ ಕೊಟ್ಟಿರುವ ಪದದ ಸರಿಯಾದ ರೂಪದಿಂದ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಟಿಪ್ಪು ಅತ್ಯಂತ ಶೌರ್ಯದಿಂದ ಹೋರಾಡಿ ಇಂಗ್ಲೀಷರನ್ನು .... ಮಾಡಿದ (ತತ್ತರಿಸು).

ಆ. ಇಂಗ್ಲೀಷರು ಟಿಪ್ಪುವಿನ ಷರತ್ತುಗಳನ್ನು ಒಪ್ಪಿಕೊಂಡು ಒಪ್ಪಂದ .... ಟಿಪ್ಪುವಿನ ಮುತ್ಸದ್ದಿತನಕ್ಕೆ ಸಾಕ್ಷಿ (ಮಾಡಿಕೊಳ್ಳು).

ಇ. ಈ ಯುದ್ಧದಿಂದ ಯಾರಿಗೂ ....ಲಾಭ ಆಗಲಿಲ್ಲ (ಯಾವುದು).

ಈ. ಟಿಪ್ಪು ಹೊರದೇಶಗಳತ್ತ .... ಎರಡು ಪ್ರಬಲ ಉದ್ದೇಶ ಗಳಿದ್ದವು (ಕೈಚಾಚು).

ಕ. ಪ್ರತಿಕೂಲ ಪರಿಸ್ಥಿತಿಯನ್ನರಿತಿದ್ದ ಟಿಪ್ಪು ಬೇರೆ ದಾರಿ ....
ಇಂಗ್ಲೀಷರೊಡನೆ ಒಪ್ಪಂದ ಮಾಡಿಕೊಂಡ (ಕಾಣು).

ಗ. ಮರಾಠರಿಗೆ ಟಿಪ್ಪುವಿನ ಮೇಲೆ ಸೇಡು ....ಅವಕಾಶ
ಸಿಕ್ಕಂತಾಯಿತು (ತೀರಿಸಿಕೊಳ್ಳು).

ಚ. ಟಿಪ್ಪು ಫ್ರೆಂಚರ ನೆರವನ್ನು .... ಪ್ರಯತ್ನ ಪಟ್ಟ (ಪಡೆ).

IV. ಕೆಳಕಂಡ ವಾಕ್ಯಗಳನ್ನು ಒಡೆದು ಚಿಕ್ಕ ಚಿಕ್ಕ ವಾಕ್ಯಗಳಾಗಿ ಮಾಡಿ

ಅ. ಇಂಗ್ಲೀಷ್–ಮೈಸೂರು ಯುದ್ಧದಲ್ಲಿ ಟಿಪ್ಪು ಅತ್ಯಂತ ಶೌರ್ಯದಿಂದ ಹೋರಾಡಿ ಇಂಗ್ಲೀಷರನ್ನು ತತ್ತರಿಸುವಂತೆ ಮಾಡಿದ.

ಆ. ಟಿಪ್ಪು ಇಂಗ್ಲೀಷರೊಡನೆ ಅನಿವಾರ್ಯವಾಗಿ ಯುದ್ಧಮಾಡಬೇಕಾಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಪಾಳೆಯಗಾರರು ಸ್ವತಂತ್ರರಾಗಲು ಪ್ರಯತ್ನ ನಡೆಸಿ ತಾವು ಸ್ವತಂತ್ರರೆಂದು ಘೋಷಿಸಿಕೊಂಡರು.

ಇ. ಟಿಪ್ಪುವನ್ನು ಸರ್ವನಾಶಮಾಡಲು ಹೊಂಚುಹಾಕುತ್ತಿದ್ದ ಇಂಗ್ಲೀಷರ ಜೊತೆ ಟಿಪ್ಪುವಿನ ಬಗ್ಗೆ ಅಸೂಯೆಗೊಂಡಿದ್ದ ದೇಶೀಯ ರಾಜರೆಲ್ಲರೂ ಸೇರಿ ಒಂದು ಒಕ್ಕೂಟವನ್ನು ರಚಿಸಿಕೊಂಡು ಸಮಯ ಕಾಯುತ್ತಿದ್ದರು.

V. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದಂತೆ ವಾಕ್ಯಗಳನ್ನು ಬದಲಾಯಿಸಿ

ಅ. ಟಿಪ್ಪು ಅರಬ್ಬಿ, ಪಾರ್ಸಿ, ಉರ್ದು ಮತ್ತು ಕನ್ನಡ ಭಾಷೆಗಳನ್ನು ಕಲಿತಿದ್ದ.
(tansform into past tense)

ಆ. ಹೈದರಾಲಿ ತನ್ನ ಮಗನಿಗೆ ಪ್ರಬಲರಾಜ್ಯವೊಂದನ್ನು ಬಿಟ್ಟುಹೋಗಿದ್ದ.
(transform into present perfect)

ಇ. ಮಾರಿಷಸ್‌ಗೆ ಹೋಗಿ ನೋಡಿದಾಗ ಅಲ್ಲಿ ಭಾರಿ ಸೈನ್ಯವಿತ್ತು.
(transform into negative)

ಈ. ಇಂಗ್ಲೀಷರೊಡನೆ ಯುದ್ಧದಿಂದ ಆರಂಭವಾದ ಟಿಪ್ಪುವಿನ ಆಳ್ವಿಕೆ ಇಂಗ್ಲೀಷರ ಮೇಲಿನ ಯುದ್ಧದಲ್ಲಿ ಅಂತ್ಯಗೊಂಡಿದ್ದು ಒಂದು ವಿಪರ್ಯಾಸ.

(transform into an emphatic sentence)

ಕ. ಟಿಪ್ಪುವಿನಷ್ಟು ಉಗ್ರ ಪ್ರತಿಘಟನೆಯನ್ನು ಯಾರೂ ತೋರಿಸಲಿಲ್ಲ.

(transform into affirmative)

VI. ಕೆಳಕಂಡವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಗತ್ಯಂತರವಿಲ್ಲದೆ

ಆ. ಹೊಂಚುಹಾಕು

ಇ. ನುಚ್ಚುನೂರಾಗು

ಈ. ನಾಂದಿಹಾಡು

ಕ. ಧರಾಶಾಯಿಯಾಗು

ಗ. ತತ್ತರಿಸು

ಚ. ಯಾರೂ

VII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಮಂಗಳೂರು ಒಪ್ಪಂದ ಯಾರುಯಾರಲ್ಲಿ ನಡೆಯಿತು?

ಆ. ಟಿಪ್ಪು ಗಜೇಂದ್ರಗಡದ ಒಪ್ಪಂದ ಮಾಡಿಕೊಳ್ಳಲು ಕಾರಣವೇನು?

ಇ. ಪರದೇಶಗಳೊಡನೆ ವಾಣಿಜ್ಯ ಸಂಬಂಧವೇರ್ಪಡಿಸಿಕೊಳ್ಳಬೇಕೆಂಬ ಪ್ರಯತ್ನದ ಹಿಂದಿದ್ದ ಟಿಪ್ಪುವಿನ ಉದ್ದೇಶವೇನು?

ಈ. ಶ್ರೀರಂಗಪಟ್ಟಣದ ಒಪ್ಪಂದದ ಸಾರಾಂಶವೇನು?

ಕ. ಟಿಪ್ಪುವಿನ ಅಂತ್ಯ ಹೇಗಾಯಿತು?

ಗ. ಈಸ್ಟ್ ಇಂಡಿಯಾ ಕಂಪೆನಿಯ ಕೇಂದ್ರಕಛೇರಿಯಲ್ಲಿ ಕುಳಿತಿದ್ದವರ ಬೆನ್ನುಹುರಿಯಲ್ಲಿ ನಡುಕ ಹುಟ್ಟುತ್ತಿದ್ದುದಕ್ಕೆ ಕಾರಣವೇನು?

VIII. ಸ್ವಾತಂತ್ರ್ಯಕ್ಕಾಗಿ ಪರಕೀಯರ ವಿರುದ್ಧ ಹೋರಾಡಿದ ಒಬ್ಬ ರಾಜನನ್ನು ಕುರಿತು ಬರೆಯಿರಿ

IX. ಕನ್ನಡಕ್ಕೆ ಭಾಷಾಂತರಿಸಿ

Rani Chennamma is remembered as a famous heroine by the Kannada-speaking people. She ruled Kittur. Kittur is now a village in Belgaum District in Karnataka State. Mallasarja was one of the rulers of Kittur, and Chennamma was his second wife.

Chennamma was clever, beautiful, courageous and well educated. After the death of Mallasarja, Shivalingasarja, the son of Mallasarja's first wife became the king of Kittur. Like his father, Shivalingasarja ruled the state ably. But he did not live for a long time. He had no issues. Before his death he had adopted an young boy who was his relative.

The news of adoption reached the British official Thackeray, who was at Dharwar. The British had appointed him to look after the affairs of Kittur. He had an eye on the treasury of Kittur. He camped near Kittur with a big army. He sent a letter to Rani Chennamma and to her sardars asking them to meet him. He wrote in his letter that he was the ruler of Kittur and responsible for its administration. Rani Chennamma did not accept Thackeray's idea. The Sardars of Kittur become very angry.

Chennamma did not send a reply to Thackeray's letter. So Thackeray became angry. He determined that Kittur should be his state. He appointed spies to learn what was happening inside the fort of Kittur. He got ready to attack the Kittur fort. Rani Chennamma got information about his plan from her spies. She made necessary preparations to defend the fort.

Thackeray attacked Kittur with his soldiers. The soldiers fired cannons and broke the chief gate of the fort. Chennamma commanded her soldiers to drive away the enemies. Her soldiers fought bravely and killed the chieftains of Thackeray's army. Thackeray himself appeared on the battle field. During the battle, he was wounded by a bullet and died. People of Kittur admired Chennamma's valour.

Rani Chennamma is famous because she is the first one who fought for freedom against the British.

19. ಸಮಾಜಸುಧಾರಕ ಬಸವಣ್ಣ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲಸಂಗಮನೊಲಿಸುವ ಪರಿ

ಎಂದು ಧರ್ಮದ ತಿರುಳನ್ನೇ ಸರಳವಾಗಿ, ಸಂಗ್ರಹವಾಗಿ, ನಿಖರವಾಗಿ, ಸರ್ವಗ್ರಾಹ್ಯವಾಗಿ ಹೇಳುವ ಮೂಲಕ ಮಹಾನ್ ಸಂದೇಶವನ್ನು ನೀಡಿದ ಬಸವಣ್ಣ ಒಬ್ಬ ಅನುಭಾವಿ, ಸಮಾಜ ಸುಧಾರಕ, ಧಾರ್ಮಿಕ ಮುಖಂಡ, ಕ್ರಾಂತಿಕಾರ, ಕಾಯಕ ನಿಷ್ಠ, ಮೇಲಾಗಿ ಒಬ್ಬ ಕವಿ.

ಕರ್ನಾಟಕದ ಧಾರ್ಮಿಕ ಪರಂಪರೆಯಲ್ಲಿ 12ನೇ ಶತಮಾನವನ್ನು ಒಂದು ಚಿರಸ್ಮರಣೀಯ ಘಟ್ಟವನ್ನಾಗಿಸಿದ ಮಹಾನ್‌ವ್ಯಕ್ತಿ ಬಸವಣ್ಣ. ಹುಟ್ಟಿದ್ದು ಕ್ರಿ.ಶ 1131ರ ವೈಶಾಖ ಶುದ್ಧ ಅಕ್ಷಯ ತದಿಗೆಯಂದು, ಇಂಗಳೇಶ್ವರದಲ್ಲಿ. ಸ್ವಂತ ಸ್ಥಳ ಬಾಗೇವಾಡಿಯ ಅಗ್ರಹಾರ. ತಂದೆ ಅದರ ಅಧಿಪತಿ ಮಾದರಸ, ತಾಯಿ ಮಾದಲಾಂಬಿಕೆ.

ತನ್ನ ಸುತ್ತಮುತ್ತ ನಡೆಯುತ್ತಿದ್ದ ಸಾಮಾಜಿಕ, ಧಾರ್ಮಿಕ ಘಟನೆಗಳನ್ನು ಒರೆಹಚ್ಚಿನೋಡುವ ಅಭ್ಯಾಸವನ್ನು ಬಸವಣ್ಣ ಬೆಳೆಸಿಕೊಂಡಿದ್ದರು. ಎಂಟನೆಯ ವಯಸ್ಸಿನಲ್ಲಿಯೇ ವೈದಿಕ ಧರ್ಮದ ಕಂದಾಚಾರಗಳಿಗೆ, ವರ್ಣವಿಭಜನೆಯಿಂದ ಉಂಟಾದ ಮೇಲುಕೀಳೆಂಬ ತಾರತಮ್ಯಕ್ಕೆ ರೋಸಿಹೋಗಿ ಉಪನಯನವನ್ನು ಧಿಕ್ಕರಿಸಿ ಸ್ವಂತ ಊರನ್ನು ಬಿಟ್ಟು ಮಲಪ್ರಭಾ – ಕೃಷ್ಣಾನದಿಗಳ ಸಂಗಮದಲ್ಲಿದ್ದ ಕೂಡಲ ಸಂಗಮಕ್ಕೆ ಹೊರಟುಬಿಟ್ಟರು. ಕೂಡಲಸಂಗಮದಲ್ಲಿ

ಜಾತವೇದ ಮುನಿಗಳ ಮಾರ್ಗದರ್ಶನದಲ್ಲಿ ವೇದೋಪನಿಷತ್ತು, ಪುರಾಣ, ಶಾಸ್ತ್ರಗಳಲ್ಲಿ ಪಾರಂಗತರಾದರು. ಕುಳಿತು ಉಣ್ಣಲು ಯಾರಿಗೂ ಹಕ್ಕಿಲ್ಲ ಎಂಬ ತತ್ವದಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟಿದ್ದ ಬಸವಣ್ಣ ದುಡಿದು ಉಣ್ಣಲು ಮಂಗಳವಾಡಕ್ಕೆ ಹೋದರು. ಅಲ್ಲಿ ಅವರ ಸೋದರಮಾವ ಬಲದೇವರು ಚಾಲುಕ್ಯರ ಸಾಮಂತ ಕಲಚೂರಿ ಬಿಜ್ಜಳನಲ್ಲಿ ಭಂಡಾರಿಯಾಗಿದ್ದರು. ಬಲದೇವರ ಪ್ರಭಾವದಿಂದ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಕರಣಿಕರಾದರು. ಬಲದೇವರ ಮಗಳು ಗಂಗಾಂಬಿಕೆಯನ್ನು ವಿವಾಹವಾದರು.

ಬಸವಣ್ಣನವರು ಮಂಗಳವಾಡಕ್ಕೆ ಹೋದ ಒಂದೆರಡು ವರ್ಷಗಳಲ್ಲಿ ರಾಜಕೀಯ ಗ್ರಹಗತಿಗಳು ಬದಲಾಗತೊಡಗಿದವು. ದುರ್ಬಲನಾಗಿದ್ದ ಚಾಲುಕ್ಯ ಚಕ್ರವರ್ತಿ ತೈಲಪನನ್ನು ಸಿಂಹಾಸನದಿಂದ ತಳ್ಳಿ ತಾನೇ ರಾಜನಾದ ಬಿಜ್ಜಳ ಕಲ್ಯಾಣವನ್ನೇ ನೂತನ ರಾಜಧಾನಿಯಾಗಿ ಮಾಡಿಕೊಂಡ. ಆತ ಮಂಗಳವಾಡದಿಂದ ಬರುವಾಗ ಬಸವಣ್ಣನವರನ್ನೂ ಕರೆತಂದು ಅವರನ್ನು ರಾಜ್ಯದ ಭಂಡಾರಿಯಾಗಿ ನೇಮಿಸಿದ.

ಸಕಲಧರ್ಮಗಳ ಪ್ರಯೋಗಶಾಲೆಯಾಗಿದ್ದ ಭಾರತದಲ್ಲಿ ಹಳೆಯ ಧರ್ಮಗಳು ಮಡುಗಟ್ಟಿ ಪಾಚಿಯಾಗಿ ದುರ್ನಾತವನ್ನು ಬೀರಿ ವಾತಾವರಣವನ್ನು ಕಲುಷಿತಗೊಳಿಸುತ್ತಿದ್ದಾಗ ಅವುಗಳ ಒಡಲಿನಿಂದಲೇ ಮಹಾಪುರುಷರು ಹುಟ್ಟಿಬಂದು ಪ್ರತಿಭಟನಾರ್ಥವಾಗಿ ಹೊಸ ಹೊಸ ಮತಗಳನ್ನು ಸ್ಥಾಪಿಸಿ ಸಮಾಜದ ಆರೋಗ್ಯವನ್ನು ಸುಧಾರಿಸಲು ಪ್ರಯತ್ನಿಸಿದರು. ಅಂತಹವರಲ್ಲಿ ಒಬ್ಬರಾದ ಬಸವಣ್ಣನವರು ವೀರಶೈವ ಧರ್ಮದ ಪ್ರವರ್ತಕರು. ಇಷ್ಟಲಿಂಗಾರ್ಚನೆ, ಷಟ್ಸ್ಥಲಸಿದ್ಧಾಂತ, ಕಾಯಕದಾಸೋಹತತ್ವ, ಭೇದರಹಿತ ಸರ್ವಸಮಾನತಾವಾದ – ಇವು ವೀರಶೈವಧರ್ಮದ ಮೂಲಮಂತ್ರಗಳು. ಇವುಗಳ ಅಡಿಗಲ್ಲಿನ ಮೇಲೆ ಸರ್ವಶೋಷಣೆಗಳಿಂದಲೂ ಮುಕ್ತವಾದ, ಸರ್ವೋದಯ ನಿಷ್ಠವಾದ ಒಂದು ಆದರ್ಶಸಮಾಜವನ್ನು ಕಟ್ಟಬಯಸಿದರು ಬಸವಣ್ಣನವರು. ಸುಮಾರು ಹನ್ನೆರಡು

ವರ್ಷಗಳ ಕಾಲ ಕಲ್ಯಾಣವನ್ನು ಕಾರ್ಯಕ್ಷೇತ್ರವಾಗಿ ಮಾಡಿಕೊಂಡ ಬಸವಣ್ಣನವರು ಸರ್ವಜನರ ಒಳಿತಿಗಾಗಿ ನೋವಿಲ್ಲದ, ಶೋಷಣೆ ಇಲ್ಲದ, ಸ್ವಾರ್ಥವಿಲ್ಲದ ಸಮಾಜದ ನಿರ್ಮಾಣಕ್ಕಾಗಿ ದುಡಿದರು.

ಶ್ರಮಗೌರವವನ್ನು ಗುರುತಿಸಿದ್ದ ಬಸವಣ್ಣನವರು ಕಾಯಕ ತತ್ವಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದರು. ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ಕೆಲಸ ಮಾಡಲೇಬೇಕು. ಯಾವುದೇ ವ್ಯಕ್ತಿ ಕೈಗೊಂಡ ಉದ್ಯೋಗ ಸಮಾಜದ ಅವಶ್ಯಕತೆಯನ್ನು ಪೂರೈಸುವಂತಿರಬೇಕು. ಅಂದಂದಿನ ಕೆಲಸ ಅಂದಂದೇ ಮಾಡಬೇಕು. ಅದರಿಂದಲೇ ಜೀವನ ನಡೆಸಬೇಕು. ಕಾಯಕದಲ್ಲಿ ಮೇಲಿಲ್ಲ ಕೀಳಿಲ್ಲ. ಎಲ್ಲ ಕಾಯಕಗಳೂ ಸಮಾನವಾದವುಗಳೆಂದು ಸಾರಿ ಕಾಯಕವೇ ಕೈಲಾಸವೆಂದ ಬಸವಣ್ಣನವರ ಈ ತತ್ವ ಆ ವರ್ಗಗಳಿಗೆಲ್ಲಾ ಅಪರೂಪದ ಸಮಾಧಾನವನ್ನು, ಆತ್ಮಸ್ಥೈರ್ಯವನ್ನು ತಂದುಕೊಟ್ಟಿತು. ಮಾದಿಗ, ಡೋಹರ, ಸಮಗಾರ, ಮಡಿವಾಳ, ಅಂಬಿಗ, ದನಗಾಹಿ, ಕುರಿಗಾಹಿ ಮುಂತಾದವರಿಗೆಲ್ಲಾ ಸ್ವಾಭಿಮಾನವನ್ನು ತಂದುಕೊಟ್ಟಿತು. ಇಡೀ ಮನೋಧರ್ಮವನ್ನೇ ಪಲ್ಲಟಗೊಳಿಸುವ ಈ ಬೆಳವಣಿಗೆಯಿಂದ ಅವರವರಿಗೆ ಅವರವರ ಕಾಯಕಗಳೇ ಶ್ರೇಷ್ಠವಾಗಿ `ನಾನು ಉಳಿದವರಿಗಿಂತ ಕಡಿಮೆ ಅಲ್ಲ' ಎನ್ನುವ ಆತ್ಮಪ್ರತ್ಯಯವನ್ನು ಬೆಳಸಿತು. `ನೀನು ಯಾರೇ ಆಗಿರು ದುಡಿದು ತಿನ್ನು. ಇನ್ನೊಬ್ಬರ ದುಡಿತದ ಮೇಲೆ ಬದುಕಬೇಡ' ಎಂದು ನಿರ್ದಾಕ್ಷಿಣ್ಯವಾಗಿ ನಿರ್ದೇಶಿಸಿದ ಕಾಯಕತತ್ವ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ `ನಿನಗೆ ಸಿಕ್ಕ ಪ್ರತಿಫಲದಲ್ಲಿ ನಿನಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಂಡು ಮಿಕ್ಕಿದ್ದನ್ನು ಸಮಾಜಕ್ಕೆ ಕೊಡು' ಎಂದೂ ಹೇಳಿತು. ಮನುಷ್ಯನ ದುರಾಸೆ, ಅಹಂಕಾರ, ಶೋಷಣೆ ಇತ್ಯಾದಿಯನ್ನು ನಿಗ್ರಹಿಸಿದ ಈ ತತ್ವ ವೀರಶೈವಧರ್ಮದ ಮರೆಯಲ್ಲಿ ಹುದುಗಿದ್ದ `ಮಾನವ ಧರ್ಮದ ವಿರಾಟ್ ಸ್ವರೂಪವನ್ನು ಅನಾವರಣಗೊಳಿಸಿತು. ಮೇದಾರ, ನೇಕಾರ, ಬೇಡ, ಢಕ್ಕೆ, ಚಮ್ಮಾರ ಮುಂತಾದ ಯಾವುದೇ ಸತ್ಯಶುದ್ಧ ಕಾಯಕ ಪೂಜೆಗೆ ಸಮಾನವೆಂದು

ಘೋಷಿಸಿ ವೃತ್ತಿ ತಾರತಮ್ಯವನ್ನು ಅಲ್ಲಗಳೆದು ಕಾಯಕನಿಷ್ಠೆಯನ್ನು ಸಾರಿ ಬದುಕಿನ ಪರಮಾರ್ಥವನ್ನು ಕಾಯಕದ ಮೂಲಕವೇ ಸಾಧಿಸಬೇಕೆಂದ ಈ ತತ್ವ ವೀರಶೈವ ಧರ್ಮವನ್ನು ವಿಶ್ವ ಧರ್ಮಕ್ಕೇರಿಸಿತು.

ಕೂಡಲಸಂಗಮದೇವ ಎಂಬ ಅಂಕಿತದಲ್ಲಿ ರಚಿತವಾದ ಬಸವಣ್ಣನವರ ವಚನಗಳು ಸದಾಚಾರ ಸ್ಮೃತಿಗಳು. ಮನುಷ್ಯಜನ್ಮ ಸಾರ್ಥಕವಾಗಬೇಕಾದರೆ ಸಮಾಜದಲ್ಲಿ ಉಪಕಾರಿಯಾಗಿ ಬಾಳಬೇಕು

'ಮರ್ತ್ಯಲೋಕವೆಂಬುದು ಕರ್ತಾರನಕಮ್ಮಟವಯ್ಯ:
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲ ಸಂಗಮದೇವಾ'

ಎಂದ ಬಸವಣ್ಣನವರು ಇಹಪರಗಳೆರಡನ್ನೂ ಸಾಧಿಸುವ ಸುಲಭ ಮಾರ್ಗವೆಂದರೆ ದಯಾಶೀಲರಾಗಿರುವುದು ಎಂಬುದನ್ನು

'ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ'

ಎಂದರು. ಹೀಗೆ ಸಕಲ ಜೀವರಾಶಿಗಳಲ್ಲಿ ಸಾತ್ವಿಕಪ್ರೇಮದ ರೂಪವಾದ ಅಹಿಂಸೆ, ದಯೆಗಳ ಆವಶ್ಯಕತೆಯನ್ನು ಒತ್ತಿಹೇಳಿ ಧರ್ಮದ ಸಾರವನ್ನು ಸರಳವಾಗಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಹೇಳಿ ಧರ್ಮಕ್ಕೆ ಒಂದು ಹೊಸ ವ್ಯಾಖ್ಯಾನವನ್ನೇ ಬರೆದರು ಬಸವಣ್ಣನವರು.

ಬಸವಣ್ಣನವರ ಧಾರ್ಮಿಕ ಆಚರಣೆಯ ಇನ್ನೊಂದು ಮುಖ್ಯ ಅಂಶವೆಂದರೆ ಅವರವರ ಪೂಜೆಯನ್ನು ಅವರವರೇ ಮಾಡಬೇಕು, ಧಾರ್ಮಿಕ ಉದ್ಧಾರವನ್ನು ಅವರವರೇ ಕಂಡುಕೊಳ್ಳಬೇಕು ಎಂಬುದು.

ಬಸವಣ್ಣನವರು ಸಮಾಜದಲ್ಲಿ ಬೇರುಬಿಟ್ಟಿದ್ದ ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ತೊಡೆದುಹಾಕಲು ಶ್ರಮಿಸಿದರು.

`ಮಡಕೆದೈವ, ಪೊರಕೆದೈವ ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ,
ಕೊಳಗ ದೈವ, ಗಿಣ್ಣಿಲುದೈವ ಕಾಣಿರೋ!
ದೈವ, ದೈವವೆಂದು ಕಾಲಿಡಲಿಂಬಿಲ್ಲ!!
ದೈವನೊಬ್ಬನೆ ಕೂಡಲಸಂಗಮದೇವ '

ಎಂದ ಬಸವಣ್ಣನವರು ಮುನ್ನೂರ ಮೂವತ್ತು ಕೋಟಿ ದೇವತೆಗಳನ್ನು ಸೃಷ್ಟಿಸಿದವರನ್ನು ಛೇಡಿಸುತ್ತಾ ಆ ಕೀಳುದೈವಗಳು ಕಲ್ಲುಗುಡ್ಡಗಳಲ್ಲಿ, ಊರ ದಾರಿಗಳಲ್ಲಿ, ಕೆರೆಬಾವಿ, ಹೂಗಿಡಗಳಲ್ಲಿ ಮನೆಮಾಡಿಕೊಂಡು ಅಜ್ಞಾನಿಗಳನ್ನು, ಅಮಾಯಕರನ್ನು ಹಿಂಸಿಸುತ್ತಿವೆ. ಅಲ್ಲದೆ ಮಾರಯ್ಯ, ಬೀರಯ್ಯ, ಅಂತರ ಬೆಂತರ, ಕಾಳಯ್ಯ, ಕೇತಯ್ಯ ಎಂಬ ಹೆಸರುಗಳಿಂದ ಹೂಂಕರಿಸುತ್ತಿವೆ ಎಂದು ಗೊತ್ತುಗುರಿ ಇಲ್ಲದೆ ನೂರೆಂಟು ದೇವರುಗಳನ್ನು ಪೂಜಿಸುವ ಅವಿವೇಕಿಗಳನ್ನು ಲೇವಡಿಮಾಡಿ ದೇವನೊಬ್ಬನೇ ಎಂದು ಸಾರಿದರು. ಮುಂದುವರಿದು

`ಅರುಗು ತಿಂದು ಕರಗುವ ದೈವವ,
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?
ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ'

ಹೀಗೆ ಸಂದರ್ಭಕ್ಕೆ ತಕ್ಕಹಾಗೆ ಕರಗುವ, ಮುರುಟುವ, ಮಾರಿಸಿಕೊಳ್ಳುವ, ಹೂಳಿಸಿಕೊಳ್ಳುವ ದೈವವನ್ನು ದೇವರೆಂದು ಹೇಗೆ ಕರೆಯಲಿ ಎಂದು ಚುಚ್ಚಿದರು. ಬಸವಣ್ಣನವರ ದೃಷ್ಟಿಯಲ್ಲಿ ದೇವಲೋಕ, ಮರ್ತ್ಯಲೋಕಗಳು ಎಲ್ಲಿಯೂ ಇಲ್ಲ. ಸತ್ತನಂತರ ಯಾರೂ ಸ್ವರ್ಗಕ್ಕಾಗಲೀ ನರಕಕ್ಕಾಗಲೀ ಹೋಗುವುದಿಲ್ಲ. ಸತ್ಯವನುಡಿವುದೆ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ.

ಬಸವಣ್ಣನವರು ಕಟ್ಟಬಯಸಿದ ಸಮಾಜದ ತಳಹದಿ ಧರ್ಮ. ಆದರೆ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಗೆ ಅಲ್ಲಿ ಅವಕಾಶವಿಲ್ಲ. ಕ್ರಾಂತಿಕಾರಿ ಮನೋಭಾವದಿಂದ ಸಮಾಜ ಸುಧಾರಣೆಗೆ ತಮ್ಮನ್ನು ತೊಡಗಿಸಿಕೊಂಡ ಬಸವಣ್ಣನವರು ಸಾಮಾಜಿಕ ಅಸಮತೋಲನ, ಅಸಮಾನತೆ, ಮೇಲುಕೀಳೆಂಬ ತರತಮಭಾವವೇ ಮೊದಲಾದ ಸಾಮಾಜಿಕ ಅನಿಷ್ಟಗಳ ಮೂಲೋತ್ಪಾಟನೆಗೆ ಶ್ರಮಿಸಿದರು. ಹುಟ್ಟಿನ ಆಧಾರದ ಮೇಲೆ ನೂರಾರು ಜಾತಿಗಳು ಸಮಾಜದಲ್ಲಿ ವಿಜೃಂಭಿಸಿ ವರ್ಣಾಶ್ರಮಧರ್ಮ ಪದ್ಧತಿಯ ತಾರತಮ್ಯದಿಂದ ಅಸ್ಪೃಶ್ಯರು, ಶೂದ್ರರು ಅನ್ನಿಸಿಕೊಂಡವರು ಕೀಳರಿಮೆಯಿಂದ ಕುಗ್ಗಿಹೋಗಿದ್ದಾಗ ಅಸ್ಪೃಶ್ಯತೆಯನ್ನು ಬುಡಸಮೇತ ಕಿತ್ತೊಗೆದು

'ಕೊಲುವನೇ ಮಾದಿಗ, ಹೊಲಸ ತಿಂಬುವನೇ ಹೊಲೆಯ
ಕುಲವೇನೋ, ಅವಂದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು'

ಎನ್ನುತ್ತಾ ಕುಲದ ಕೋಟೆಗೆ ಕಿಚ್ಚು ಹಚ್ಚಿದರು. ನಿಜವಾದ ಕುಲದ ರಹಸ್ಯವನ್ನು ತಿಳಿಸಿದರು. ನಿಜವಾದ ಕುಲಜರಾಗಲು ಕುಲಹೀನರಿಗೆಲ್ಲಾ ಕರೆಕೊಟ್ಟರು. ಕನಿಷ್ಠ ಕುಲದಲ್ಲಿ ಹುಟ್ಟಿ ಸಾಧನೆ, ಯೋಗ್ಯತೆಗಳಿಂದ ಶ್ರೇಷ್ಠರಾದವರ ಬಗೆಗೆ ಜನರಿಗೆ ತಿಳಿಹೇಳಿದರು. ಅವರಂತೆ ನೀವೂ ಏಕಾಗಬಾರದೆಂದು ಅಂತರಂಗವನ್ನು ತಟ್ಟಿದರು. ಅಳಿದುಳಿದ ಅಳುಕನ್ನೂ ತೊಡೆದುಹಾಕಲು ಪುರಾಣಗಳಿಂದ ನಿದರ್ಶನವನ್ನು ತೆಗೆದು ತೋರಿಸಿದರು.

'ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು!
ಕುಲವನರಸದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ ದೂರ್ವಾಸ ಮಚ್ಚಿಗ,

ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ

ಮೂರು ಭುವನವರಿಯೆ ನಾವಿದ ಕಾಣಿ ಭೋ!'

ಎಂದು ಹೇಳಿ ಆ ವರ್ಗದವರ ಆತ್ಮವಿಶ್ವಾಸವನ್ನು ಬೆಳಸಿದರು.

ಬಸವಣ್ಣನವರು ಮೊಟ್ಟಮೊದಲ ಸ್ತ್ರೀಸ್ವಾತಂತ್ರ್ಯ ಪ್ರತಿಪಾದಕರು. ತಾವು ಸ್ಥಾಪಿಸಿದ `ಅನುಭವಮಂಟಪ'ದಲ್ಲಿ ಲಿಂಗಭೇದಗಳನ್ನು ಲೆಕ್ಕಿಸದೆ ಸಮಾನ ಮನಸ್ಕರೆಲ್ಲರೂ ಒಂದುಕಡೆ ಸೇರಿ, ಚಿಂತಿಸಿ, ಆಲೋಚಿಸಿ, ತಮಗೆ ಅನಿಸಿದ್ದನ್ನು ಅಭಿವ್ಯಕ್ತಿಸುವ ಅವಕಾಶವನ್ನು ಕಲ್ಪಿಸಿಕೊಟ್ಟರು. ಸಮಾಜದ ವಿವಿಧ ಸ್ತರಗಳಿಂದ ಬಂದ ಶಿವಶರಣೆಯರು ಒಂದೆಡೆ ಸೇರಿ ಸಮಾವೇಶಗೊಂಡರು. ಅವರು ತಮ್ಮ ಪೂರ್ವಾಶ್ರಮದ ಜಾತಿಭೇದ, ಅಂತರ–ಅಂತಸ್ತುಗಳನ್ನು ಮರೆತು ಬಸವಣ್ಣನವರು ನಿರ್ಮಿಸಿದ ಸರ್ವಸಮಾನಧರ್ಮದ ವೇದಿಕೆಯ ಮೇಲೆ ಒಂದಾಗಿ ಬೆರೆತು ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಚಿಂತನೆಗಳನ್ನು ಹಂಚಿಕೊಂಡರು.

ಸಾಮಾಜಿಕ ಅನಿಷ್ಟಗಳನ್ನು ತೊಡೆದುಹಾಕಲು, ಅಸ್ಪೃಶ್ಯತೆಯನ್ನು ಮೂಲೋತ್ಪಾಟನೆ ಮಾಡಲು ಬಸವಣ್ಣನವರಿಗೆ ವಚನಗಳ ರಚನೆಗೆ ವಸ್ತುವಿಗಾಗಿ ತಡಕಾಡುವ ಪ್ರಮೇಯವೇ ಬರಲಿಲ್ಲ. ಸಮಾಜದ ಸ್ಥಿತಿಗತಿಗಳೇ ಅವರ ವಚನಗಳಿಗೆ ಮೂಲಪ್ರೇರಣೆಯಾದವು. ಬಸವಣ್ಣನವರು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿದ್ದ ಸಾಮಾಜಿಕ ಪಿಡುಗುಗಳು, ಓರೆಕೋರೆಗಳು, ಅಂಕುಡೊಂಕುಗಳು, ವಿಷಮತೆ ಕ್ರೂರತೆಗಳನ್ನು ತಮ್ಮ ವಚನಗಳ ವಸ್ತುವಾಗಿಸಿಕೊಂಡರು.

ಸಾಮಾನ್ಯ ಜನರನ್ನು ಸಾಮಾಜಿಕ ಅನಿಷ್ಟಗಳ ವಿರುದ್ಧ ಬಡಿದೆಬ್ಬಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲೇ ತಿಳಿಯಹೇಳಬೇಕೆಂಬ ಮರ್ಮವನ್ನು ಅರಿತಿದ್ದ ಬಸವಣ್ಣ ಧರ್ಮವನ್ನು ಕನ್ನಡಿಸಿ ಹೇಳಿದ್ದು ಮಾತ್ರವಲ್ಲದೆ ಕನ್ನಡವನ್ನು ಸಾಹಿತ್ಯದ ಮಾಧ್ಯಮವಾಗಿ, ಅದರಲ್ಲೂ ಜನತೆಯ ಆಡುನುಡಿಯಲ್ಲಿ ಮನಕ್ಕೆ ನಾಟುವಂತಹ ಮಾತುಗಳಲ್ಲಿ ವಚನಗಳನ್ನು ರಚಿಸಿ ಆಡುನುಡಿಯನ್ನು ಸಾಹಿತ್ಯದ ಮಟ್ಟಕ್ಕೆ ಏರಿಸಿದರು.

12 ನೇ ಶತಮಾನದಲ್ಲಿ ಬಸವಣ್ಣನವರು ಸಮಾನ ಮನಸ್ಕರೊಡನೆ ಸೇರಿ ನಡೆಸಿದ ಸಮಗ್ರಕ್ರಾಂತಿ ಜಾಗತಿಕಮಟ್ಟದಲ್ಲಿ ದಾಖಲಿಸಲೇಬೇಕಾದ ಒಂದು ಅದ್ಭುತ ಜಾಗತಿಕ ಘಟನೆ. ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆ, ಜಾತಿವಿನಾಶ, ದಲಿತೋದ್ಧಾರ, ದಾರಿದ್ರ್ಯವಿಮೋಚನೆ ಇವುಗಳಿಗಾಗಿ ಹೋರಾಡಿದ ಬಸವಣ್ಣ ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲು. ಬಸವಣ್ಣನವರ ಕಾಲದಲ್ಲಿ ಏನೇನು ತಪ್ಪುಗಳು, ಸಮಸ್ಯೆಗಳು ಇದ್ದವೋ ಅವುಗಳೆಲ್ಲವೂ ಈಗಲೂ ಇವೆ. ಈ ದುರ್ಭರ ಸನ್ನಿವೇಶದಲ್ಲಿ ಬಸವಣ್ಣನವರ ಜೀವನ, ಸಂದೇಶಗಳು ಹೆಚ್ಚು ಪ್ರಸ್ತುತ.

ಕಠಿಣ ಪದಗಳ ಅರ್ಥ

ಹುಸಿ	–	ಸುಳ್ಳು, lie
ಮುನಿ	–	ಕೋಪಗೊಳ್ಳು, to get angry
ಇದಿರು	–	ಎದುರು, in front of
ಹಳಿ	–	ಬಯ್ಯು, ನಿಂದಿಸು to scold, to blame
ತಿರುಳು	–	essence
ನಿಖರವಾಗಿ	-	accurately
ಸರ್ವಗ್ರಾಹ್ಯ	–	acceptable by one and all
ಅನುಭಾವಿ	–	a mystic
ಸಮಾಜಸುಧಾರಕ	–	social reformer
ಕ್ರಾಂತಿಕಾರ	–	revolutionary
ಕಾಯಕ	–	physical labour, work
ಮೇಲಾಗಿ	–	above all
ಚಿರಸ್ಮರಣೀಯ	–	ever memorable

ಮೇಲುಕೀಳು	–	differenciation in any hierarchy
ತಾರತಮ್ಯ	–	discrimination
ಸಾಮಂತ	–	chieftain
ಭಂಡಾರಿ	–	treasurer
ಕರಣಿಕ	–	accountant
ಗ್ರಹಗತಿ	–	planetary position
ಮಡುಗಟ್ಟು	–	to stagnant
ಪಾಚಿ/ಪಾಚೆ	–	alage, green stuff or slime produced in or on stagnant water
ದುರ್ನಾತ	–	foul smell
ಪ್ರವರ್ತಕ	–	a patron, a promoter
ಒಳಿತು	–	good, that which is proper
ಶೋಷಣೆ	-	exploitation
ಶ್ರಮಗೌರವ	-	dignity of labour
ಆತ್ಮಸ್ಥೈರ್ಯ	–	self determination
ಡೋಹ	–	a cast of tumblers and merry-andrews
ಸಮಗಾರ	–	ಚಮ್ಮಾರ, ಮೋಚಿ, cobbler
ಮಡಿವಾಳ	–	washerman
ಅಂಬಿಗ	–	boatman
ದನಗಾಹಿ	–	cowherd
ಕುರಿಗಾಹಿ	–	shepherd
ಪಲ್ಲಟಗೊಳಿಸು	–	transform, to change, to displace
ಆತ್ಮಪ್ರತ್ಯಯ	–	self respect
ನಿರ್ದಾಕ್ಷಿಣ್ಯ	–	uncourtious, cut and dry

ನಿರ್ದೇಶಿಸು – to direct

ದುರಾಸೆ – greedyness

ಅಹಂಕಾರ – ego

ಅನಾವರಣಗೊಳಿಸು – to unveil

ಮೇದಾರ – basket maker

ನೇಕಾರ – weaver

ಬೇಡ – hunter

ಢಕ್ಕೆ – drummer

ಅಂಕಿತ – signature line

ಮರ್ತ್ಯಲೋಕ – human world

ಕರ್ತಾರ – creator, Lord Brahma

ಕಮ್ಮಟ – workshop

ಜೀವರಾಶಿ – the aggregate of living beings

ಸಾರ – ತಿರುಳು, essence

ವ್ಯಾಖ್ಯಾನ – definition

ಬೇರುಬಿಡು – to begin, deep rooted

ಮೂಢನಂಬಿಕೆ – superstition

ತೊಡೆದುಹಾಕು – to wipe out, to destroy

ಮೊರ – winnowing pan

ಹಣಿಗೆ – ಬಾಚಣಿಗೆ, comb

ಬಿಲ್ಲನಾರಿ – a bow-string

ಕೊಳಗ – a measure of capacity

ಗಿಣ್ಣಿಲು – cup

ಛೇಡಿಸು	–	to tease, to taunt
ಹೂಂಕರಿಸು	-	to roar
ಲೇವಡಿಮಾಡು	-	to tease
ಸಾರು	–	to proclaim
ಅರಗು	–	wax
ಉರಿ	–	flame
ಮುರುಟು	–	to shrink
ಅವಸರ	–	ಅಗತ್ಯ , ಆತುರ, need, haste
ಅಂಜಿಕೆ	–	fear
ಹೂಳು	–	to burry
ಸ್ವರ್ಗ	–	heaven
ನರಕ	–	hell
ನುಡಿ	–	to speak
ಮಿಥ್ಯ	–	lie
ಆಚಾರ	–	conduct, manner of action
ಅನಾಚಾರ	–	improper in behaviour,departure from that which is customary
ತಳಹದಿ	–	foundation
ಕ್ರಾಂತಿಕಾರಿ	–	revolutionary
ಮನೋಭಾವ	–	attitude
ತೊಡಗಿಸಿಕೊಳ್ಳು	–	to involve oneself
ಸಾಮಾಜಿಕ ಅಸಮತೋಲನ	–	social imbalance
ಅಸಮಾನತೆ	–	inequality
ತರತಮಭಾವ	–	ತಾರತಮ್ಯ, discrimination

ಸಾಮಾಜಿಕ ಅನಿಷ್ಟ	–	social evil
ಮೂಲೋತ್ಪಾಟನೆ	–	ನಾಶ, wiping away
ವರ್ಣಾಶ್ರಮಧರ್ಮ ಪದ್ಧತಿ	–	the duties of caste and order
ಶೂದ್ರ	–	the man of the fourth caste
ಕೀಳರಿಮೆ	–	inferiority complex
ಕುಗ್ಗಿಹೋಗು	–	to sink, to be depressed
ಬುಡಸಮೇತ	–	with the roots
ಕಿತ್ತೊಗೆ	–	to pluck and throw
ಹೊಲಸು	–	filth
ತಿಂಬುವವನು	–	one who eats
ಕಿಚ್ಚುಹಚ್ಚು	–	to lit the fire, to burn
ಕುಲಜ	–	well-born
ಕುಲಹೀನ	–	a man of low birth, an outcast
ಅಳಿದುಳಿದ	–	remaining
ಅಳುಕು	–	hesitation
ಪುರಾಣ	-	epic
ಬೋಯಿತಿ	–	woman of fishermen community
ಮಾತಂಗಿ	–	ಚಾಂಡಾಲಿ, a woman of low community
ಅರಸು	–	ಹುಡುಕು, to search
ಕಬ್ಬಿಲ	–	ಬೇಡ, hunter
ಮಚ್ಚಿಗ	–	ಚಮ್ಮಾರ, a cobbler
ಕಮ್ಮಾರ	–	black smith
ನಾವಿದ	–	ಹಜಾಮ, a barber

ಪ್ರತಿಪಾದಕ	–	one who establishes something
ಲೆಕ್ಕಿಸು	–	ಪರಿಗಣಿಸು, to consider, to account
ಚಿಂತಿಸು	–	to think
ಅಭಿವ್ಯಕ್ತಿಸು	–	to express
ಪೂರ್ವಾಶ್ರಮ	–	any of the periods of religious life which precedes that of a Sanyasin
ಅಂತಸ್ತು	-	status
ತಡಕಾಡು	–	to search
ಪಿಡುಗು	–	trouble
ಅಂಕುಡೊಂಕು	–	disorder
ಬಡಿದೆಬ್ಬಿಸು	–	to make alert
ಮರ್ಮ	–	secret
ಮಾಧ್ಯಮ	–	medium
ಆಡುನುಡಿ	–	spoken language
ಸಮಗ್ರಕ್ರಾಂತಿ	–	total revolution
ಸಮಾನ ಮನಸ್ಕರು	–	like minded people
ಜಾಗತಿಕಮಟ್ಟ	–	international level
ದಾಖಲಿಸು	–	to record
ಜಾತಿವಿನಾಶ	–	annihilation of caste
ದಾರಿದ್ರ್ಯವಿಮೋಚನೆ	–	eradication of poverty
ಮಿಗಿಲು	–	superior, excellent
ದುರ್ಭರ ಸನ್ನಿವೇಶ	–	hard times
ಸಂದೇಶ	-	message
ಪ್ರಸ್ತುತ	–	relevant

ಅಭ್ಯಾಸಗಳು

I. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆರಿಸಿ ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

(ಅಮಾಯಕ, ಅಡಿಗಲ್ಲು, ಮೇಲಾಗಿ, ಗ್ರಹಗತಿ, ತಳ್ಳು, ಬಗೆಗೆ, ಜಾಗತಿಕ, ಪಾಟಿ, ಹೆಜ್ಜೆ, ತಮ್ಮ, ಯಾರೇ)

ಅ. ರುಕ್ಮಿಣಿಯ ಮಗು .... ಹಾಕುವುದನ್ನು ಕಲಿಯಿತು.

ಆ. ಈ ಗಾಲಿ ಕುರ್ಚಿಯನ್ನು ಸ್ವಲ್ಪ ....

ಇ. ಹಾ.ಮಾ.ನಾಯಕರು ಒಳ್ಳೆಯ ಭಾಷಾಶಾಸ್ತ್ರಜ್ಞರು, ಅಂಕಣಕಾರರು, ವಿಮರ್ಶಕರು .... ಒಬ್ಬ ಸ್ನೇಹಮಯಿ.

ಈ. ಆ ಹೊಂಡದಲ್ಲಿ ತುಂಬಾ .... ಇದೆ.

ಕ. ಅವರ ಮನೆಗೆ .... ಸರಿಯಾಗಿ ಹಾಕಿಲ್ಲ.

ಗ. ಸತ್ತವರ .... ಕೆಟ್ಟಮಾತು ಆಡಬಾರದು.

ಚ. ಜೈಲಿನಲ್ಲಿರುವ ಆ ಖೈದಿ ತುಂಬಾ ....

ಜ. ....ಮಾರುಕಟ್ಟೆಯ ಜೊತೆ ನಾವು ಇಂದು ಸ್ಪರ್ಧಿಸಬೇಕಾಗಿದೆ.

ಟ. ....ಕೇಳಿದರೂ ನನ್ನ ಉತ್ತರ ಇದೇ.

ಡ. ವೈದೇಹಿ ....ಮಗನ ಮನೆಗೆ ಹೋದರು.

ತ. ಯಾಕೋ ನನ್ನ .... ಸ್ವಲ್ಪವೂ ಚೆನ್ನಾಗಿಲ್ಲ.

II. ಬಿಡಿಸಿ ಬರೆಯಿರಿ

ಅ. ಲೆಕ್ಕಿಸದೆ

ಆ. ಏಕಾಗಬಾರದು

ಇ. ತದಿಗೆಯಂದು

ಈ. ಘಟ್ಟವನ್ನಾಗಿಸಿದ

ಕ. ಅಂದಂದಿನ

ಗ. ಅಳಿದುಳಿದ

ಚ. ಪರಮಾರ್ಥ ಜ. ಮಡುಗಟ್ಟು

ಟ. ಮೂಲೋತ್ಪಾಟನೆ ಡ. ಹಕ್ಕಿಲ್ಲ

III. ಕೆಳಕಂಡ ವಾಕ್ಯಗಳನ್ನು ನಿಷೇಧಾರ್ಥಕ ವಾಕ್ಯಗಳಾಗಿ ಬದಲಾಯಿಸಿ

ಅ. ಅವರು ಮೈಸೂರಿನಲ್ಲಿ ಇದಾರೆ.

ಆ. ನೀನು ಇಲ್ಲಿಂದ ಹೊರಟುಹೋಗು.

ಇ. ಮಕ್ಕಳು ಟಿ.ವಿ. ನೋಡಬೇಕು.

ಈ. ನಾನು ನಾಳೆ ದೆಹಲಿಗೆ ಹೋಗುತ್ತೇನೆ.

ಕ. ನೀವು ನಮ್ಮ ಮನೆಗೆ ಬರಬಹುದು.

ಗ. ನಗುವಿರುವ ಮನೆ ಅದು.

ಚ. ರಾಜಕೀಯ ವ್ಯಕ್ತಿಗಳೆಲ್ಲರೂ ಹೊಸ ಹೊಸ ಪಕ್ಷಗಳನ್ನು ಕಟ್ಟಬಲ್ಲರು.

ಜ. ರವಿ ಜೋಗ್‌ಫಾಲ್ಸ್ ನೋಡಿದ್ದಾನೆ.

ಟ. ನೀನು ಓದಿದ ಪುಸ್ತಕ ನಾನು ಓದಿದೆ.

IV. ಆವರಣದಲ್ಲಿ ಕೊಟ್ಟಿರುವ ನಿರ್ದೇಶನದಂತೆ ವಾಕ್ಯಗಳನ್ನು ಕೂಡಿಸಿ

ಅ. 1. ಕಿರೀಟಿ ಕೆಲಸ ಮಾಡಿದ.

2. ಕಿರೀಟಿ ಮನೆಗೆ ಹೋದ.

(combine using verbal participle)

ಆ. 1. ದಮಯಂತಿ ಕೆಲಸ ಮಾಡಲಿಲ್ಲ.

2. ಆ ಕೆಲಸ ನಾನು ಮಾಡಿದೆ.

(combine using relative participle)

ಇ. 1. ಮಾನ್ಯಮಂತ್ರಿಗಳು ನಾಳೆ ಬರುತ್ತಾರೆ.

2. ಆಗ ಅವರನ್ನು ಬಂದು ನೋಡಿ.

(combine using adverbial clause of time)

ಈ. 1. ನೀನು ಆ ಪುಸ್ತಕವನ್ನು ಓದಲಿಲ್ಲ.

2. ವಾಪಸ್ ಕೊಟ್ಟೆ.

(combine using verbal participle)

ಕ. 1. ನಿನ್ನ ಹೆಸರು ಹೇಳು.

2. ನಿನಗೆ ಒಂದು ಚಾಕೊಲೇಟ್ ಕೊಡ್ತೀನಿ.

(combine using conditional form)

ಗ. 1. ನಾನು ಎರಡು ಸಲ ಆ ಪುಸ್ತಕವನ್ನು ಓದಿದೆ.

2. ಆದರೆ ಒಂದು ಅಕ್ಷರವೂ ನನ್ನ ತಲೆಗೆ ಹೋಗಲಿಲ್ಲ.

(combine using emphatic particle `ಊ')

V. ಕೆಳಕಂಡ ಪದ/ಪದಪುಂಜಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ

ಅ. ಎಂಬ	ಜ. ಅಂಕುಡೊಂಕು
ಆ. ಒರೆಹಚ್ಚು	ಟ. ಧಿಕ್ಕರಿಸು
ಇ. ಚಿರಸ್ಮರಣೀಯ	ಡ. ಬುಡಸಮೇತ
ಈ.ಬೇರುಬಿಡು	ತ. ಲೇವಡಿಮಾಡು
ಕ. ಎನ್ನುವ	ದ. ವ್ಯಾಖ್ಯಾನ
ಗ. ಕಿಚ್ಚುಹಚ್ಚು	ಪ. ಕೀಳರಿಮೆ
ಚ. ಮಿಗಿಲು	ಬ. ಎಂಬುದಾಗಿ

VI. ಟಿಪ್ಪಣಿ ಬರೆಯಿರಿ

ಅ. ಕಾಯಕ ತತ್ವ

ಆ. ಭೇದರಹಿತ ಸರ್ವಸಮಾನತೆ

ಇ. ಶ್ರಮಗೌರವ

ಈ. ಅಸಮಾನತೆ

VII. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಕೂಡಲಸಂಗಮದೇವನನ್ನು ಒಲಿಸಿಕೊಳ್ಳುವ ರೀತಿ ಯಾವುದು?

ಆ. ವೀರಶೈವಧರ್ಮದ ಮೂಲಮಂತ್ರಗಳು ಯಾವುವು?

ಇ. ಬಸವಣ್ಣನವರು `ಧರ್ಮಕ್ಕೆ' ನೀಡಿದ ಹೊಸ ವ್ಯಾಖ್ಯಾನವೇನು?

ಈ. ಏಕದೇವತೋಪಾಸನೆಯನ್ನು ಬಸವಣ್ಣನವರು ಯಾವ ರೀತಿ ಪ್ರತಿಪಾದಿಸಿದರು?

ಕ. ದೇವಲೋಕ, ಮರ್ತ್ಯಲೋಕಗಳಿಗೆ ಬಸವಣ್ಣನವರು ನೀಡಿದ ಹೊಸ ವ್ಯಾಖ್ಯಾನವೇನು?

ಗ. ಬಸವಣ್ಣನವರು ಎಂತಹ ಸಮಾಜವನ್ನು ಕಟ್ಟಬಯಸಿದ್ದರು?

ಚ. ಬಸವಣ್ಣನವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಹೇಗೆ ಪ್ರಯತ್ನಪಟ್ಟರು?

ಜ. ಸ್ತ್ರೀಪುರುಷ ಸಮಾನತೆಯನ್ನು ಸಾಧಿಸಲು ಬಸವಣ್ಣನವರು ಕೈಗೊಂಡ ಕ್ರಮವೇನು?

ಟ. ಬಸವಣ್ಣನವರು ಇಂದಿಗೂ ಪ್ರಸ್ತುತ. ಹೇಗೆ?

VIII. ನೀವು ಓದಿ ತಿಳಿದ/ ಕೇಳಿದ/ ಕಂಡರಿತ ಸಮಾಜಸುಧಾರಕರೊಬ್ಬರ ಪರಿಚಯ ಮಾಡಿಕೊಡಿ

IX. ಕನ್ನಡಕ್ಕೆ ಅನುವಾದಿಸಿ

It was under Mahatma Gandhi that the Indian Nationalist Movement grew into wide spread anti-imperialist mass movement. Born in Porabandar in Kathiawad, Gujarat in 1869, Mohandas Karamchand Gandhi had his early education in Rajkot. After completing his law course in England, he went to South Africa to start

his legal practice. In South Africa, in his struggle against the racialist policy of the government, he perfected his philosophy of action to fight oppression and racial discrimination. He adopted the same method after he returned to India in 1914 to fight against the British oppression in India called Satyagraha. Gandhiji made the nationalist movement a mass movement by winning the cooperation of the peasants, workers and the down trodden sections of the society and by involving them in the freedom struggle.

Gandhiji was a great social and economic reformer. He compaigned against the inhuman practice of untouchability. He preached equality and brotherhood of men.

20. ಜಡೆ

ಲಲನೆಯರ ಬೆನ್ನಿನೆಡೆ
ಹಾವಿನೊಲು ಜೋಲ್ವ ಜಡೆ.
ಕಾಳಿಂದಿಯಂತಿಳಿದು, ಕೊರಳೆಡೆಗೆ ಕವಲೊಡೆದು
ಅತ್ತಿತ್ತ ಹರಿದ ಜಡೆ;
ಚೇಳ್ ಕೊಂಡಿಯಂಥ ಜಡೆ,
ಮೋಟು ಜಡೆ, ಚೋಟು ಜಡೆ,
ಚಿಕ್ಕವರ ಚಿನ್ನ ಜಡೆ!
ಎಣ್ಣೆ ಕಾಣದೆ ಹಿಣಿಲು ಹಿಣಿಲಾಗಿ ಹೆಣೆದ ಜಡೆ
ಬೆವರಿನಲಿ ಧೂಳಿನಲಿ ನೆನೆದಂಟಿಕೊಂಡಿರುವ
ಗಂಟು ಜಡೆ:
ಅಕ್ಕ ತಂಗಿಯ ಮುಡಿಯ
ಹಿಡಿದು ನಾನೆಳೆದಂಥ
ಮಲ್ಲಿಗೆಯ ಕಂಪು ಜಡೆ
ಕೇದಗೆಯ ಹೆಣೆದ ಜಡೆ.
ಮಾತೃಮಮತಾವೃಕ್ಷ ಬಿಟ್ಟ ಬಿಳಲಿನಂತೆ
ಹರಡಿರುವ ತಾಯ ಜಡೆ!
"ಕುರುಕುಲ ಜೀವಾಕರ್ಷಣ ಪರಿಣತ" –ಆ
ಪಾಂಚಾಲಿಯ ಜಡೆ!
ಸೀತೆಯ ಕಣ್ಣೀರೊಳು ಮಿಂದ ಜಡೆ
ಓ ಓ ಈ ಜಡೆಗೆಲ್ಲಿ ಕಡೆ!
ಸಂಜೆಯಲಿ ಹಗಲು ಕೆದರುವ ಕತ್ತಲೆಯ

ಕಾಳ ಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ
ಬೆಳಕು ಜಡೆ
ಒಮ್ಮೊಮ್ಮೆ ಮುಗಿಲಲ್ಲಿ ತೇಲುತ್ತ ಬರುವಂಥ
ಬೆಳ್ಳಕ್ಕಿಗಳ ಜಡೆ
ಕೊಂಬೆಗಳ ಜಡೆ
ಮರ ಮರದಿ ಬಳುಕುತಿಹ ಹೂಬಿಟ್ಟ ಬಳ್ಳಿ ಜಡೆ!
ಕಾಡು ಬಯಲಿನ ಹಸುರು ಹಸರದಲಿ ಹರಿ ಹರಿದು
ಮುನ್ನಡೆವ ಹೊಳೆಯ ಜಡೆ!
ಶ್ರೇಣಿ ಶ್ರೇಣಿಗಳಾಗಿ ಹರಿದಿರುವ ಗಿರಿಯ ಜಡೆ!
ಗಿರಿ ಶಿವನ ಶಿರದಿಂದ ಹಬ್ಬಿ ಹಸರಿಸಿ ನಿಂದ
ಕಾನನದ ಹಸುರು ಜಡೆ
ನಕ್ಷತ್ರಗಳ ಮುಡಿದ ನಟ್ಟಿರುಳ ನಭದ ಜಡೆ!
ಮುಂಗಾರು ಮೋಡಗಳು ದಿಕ್ಕುದಿಕ್ಕಿಗೆ ಬಿಚ್ಚಿ
ಹರಡಿರುವ ಮಳೆಯ ಜಡೆ!
ಚಂದ್ರಚೂಡನ
ವ್ಯೋಮಕೇಶನ
ವಿಶ್ವವನೆ ವ್ಯಾಪಿಸುತ ತುಂಬಿರುವ ಜಡೆ
ಗಾನಗಳ ಕಾವ್ಯಗಳ ಶಿಲ್ಪಗಳ ಕಲೆಯ ಜಡೆ
ಎಲ್ಲವೂ ರಮ್ಯವೆಲ್ಲ!
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ
ಕಾಣದಲ್ಲ!

– ಪ್ರೊ. ಜಿ.ಎಸ್.ಶಿವರುದ್ರಪ್ಪ

ಕವಿ, ಕಾವ್ಯ ವಿಚಾರ

ಜಿ.ಎಸ್. ಶಿವರುದ್ರಪ್ಪ ಅಂದರೆ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ 1926, ಫೆಬ್ರವರಿ 17ರಂದು ಜನನ. ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪಿ.ಹೆಚ್.ಡಿ. ಪದವಿ. ಮೈಸೂರು, ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ. ಅಲ್ಲದೆ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು.

ಸಾಮಗಾನ, ಕಾರ್ತೀಕ, ಚೆಲುವು-ಒಲವು, ದೀಪದ ಹೆಜ್ಜೆ, ಅನಾವರಣ, ದೇವ ಶಿಲ್ಪ, ತೆರೆದ ದಾರಿ, ಪ್ರೀತಿ ಇಲ್ಲದ ಮೇಲೆ, ಗೋಡೆ ಮುಂತಾದವು ಇವರ ಕವನ ಸಂಕಲನಗಳು. `ಕರ್ಮಯೋಗಿ' ಸಿದ್ಧರಾಮನನ್ನು ಕುರಿತ ಕಾದಂಬರಿ. ಮಾಸ್ಕೋದಲ್ಲಿ 22 ದಿನ, ಗಂಗೆಯ ಶಿಖರದಲ್ಲಿ, ಅಮೆರಿಕಾದಲ್ಲಿ ಕನ್ನಡಿಗ-ಇವರ ಪ್ರವಾಸಕಥನಗಳು. ಮೀಮಾಂಸಾ ಕ್ಷೇತ್ರದಲ್ಲಿ ಸೌಂದರ್ಯ ಸಮೀಕ್ಷೆ, ಮಹಾಕಾವ್ಯ ಸ್ವರೂಪ, ಕಾವ್ಯಾರ್ಥ ಚಿಂತನೆ ಗಮನಾರ್ಹ ಕೃತಿಗಳು. `ಕಾವ್ಯಾರ್ಥ ಚಿಂತನೆ' ಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಲಭ್ಯವಾಗಿವೆ. ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಸಾಹಿತ್ಯ ಕೃತಿಗಳ ಸಮರ್ಥ ಒಳನೋಟವನ್ನು ಅವರ ವಿಮರ್ಶಾಕೃತಿಗಳಾದ ಪರಿಶೀಲನ, ನವೋದಯ, ಅನಾವರಣ, ಪ್ರತಿಕ್ರಿಯೆ ಮತ್ತು ಬೆಡಗು ಮುಂತಾದ ಕೃತಿಗಳಲ್ಲಿ ಕಾಣಬಹುದು.

ಪ್ರಸ್ತುತ ಕವನವನ್ನು ಚೆಲುವು-ಒಲವು ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ನೂತನವಾದ, ರಮ್ಯವಾದ, ಒಪ್ಪವಾದ ಈ ಕವಿತೆಯಲ್ಲಿ ಅಂಥ ಇಂಥ ಜಡೆ ಎಂಬುದಿಲ್ಲ. ಎಲ್ಲ ರೀತಿಯ ಜಡೆಗಳೂ ಇಲ್ಲಿ ಕಾಣಸಿಗುತ್ತವೆ. ಜಗತ್ತಿನಲ್ಲಿ ಎಷ್ಟು ತರಹದ ಜಡೆಗಳಿವೆಯೋ ಅಷ್ಟೂ ಜಡೆಗಳು ಇಲ್ಲಿ ತಮ್ಮ ವಿವಿಧ

ನಾಮವಿಶೇಷಣಗಳಿಂದ ಮನಸೆಳೆಯುತ್ತವೆ. ಸಾಮಾನ್ಯ ಲಲನೆಯರಿಂದ ಹಿಡಿದು ಸೀತೆ ಪಾಂಚಾಲಿಯರವರೆಗೆ ಎಲ್ಲರ ಬೆನ್ನ ಹಿಂದಿನ ಜಡೆಗಳೂ ಇಲ್ಲಿ ಲಭ್ಯ.

ಬ್ರಹ್ಮಾಂಡದ ಒಂದೊಂದು ಪದರವೂ ಜಗನ್ಮಾತೆಯ ಒಂದೊಂದು ನೀಳ ಜಡೆ ಎಂಬುದನ್ನು ಓದುಗರಲ್ಲಿ ಮಿಂಚಿಸುವ ಈ ಕವಿತೆ ಒಂದು ಉತ್ಕೃಷ್ಟ ಕವಿತೆ.

ಕಠಿಣಪದಗಳ ಅರ್ಥ

ಜಡೆ – Plait

ಲಲನೆ – beautiful woman

ಜೋಲು – sag, to hang down

ಕಾಳಿಂದಿ – black cobra

ಕವಲು – branch

ಚೇಳು – scorpion

ಕೊಂಡಿ – hook, hook shaped plait

ಮೋಟು – thick and short

ಚೋಟು – short

ಹಿಣಿಲು – tangled

ಅಂಟಿಕೊಳ್ಳು – to get sticked

ಗಂಟು ಜಡೆ – knotty plait

ಮುಡಿ – hair

ಕೇದಗೆ – a flower, the fragrant screw-pine

ಬಿಳಲು – ariel root

ಕೆದರು – to scatter

ಇರುಳು	–	night
ಬೆಳ್ಳಕ್ಕಿ	–	the bird indian white heron
ಕೊಂಚೆ	–	a bird
ಬಳ್ಳಿ	–	creaper
ಹಸರಿಸು	–	spread
ಕಾನನ	–	forest
ನಟ್ಟಿರುಳು	–	midnight
ಮುಂಗಾರು	–	moonsoon
ಚಂದ್ರಚೂಡ	–	ಶಿವ, ಶಂಕರ, lord Shiva
ವ್ಯೋಮಕೇಶ	–	ಚಂದ್ರಚೂಡ, lord Shiva

ಅಭ್ಯಾಸಗಳು

I. ಬಿಟ್ಟಿರುವ ಜಾಗವನ್ನು ಭರ್ತಿಮಾಡಿ

ಅ. ಹಾವಿನೊಲು .... ಜಡೆ.

ಆ. ಚೇಳ್ .... ಜಡೆ.

ಇ. .... ಜಡೆ, ಬೊಂಟು ....

ಈ.ಎಣ್ಣೆಕಾಣದೆ .... ಹೆಣೆದ ಜಡೆ.

ಕ. .... ಕಂಪು ಜಡೆ.

ಕೇದಿಗೆಯ .... ಜಡೆ.

ಗ. .... ಕಣ್ಣೀರೊಳು .... ಜಡೆ.

ಚ. ಸಂಜೆಯಲಿ .... ಕೆದರುವ ....

ಕಾಳ ಜಡೆ.

ಚ. ಒಮ್ಮೊಮ್ಮೆ ಮುಗಿಲಲ್ಲಿ ತೇಲುತ್ತ ಬರುವಂಥ

.... ಜಡೆ

...........ಜಡೆ

ಜ. ನಕ್ಷತ್ರಗಳ ಮುಡಿದ ನಟ್ಟಿರುಳ ....

II. ಕೆಳಕಂಡವುಗಳ ಗದ್ಯರೂಪವನ್ನು ಬರೆಯಿರಿ

ಅ. ತಾಯ	ಇ. ಮರದಿ

ಆ. ಬಳುಕುತಿಹ	ಈ. ವ್ಯಾಪಿಸುತ

III. ಕೆಳಕಂಡವುಗಳ ಸ್ವಾರಸ್ಯವನ್ನು ವಿವರಿಸಿ

ಅ. ಅಕ್ಕ ತಂಗಿಯರ ಮುಡಿಯ

ಹಿಡಿದು ನಾನೆಳೆದಂಥ ಜಡೆ

ಆ. "ಕುರುಕುಲ ಜೀವಾಕರ್ಷಕ ಪರಿಣತ" – ಆ

ಪಾಂಚಲಿಯ ಜಡೆ

ಇ. ಗಾನಗಳ ಕಾವ್ಯಗಳ ಶಿಲ್ಪಿಗಳ ಕಲೆಯ ಜಡೆ

ಎಲ್ಲವೂ ರಮ್ಯವೆಲ್ಲ!

IV. ಮಾದರಿಯನ್ನನ್ನುಸರಿಸಿ ಬದಲಾಯಿಸಿ ಬರೆಯಿರಿ

ಮಾದರಿ: ಅತ್ತಿತ್ತ ಹರಿದ ಜಡೆ

ಜಡೆ ಅತ್ತಿತ್ತ ಹರಿಯಿತು.

ಅ. ಸೀತೆಯ ಕಣ್ಣೀರೊಳು ಮಿಂದ ಜಡೆ.

ಆ. ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ ಬೆಳಕು ಜಡೆ.

ಇ. ಮರಮರದಿ ಬಳುಕುತಿಹ ಹೂಬಿಟ್ಟ ಬಳ್ಳಿ ಜಡೆ.

ಈ. ಬೆವರಿನಲಿ ಧೂಳಿನಲಿ ನೆನೆದಂಟಿಕೊಂಡಿರುವ ಗಂಟುಜಡೆ.

V. ವಾಕ್ಯದಲ್ಲಿ ಪ್ರಯೋಗಿಸಿ

ಅ. ಕೇದಗೆ	ಕ. ಎಳೆದಂಥ
ಆ. ಕೊರಳು	ಗ. ಹಸರಿಸು
ಇ. ಮೋಟು	ಚ. ಮೀಯು
ಈ. ಬೆವರು	ಜ. ಕೆದರು

VI. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ

ಅ. ಪಾಂಚಾಲಿಯ ಜಡೆಯ ಮಹತ್ವವೇನು?

ಆ. ಬೆಳಗಿನ ಬೆಳ್ಳನೆಯ ಬೆಳಕ ಜಡೆಯ ಸೌಂದರ್ಯವನ್ನು ವರ್ಣಿಸಿ?

ಇ. ಪ್ರಕೃತಿಯಲ್ಲಿ ಕವಿ ಕಂಡ ಜಡೆಗಳ ವೈವಿಧ್ಯತೆಯೇನು?

ಈ. ಜಡೆಗಳಲ್ಲಿ ಎಷ್ಟು ವಿಧಗಳಿವೆ?

VII. ನಿಮ್ಮ ಮನಸ್ಸನ್ನು ಆಕರ್ಷಿಸಿದ ಜಡೆಯೊಂದನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ

VIII. ಕನ್ನಡಕ್ಕೆ ಭಾಷಾಂತರಿಸಿ

What is poetry?: Though many have tried to define poetry, no one has succeeded in giving a satisfactory definition of it. Poetry seems to elude all attempts to describe it. Yet we should know something about poetry, and learn to cultivate our feeling for it, so that we may gradually come to recognize it, and know when it is present. Before going to the details let us try to understand the connection between poetry and verse.

Verse is the `form' of poetry. Poets generally write their poetry in verse - form. But not all written

verses become poetry. Verse is the body, and poetry is the soul; and a body without a soul is a dead body.

Verse is usually printed in a particular way, so that you can feel its form at a glance. But it is the ear, not the eye, which is the true test of verse: when verse is read aloud it sounds quite different from prose. It is rhythm, rhyme and musicality which make a verse enjoyable.

ಅಕಾರಾದಿ ಪದಸೂಚಿ